ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 14 ಸೋಮವಾರ 2025

ಸಂಪುಟ: 46 | ಸಂಚಿಕೆ: 88 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಡಾ. ಕೆ.ಬಿ. ಗಣಪತಿ [27.12.1939 - 13.07.2025]

ಸಂಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'

ಕೆಬಿಜಿ ಇನ್ನಿಲ್ಲ

ಮೈಸೂರು, ಜು.13(ಬಿಎಲ್‌ಯು)– 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ. ಕಲ್ಯಾಟಂಡ ಬಿ. ಗಣಪತಿ (ಕೆಬಿಜಿ–85) ಅವರು ಭಾನುವಾರ ವಿಧಿವಶರಾದರು. ನೇರ, ನಿಷ್ಠೂರ ಪತ್ರಿಕೋದ್ಯಮದ ಮೂಲಕ ಮನೆ ಮಾತಾಗಿದ್ದ ಕೆಬಿಜಿ ಅವರು ಇನ್ನು ನೆನಪು ಮಾತ್ರ.

ಡಾ.ಕೆ.ಬಿ.ಗಣಪತಿ ಅವರು ಪತ್ನಿ, ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕರಾದ ಕೆ.ಕೆ.ದೇವಮ್ಮ (ರ‍್ಯಾಲಿ ಗಣಪತಿ), ಪುತ್ರರಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರೂ ಹಾಗೂ ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಕೆ.ಜಿ.ವಿಕ್ರಂ ಮುತ್ತಣ್ಣ, ಕಾರ್ಯಕಾರಿ ನಿರ್ದೇಶಕರಾದ ಮಿಕ್ಕಿ ಬೋಪಣ್ಣ, ಸೊಸೆಯಂದಿರಾದ ಶ್ರೀಮತಿ ರೂಪಿಕಾ, ಶ್ರೀಮತಿ ಇಶಾ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

ಕೆಬಿಜಿ ಅವರ ಮೈಸೂರಿನ ಕೆ.ಸಿ. ಬಡಾವಣೆಯ 'ಫೋರ್ಥ್ ಎಸ್ಟೇಟ್' ನಿವಾಸದಲ್ಲಿ ಕೊಡವ ಸಂಪ್ರದಾಯದಂತೆ ಹಲವು ವಿಧಿ–ವಿಧಾನಗಳನ್ನು ನೆರವೇರಿಸಿದ ನಂತರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಬೆಳಗ್ಗೆಯಿಂದ ಸಂಜೆ 4 ಗಂಟೆವರೆಗೂ ಧರ್ಮಗುರುಗಳು, ರಾಜಕಾರಣಿಗಳು, ■9ನೇ ಪುಟಕ್ಕೆ

ಒಳಪುಟಗಳಲ್ಲಿ....

ಗಣಪತಿಯವರ ಅಗಲಿಕೆಗೆ ಸುತ್ತೂರು ಶ್ರೀಗಳ ಸಂತಾಪ



ಸುತ್ತೂರು ಶ್ರೀಗಳು ಡಾ. ಕೆ.ಬಿ. ಗಣಪತಿ ಅವರ ಅಂತಿಮ ದರ್ಶನ ಪಡೆದರು.

ಮೈಸೂರು, ಜು.13(ಎಸ್‌ಪಿಎನ್)– ಮೈಸೂರಿನ ಹಿರಿಯ ಪತ್ರಕರ್ತರು, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿಯವರು ನಮ್ಮನ್ನು ಅಗಲಿರುವುದು ವಿಷಾದನೀಯ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಕೆ.ಬಿ.ಗಣಪತಿಯವರು ಮೂಲತಃ ನ್ಯಾಯವಾದಿಗಳು. ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ವಕೀಲರಾಗಿ ಕಾರ್ಯನಿರ್ವಹಿಸಿದ್ದರು. ಪತ್ರಿಕೋದ್ಯಮದ ಮೇಲೆ ಅತೀವ ಆಸಕ್ತಿ ಇದ್ದ ಪರಿಣಾಮ ವಕೀಲಿಕೆ ಬಿಟ್ಟು ಪತ್ರಿಕಾರಂಗವನ್ನು ಪ್ರವೇಶಿಸಿದರು. ಮುಂಬೈನ 'ಫ್ರಿ ಪ್ರೆಸ್ ಜರ್ನಲ್' ಮತ್ತು 'ದಿ ಇಂಡಿಯನ್ ಎಕ್ಸ್‌ಪ್ರೆಸ್' ದಿನಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವುಳ್ಳವರಾಗಿದ್ದರು.

ಇವರ ಸಂಪಾದಕತ್ವದಲ್ಲಿ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ದಿನಪತ್ರಿಕೆಗಳು ಆರಂಭಗೊಂಡವು. ಮೈಸೂರು ಸುತ್ತಮುತ್ತಲಿನ ಜಿಲ್ಲೆಗಳ ಜನರ ಸಮಸ್ಯೆಗಳಿಗೆ ಧ್ವನಿಯಾಗಿ ಈ ಪತ್ರಿಕೆಗಳು ಸ್ಪಂದಿಸುತ್ತಿವೆ. ಎರಡೂ ಪತ್ರಿಕೆಗಳಲ್ಲಿ ಅಂಕಣ ಬರಹಗಳ ಮೂಲಕ ಪುಸ್ತಕಗಳ ಪರಿಚಯ, ಮೌಲಿಕ ಲೇಖನಗಳು ಹಾಗೂ ಸಮಾಜದ ನ್ಯೂನತೆಗಳನ್ನು ಪ್ರಕಟಿಸುತ್ತಿದ್ದರು. ಕರ್ನಾಟಕ ಮಾಧ್ಯಮ ಅಕಾಡೆಮಿಯ ■9ನೇ ಪುಟಕ್ಕೆ

The Last Word.

The press has gone silent now,
The voice we loved, we've lost somehow.
Not to aging memory, nor fading fame,
But to time, that quiet thief with no name.


KBG, to many just three letters in print,
But to us, the soul of Mysore in every hint.
His pen moved with purpose, never with haste,
Each word weighed, no column a waste.

He didn't just write, he observed, he felt,
He captured our city, as time would melt.
Our hopes and heartaches, our glory and grime,
He inked them all, one line at a time.

Evening coffee won't be the same again,
Without his soulful voice, his gentle disdain.
He spoke when most stayed silent in fear,
He said what we needed, loud and clear.

He gave Mysuru more than just news
He gave it a mirror, a platform, a muse.
Now the newsroom dims, the type falls still,
But his spirit scripts on, with undying will.

Farewell, dear chronicler of our skies,
In the city you loved, your memory lies.
You are gone from the page, but not from our lore,
Mysuru remembers you, forevermore.



Our beloved 'Gandhi'
Sadgati Praptirastu.

SINCE 1948 CYCLE BRAND

ಕೆಬಿಜಿ ಅಪಾರ ವಿದ್ವತ್ತು, ಶಿಸ್ತಿನ ವ್ಯಕ್ತಿತ್ವವುಳ್ಳ ನಾಯಕರು...



ಕೆ.ಬಿ.ಗಣಪತಿ ಅವರಿಗೂ ನನಗೂ 1983 ರಿಂದ ಒಡನಾಟ. ನಾನು ಎಪಿಎಂಸಿ ಉಪಾಧ್ಯಕ್ಷನಾದ ದಿನದಿಂದಲೂ ಅಗಾಧವಾದಂತಹ ಬಾಂಧವ್ಯ. ಅವರಂತೂ ಯಾವಾಗಲೂ ನಾವಿಬ್ಬರೂ ಯಾವತ್ತು ಭೇಟಿ ಮಾಡೋದು... ಮಾತಾಡೋದು... ಎನ್ನುತ್ತಿದ್ದರು. ನನಗೆ ಆಶೀರ್ವಾದ ಮಾಡಿ, ಬೆಂಬಲ ನೀಡಿದವರು. ಯಾವಾಗಲೂ ಜಿ.ಟಿ.ದೇವೇಗೌಡ್ರು ಸ್ಟ್ರಾಂಗ್ ಇದ್ದೀರಿ ಎನ್ನುತ್ತಿದ್ದರು. ಮೈಸೂರು ನಗರದ ಬಗ್ಗೆ, ದೇಶದ ಬಗ್ಗೆ ಅವರಿಗಿದ್ದ ಕಾಳಜಿ ಅಪಾರವಾಗಿತ್ತು. ಭಾರತ ದೇಶದ ಮೇಲಿನ ಭಕ್ತಿ, ಶ್ರದ್ಧೆ ಜೊತೆಗೆ ದೇಶದ ಮಹಾನ್ ವ್ಯಕ್ತಿಗಳ ಪರಿಚಯ ಅವರಿಗಿತ್ತು. ಯಾವತ್ತೂ ಕೂಡ ಮೈಸೂರು ನಗರ ಮತ್ತು ಕೊಡಗಿನ ಬಗ್ಗೆ ಮಮತೆ, ಮಮಕಾರ, ಪ್ರೀತಿ ಹೊಂದಿದ್ದ ಕೆಬಿಜಿ ಅವರು, 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪ್ರಾರಂಭಿಸಿ, ಅತ್ಯಂತ ಶಿಸ್ತು, ಘನತೆ, ಗಾಂಭೀರ್ಯವುಳ್ಳಂತಹ ನಾಯಕರಾಗಿದ್ದರು. ಅವರ ಪುತ್ರರಿಗೆ, ಅವರ ಶ್ರೀಮತಿಯವರಿಗೆ ಜವಾಬ್ದಾರಿ ನೀಡಿದ್ದಾರೆ. ನಿಮ್ಮ ಕ್ಷೇತ್ರದಲ್ಲೇ ಶಾಲೆ ಕಟ್ಟುತ್ತಿದ್ದೇವೆ ಎಂದಿದ್ದರು. ಮರೆಯಲಾಗದ ಅಪಾರವಾದ ಕೊಡುಗೆ ನೀಡಿರುವ ದೊಡ್ಡ ನಾಯಕರು. ಧಾರ್ಮಿಕ ಮತ್ತು ಹಿಂದುತ್ವದ ಭಾವನೆ ಹೊಂದಿದ್ದ ಅವರು, ಮೈಸೂರು ನಗರದ ಬಗ್ಗೆ ಅಪಾರವಾದ ಪ್ರೀತಿ ಇಟ್ಟುಕೊಂಡಿದ್ದರು. ಅಪಾರ ವಿದ್ವತ್ತು, ಶಿಸ್ತಿನ ವ್ಯಕ್ತಿತ್ವವುಳ್ಳ ನಾಯಕರು ನಮ್ಮನ್ನು ಅಗಲಿದ್ದು, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ, ಧೈರ್ಯವನ್ನು ತಾಯಿ ಚಾಮುಂಡೇಶ್ವರಿ ಕೊಡಲಿ ಎಂದು ಪಾರ್ಥಿಸುತ್ತೇನೆ.

- ಜಿ.ಟಿ.ದೇವೇಗೌಡ, ಶಾಸಕರು,



'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕರಾದ ಕೆ.ಬಿ.ಗಣಪತಿ ಅವರ ನಿಧನದ ಸುದ್ದಿ ಕೇಳಿ ತೀವ್ರ ದುಃಖಿತನಾಗಿದ್ದೇನೆ. ತಮ್ಮ ವರದಿಗಾರಿಕೆ ಹಾಗೂ ಅಂಕಣಗಳ ಮೂಲಕ ಪತ್ರಿಕಾ ರಂಗದಲ್ಲಿ ಸುಮಾರು 50 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿರುವ ಅವರು, ಕಾದಂಬರಿಕಾರರಾಗಿಯೂ ಸಾಹಿತ್ಯ ಕ್ಷೇತ್ರದಲ್ಲಿ ಛಾಪು ಮೂಡಿಸಿದ್ದಾರೆ. ಕೆ.ಬಿ.ಗಣಪತಿ ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ಅವರ ಕುಟುಂಬ ಮತ್ತು ಬಂಧುಗಳಿಗೆ ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಓಂ ಶಾಂತಿ. **–ಆರ್.ಅಶೋಕ್, ವಿಪಕ್ಷ ನಾಯಕ**



ಮೈಸೂರಿನ ಹಿರಿಯ ಪತ್ರಕರ್ತ, ಅಂಕಣಕಾರರೂ ಆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ ಅಗಲಿಕೆಯ ಸುದ್ದಿ ತಿಳಿದು ಅತೀವ ದುಃಖಿತನಾಗಿದ್ದೇನೆ. ಗಣಪತಿ ಅವರು ಮುದ್ರಣ ಮಾಧ್ಯಮದಲ್ಲಿ ಛಾಪು ಮೂಡಿಸಿದ್ದರು. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾಗಿ ಕಳೆದ 50 ವರ್ಷಗಳಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದರು. ಅವರ ಅಗಲಿಕೆಯು ಪತ್ರಿಕಾರಂಗಕ್ಕೆ ತುಂಬಲಾರದ ನಷ್ಟ. ಮೃತರ ಆತ್ಮಕ್ಕೆ ಸದ್ಗತಿ ಕೋರುತ್ತೇನೆ. ದುಃಖತಪ್ತ ಕುಟುಂಬವರ್ಗ, ಓದುಗ ಅಭಿಮಾನಿಗಳು ಹಾಗೂ ಪತ್ರಕರ್ತಮಿತ್ರ ಬಳಗಕ್ಕೆ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವೆ. **–ಡಾ.ಜಿ.ಪರಮೇಶ್ವರ್, ಗೃಹ ಸಚಿವರು**



ಡಾ.ಕೆ.ಬಿ.ಗಣಪತಿಯವರು, ಕನ್ನಡ ಪತ್ರಿಕೋದ್ಯಮದ ಅಸ್ಮಿತೆಯಾಗಿ ಮೈಸೂರು ಮಾತ್ರವಲ್ಲದೇ ಕರ್ನಾಟಕಕ್ಕೆ ಬಹಳ ಉತ್ತಮ ಸಂಪ್ರದಾಯವನ್ನು ಹಾಕಿ ಕೊಟ್ಟಿದ್ದಾರೆ. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನಲ್ಲಿ ಕಲಿತ ಪತ್ರಕರ್ತರು ರಾಜ್ಯ, ರಾಷ್ಟ್ರಮಟ್ಟದ ಪತ್ರಿಕೆಗಳಿಗೆ ಹೋಗಿದ್ದಾರೆ. ಬೇರೆ ಬೇರೆ ಉದ್ಯಮಕ್ಕೂ ತೆರಳಿದ್ದಾರೆ. ನಾನು ವೃತ್ತಿ ಜೀವನ ಆರಂಭಿಸಿದ್ದೇ ಪತ್ರಕರ್ತನಾಗಿ. ಕೆಬಿಜಿ ಅವರು ನಮ್ಮ ಪಾಲಿಗೆ ಮಹಾನ್ ಚೇತನ. ಅವರ ಪತ್ನಿ ಅವರು ಪ್ರಾಧ್ಯಾಪಕರಾಗಿ ಪಾಠ ಕಲಿಸಿದ್ದರು. ಆದರೆ ಗಣಪತಿ ಅವರು ಜೀವನದ ಪಾಠ ಕಲಿಸಿದ ಗುರುಗಳು. ಇಂದು ನಾನು ಡಿಸಿ ಆಗಿ, ಮೇಲಾಗಿ ಉತ್ತಮ ಪ್ರಜೆ ಆಗಲು ಅವರೇ ಕಾರಣ. ಪತ್ರಿಕೋದ್ಯಮದ ನೈತಿಕತೆ ಕಲಿಸಿದರು. ಸಂಸ್ಥೆಯ ಯಾವುದೇ ಸಿಬ್ಬಂದಿಗೂ ಸಂಬಳದ ಸಮಸ್ಯೆ ಬಾರದಂತೆ ನೋಡಿಕೊಂಡಿದ್ದಾರೆ. ತುಂಬು ಜೀವನ ನಡೆಸಿದ್ದಾರೆ. ಆದರೆ, ಪತ್ರಿಕೋದ್ಯಮ ಕ್ಷೇತ್ರಕ್ಕೆ ತುಂಬ ನಷ್ಟವಾಗಿದೆ. **– ಡಾ.ಎಂ.ಆರ್.ರವಿ, ಕೋಲಾರ ಜಿಲ್ಲಾಧಿಕಾರಿ**



ಡಾ. ಕೆ.ಬಿ.ಗಣಪತಿ ಅವರು ಸಾಮಾಜಿಕ ಚಟುವಟಿಕೆ, ರಾಷ್ಟ್ರೀಯ ವಿಚಾರಧಾರೆಗಳಿಗೆ ಆಧಾರಸ್ತಂಭವಾಗಿದ್ದರು. ವಿಶೇಷ ಕಾರ್ಯಾಗಾರಗಳು, ಚಟುವಟಿಕೆಗಳಿಗೆ ಸದಾ ಬೆಂಬಲವಾಗಿದ್ದರು. ಯಾವುದೇ ತರದ ರಾಷ್ಟ್ರೀಯ ವಿಚಾರಗಳಿಗೂ ಸಾಥ್ ನೀಡಿದ್ದರು. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಶಕ್ತಿಯಾದರೆ, ಕೆಬಿಜಿ ಅವರು ಮಹಾ ಶಕ್ತಿಯಾಗಿದ್ದರು. ಅವರ ಅಗಲಿಕೆ ಸಮಾಜಕ್ಕೆ ಬಹುದೊಡ್ಡ ನಷ್ಟ.

–ಚಕ್ರವರ್ತಿ ಸೂಲಿಬೆಲೆ, ಯುವ ಬ್ರಿಗೇಡ್, ಅಧ್ಯಕ್ಷ



ಮೈಸೂರಿಗರ ಮಿತ್ರರಾಗಿದ್ದ ಡಾ.ಕೆ.ಬಿ.ಗಣಪತಿ(ಕೆಬಿಜಿ)ಅವರ ನಿಧನ ಪತ್ರಿಕಾ ರಂಗಕ್ಕೆ ತುಂಬಲಾರದ ನಷ್ಟ, ಮೈಸೂರು ನಗರ, ಗ್ರಾಮೀಣ ಹಾಗೂ ಹಳೇ ಮೈಸೂರು ಪ್ರಾಂತ್ಯದಲ್ಲಿ ಯಾವುದೇ ಸ್ಥಳೀಯ ಪತ್ರಿಕೆಗಳು, ಇಂಗ್ಲಿಷ್ ಪತ್ರಿಕೆಗಳು ಇಲ್ಲದಂತಹ ಸಂದರ್ಭದಲ್ಲಿ ಬಹಳಷ್ಟು ಶ್ರಮವಹಿಸಿ, ಏಳು ಬೀಳುಗಳನ್ನು ಕಂಡು, ಸ್ಥಳೀಯ ಸುದ್ದಿಗಳನ್ನು ಎಲ್ಲರಿಗೂ ನೀಡುತ್ತಾ ಸತ್ಯ ನಿಷ್ಠೂರವಾದ ವಿಷಯಗಳನ್ನು ಯಾವುದೇ ಮುಲಾಜಿಗೆ ಒಳಪಡದೆ ಸಮಾಜಕ್ಕೆ ಕೊಡುತ್ತಾ ಸಮಾಜದಲ್ಲಿ ನಡೆಯುವ ಸಮಾಜ ವಿರೋಧಿ ಚಟುವಟಿಕೆಗಳನ್ನು, ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಶಕ್ತಿಗಳ ವಿರುದ್ಧ ಬಡಿದೆಚ್ಚರಿಸಿ ಸರ್ಕಾರ ಆಡಳಿತದ ವೈಖರಿಯನ್ನು ನಿಷ್ಠೂರವಾಗಿ ಪ್ರಕಟಿಸುತ್ತಾ ಎಚ್ಚರಿಸುವ ಮೂಲಕ ಸಮಾಜ ಮತ್ತು ರಾಜ್ಯದ ಸರ್ವತೋಮುಖ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡು ಪತ್ರಿಕಾ ಧರ್ಮವನ್ನು ಉಳಿಸಿಕೊಂಡು ಮೈಸೂರಿಗರಿಗೆ ಮಿತ್ರರೇ ಆಗಿದ್ದ ಕೆ.ಬಿ. ಗಣಪತಿ ಅವರ ನಿಧನ ಪತ್ರಿಕಾ ಲೋಕಕ್ಕೆ ತುಂಬಲಾರದ ನಷ್ಟ, ಅವರ ಆತ್ಮಕ್ಕೆ ಶಾಂತಿ ದೊರಕಲಿ. ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಸರ್ವೇ ನಂ.4 ವ್ಯಾಪ್ತಿಯಲ್ಲಿ ಅವರ ನಿವಾಸ ಸಹ ಇದೆ. ಆ ಸಂದರ್ಭದಲ್ಲಿ ಅದನ್ನು ಸಮಸ್ಯೆಯಿಂದ ಮುಕ್ತಿಗೊಳಿಸಲು ಸಲಹೆ ಸಹ ನೀಡಿದ್ದರು. ಅದರಂತೆ ನಿರಂತರ ಹೋರಾಟದ ಮೂಲಕ ಸಚಿವ ಸಂಪುಟಕ್ಕೆ ತಂದು ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಬಗೆಹರಿಸಿದ್ದಕ್ಕಾಗಿ ತಾವೇ ಖುದ್ದು ಕರೆ ಮಾಡಿ ಧನ್ಯವಾದಗಳನ್ನು ತಿಳಿಸಿದ್ದಾರೆ. **–ಎಂ.ಕೆ.ಸೋಮಶೇಖರ್, ಮಾಜಿ ಶಾಸಕ**

ಡಾ.ಕೆ.ಬಿ.ಗಣಪತಿ ಅವರ ನಿಧನ ಪತ್ರಿಕೋದ್ಯಮಕ್ಕೆ ತುಂಬಲಾರದ ನಷ್ಟ, ಕೆ.ಬಿ.ಗಣಪತಿ ಅವರು ಕಾಲವಾಗಿ ಸಾಂಸ್ಕೃತಿಕ ನಗರಿ ಮೈಸೂರಿನ ಪತ್ರಿಕೋದ್ಯಮ ಬಡವಾಗಿದೆ. ಐದು ದಶಕಗಳ ಕಾಲ ಪತ್ರಕರ್ತರಾಗಿ ಕೆ.ಬಿ.ಗಣಪತಿ ಅವರ ಸೇವೆ ಗಣನೀಯವಾದದ್ದು. ಸ್ಥಳೀಯ ಮಟ್ಟದ ಪತ್ರಿಕೆಯನ್ನು ರಾಜ್ಯ ಮಟ್ಟದ ಪತ್ರಿಕೆ ಸ್ಥಾನಕ್ಕೆ ಬೆಳೆಸುವಲ್ಲಿ ಅವರದು ಅವಿರತ ಶ್ರಮ ಮತ್ತು ತಮ್ಮ ಕಾರ್ಯದಲ್ಲಿ ಯಶಸ್ವಿಯಾದವರು. ಛೂಮಂತ್ರ ಅಂಕಣ ಬರಹಗಳ ಮೂಲಕ ಸಮಾಜವನ್ನು ಎಚ್ಚರಿಸುತ್ತಿದ್ದರು. ಮೈಸೂರಿನ ಪಾರಂಪರಿಕತೆ ಮತ್ತು ಚಾರಿತ್ರಿಕ ಹಿರಿಮೆಯ ಬಗ್ಗೆ ಅಪಾರ ಗೌರವ ಹೊಂದಿದ್ದರು. ರಾಜಕಾರಣ ಸಹಿತವಾಗಿ ಎಲ್ಲ ವಿಚಾರಗಳ ಬಗ್ಗೆಯೂ ನಿರ್ಭಿಡೆಯಾಗಿ ಬರೆಯುತ್ತಿದ್ದರು. ಒಬ್ಬ ಹಿರಿಯ ಮಾರ್ಗದರ್ಶಕನ ನಿಧನದಿಂದ ಮೈಸೂರಿನ ಸಾಂಸ್ಕೃತಿಕ ಶೈಕ್ಷಣಿಕ ಕ್ಷೇತ್ರಕ್ಕೆ ಭಾರಿ ನಷ್ಟವಾಗಿದೆ.

–ಕೆ.ಮಹೇಶ್, ವಕ್ತಾರ, ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ

ಹಿರಿಯರು, ಸಾಮಾಜಿಕ, ಪತ್ರಿಕೋದ್ಯಮ ಹಾಗೂ ಸಾಂಸ್ಕೃತಿಕ ಲೋಕದ ಮೂಲಕ ಮೈಸೂರು ಮಾತ್ರವಲ್ಲದೇ ವಿಶ್ವಕ್ಕೆ ಉತ್ತಮ ಸಂದೇಶ ನೀಡಿದ್ದಾರೆ. ರಾಜಕೀಯವಾಗಿಯೂ ಮಾರ್ಗದರ್ಶನ, ತಿಳುವಳಿಕೆ ನೀಡಿದ್ದಾರೆ. ಅವರು ಇಲ್ಲದಿದ್ದರೂ ಅವರ ನುಡಿಗಳು ಆದರ್ಶ. **–ಮೋದಾಮಣಿ, ಮಾಜಿ ಮೇಯರ್**

ಗಣಪತಿ ಅವರು ಪತ್ರಿಕೋದ್ಯಮದ ದೊಡ್ಡ ಕೊಂಡಿಯಾಗಿದ್ದು, ಅವರ ನಿಧನ ತುಂಬಲಾರದ ನಷ್ಟ, ಪತ್ರಿಕೋದ್ಯಮದ ಚಿನ್ನದ ಗಣಿಯನ್ನು ಕಳೆದುಕೊಂಡಿದ್ದೇವೆ. ಅವರು ನಡೆದಾಡುವ ವಿಶ್ವಕೋಶವಾಗಿ ನಾನು ಮೇಯರ್ ಆಗಿದ್ದ ಅವಧಿಯಲ್ಲಿ ಸಲಹೆ ನೀಡುವ ಮೂಲಕ ಮೈಸೂರಿಗೆ ಕೊಡುಗೆ ನೀಡಿದ್ದಾರೆ.

–ಪುಷ್ಪಲತಾ ಚಿಕ್ಕಣ್ಣ, ಮಾಜಿ ಮೇಯರ್

'ಮೈಸೂರು ಮಿತ್ರ' ಕನ್ನಡ ದಿನಪತ್ರಿಕೆ, ಸ್ಟಾರ್ ಆಫ್ ಮೈಸೂರ್' ಆಂಗ್ಲ ದಿನಪತ್ರಿಕೆ ಎಲ್ಲಾ ವರ್ಗದ ಜನರನ್ನು ಆಕರ್ಷಿಸುವ ಪತ್ರಿಕೆಯಾಗಿದ್ದು, ಇದರಲ್ಲಿ ಬರುವ ಸುದ್ದಿಗಳು ಮೈಸೂರಿಗರ ಗಮನ ಸೆಳೆದು ಎಲ್ಲರ ಮನೆಯ ಮಿತ್ರ 'ಮೈಸೂರು ಮಿತ್ರ' ಹಾಗೂ ಎಲ್ಲಾ ವರ್ತಕರಿಗೆ 'ಸ್ಟಾರ್ ಆಫ್ ಮೈಸೂರ್' ಅಚ್ಚುಮೆಚ್ಚು. ಈ ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾಗಿದ್ದ ಕೆ.ಬಿ.ಗಣಪತಿ ಅವರ ಅಗಲಿಕೆ ನಾಡಿಗೆ ತುಂಬಲಾರದ ನಷ್ಟ

–ನಿಂಗರಾಜು ಚಿತ್ತಣ್ಣವರ್, ಪ್ರಕಾಶಕ, ಚಿಂತನ ಚಿತ್ತಾರ

ಡಾ.ಕೆ.ಬಿ.ಗಣಪತಿ ಅವರ ಸಮಾಜ ಸೇವೆ ಸ್ತುತ್ಯಾರ್ಹ



ಮೈಸೂರು ನಗರದಲ್ಲಿ ಪತ್ರಕರ್ತರು ನಡೆಸಿದ ಪ್ರತಿಭಟನಾ ಮೆರವಣಿಗೆಯೊಂದರಲ್ಲಿ ಸಾಗುತ್ತಿರುವ ಯುವ ಕೆಬಿಜಿ (ಗಡ್ಡಧಾರಿ).

ಶಾಲೆಗಳ ಅಭಿವೃದ್ಧಿ

● ಬನ್ನಿಮಂಟಪದ ಹುಡ್ಕೊ ಕಾಲೋನಿಯಲ್ಲಿರುವ ಸರ್ಕಾರಿ ಕನ್ನಡ–ಉರ್ದು ಪ್ರೌಢಶಾಲೆಯನ್ನು ದತ್ತು ತೆಗೆದುಕೊಂಡು ಶಾಲಾ ಕಾಂಪೌಂಡ್ ಹಾಗೂ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಿಕೊಡಲಾಗಿತ್ತು.

● ಕೆಳ–ಮಧ್ಯಮ ವರ್ಗದವರೇ ಅಧಿಕ ಸಂಖ್ಯೆಯಲ್ಲಿ ವಾಸಿಸುವ ವಿದ್ಯಾಶಂಕರ ಲೇಔಟ್‌ನಲ್ಲಿರುವ ಕೊಡಗು ಮಾದರಿ ಶಾಲೆಯ ಪೋಷಕರಾಗಿ, ಗಣಪತಿ ಅವರು ವೈಯಕ್ತಿಕವಾಗಿ 40 ಲಕ್ಷ ರೂ.ಗಳಿಗೂ ಹೆಚ್ಚು ದೇಣಿಗೆ ಸಂಗ್ರಹಿಸಿ ಕೊಡುವ ಮೂಲಕ ಅದರ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ್ದಾರೆ.

ಡಾ.ಕೆ.ಬಿ.ಗಣಪತಿ ಅವರು ಭಾರತೀಯ ವಿದ್ಯಾಭವನದ (ಬಿವಿಬಿ) ಮೈಸೂರು ಕೇಂದ್ರದ ಅಧ್ಯಕ್ಷರಾಗಿದ್ದರು. ಅವರು ಅದರ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಮೈಸೂರಿನ ಕೊಡವ ಸಮಾಜದ ಉಪಾಧ್ಯಕ್ಷರಾಗಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ (ಎಂಡಿಜೆಎ) ಉಪಾಧ್ಯಕ್ಷರಾಗಿ ಮತ್ತು ಕರ್ನಾಟಕ ಪತ್ರಿಕಾ ಅಕಾಡೆಮಿಯ ಸದಸ್ಯರಾಗಿ (1993–1995)ಯೂ ಸೇವೆ ಸಲ್ಲಿಸಿದ್ದಾರೆ.

ನಿಧಿ ಸಂಗ್ರಹ

● 1999ರಲ್ಲಿ ಕಾರ್ಗಿಲ್ ಯುದ್ಧದ ಸಂತ್ರಸ್ತರಿಗೆ ನಿಧಿ ಸಂಗ್ರಹಣೆಯಲ್ಲಿ ಎರಡೂ ಪತ್ರಿಕೆಗಳೊಂದಿಗೆ ಅವರು ಸಕ್ರಿಯರಾಗಿದ್ದರು.

● 2001ರಲ್ಲಿ ಗುಜರಾತ್ ಭೂಕಂಪ ಸಂತ್ರಸ್ತರಿಗೆ ರೋಟರಿ ಮೈಸೂರು ಸಹಯೋಗದಲ್ಲಿ ಸುಮಾರು 12 ಲಕ್ಷ ರೂ. ನಿಧಿ ಸಂಗ್ರಹಿಸಿದ್ದರು.

● 2003ರಲ್ಲಿ ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಭೂಕಂಪ ಸಂತ್ರಸ್ತರಿಗೆ ರೋಟರಿ ಮೈಸೂರು ಸಹಯೋಗದಲ್ಲಿ ಪರಿಹಾರ ನಿಧಿಯಾಗಿ 3.80 ಲಕ್ಷ ರೂ.ಗಳನ್ನು ಸಂಗ್ರಹಿಸಿದ್ದರು.

● 2004ರಲ್ಲಿ ತಮಿಳುನಾಡಿನಲ್ಲಿ ಸಂಭವಿಸಿದ ಸುನಾಮಿಯಲ್ಲಿ ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾದವರಿಗೆ ಸುತ್ತೂರು ಶ್ರೀಗಳ ನೇತೃತ್ವದಲ್ಲಿ ವಿವಿಧ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ 74 ಲಕ್ಷ ರೂಪಾಯಿಗಳನ್ನು ಗಣಪತಿ ಅವರು ತಮ್ಮ ಪತ್ರಿಕೆಗಳ ಮೂಲಕ ಸಂಗ್ರಹಿಸಿ ಮೈಸೂರು ನಾಗರಿಕರ ವೇದಿಕೆಗೆ ಹಸ್ತಾಂತರಿಸಿದ್ದರು.

● ಬನ್ನಿಮಂಟಪದಲ್ಲಿ ಮದರ್ ತೆರೇಸಾ ಮಿಷನ್ ಚಾರಿಟೀಸ್ ನಿರ್ವಹಿಸುತ್ತಿರುವ ಲಿಟಲ್ ಸಿಸ್ಟರ್ಸ್ ಆಫ್ ದಿ ಪೂರ್ ನಡೆಸುತ್ತಿರುವ ನರ್ಸಿಂಗ್ ಹೋಂ ಮತ್ತು ಮಾನಸಿಕ ಅಸ್ವಸ್ಥರಿಗಾಗಿ ಪುನರ್ವಸತಿ ಕೇಂದ್ರಕ್ಕೆ 'ಸ್ಟಾರ್ ಆಫ್ ಮೈಸೂರ್' ಮಾಸಿಕ ಆರ್ಥಿಕ ಸಹಾಯವನ್ನು ನೀಡುತ್ತಿದೆ ಮತ್ತು ಪ್ರತಿಭಾನ್ವಿತ ಮಕ್ಕಳಿಗೆ ವಿತರಿಸಲು ದೀನ ಬಂಧು ಚಾರಿಟೇಬಲ್ ಟ್ರಸ್ಟ್‌ಗೆ ವಾರ್ಷಿಕವಾಗಿ 10,000 ರೂಪಾಯಿಗಳನ್ನು ನೀಡುತ್ತಿದೆ.

● ಶ್ರವಣದೋಷವುಳ್ಳ ಮಗುವಿಗೆ ಕಾಕ್ಲಿಯರ್ ಇಂಪ್ಲಾಂಟ್ ಯಶಸ್ವಿ ಶಸ್ತ್ರಚಿಕಿತ್ಸೆಗಾಗಿ ತಮ್ಮೆರಡು ಪತ್ರಿಕೆಗಳ ಮೂಲಕ ರೂ. 7.5 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ಧನಸಹಾಯ ಮಾಡಿದರು.

● ಗಣಪತಿಯವರು ಮೈಸೂರು ವಿಶ್ವವಿದ್ಯಾಲಯದಲ್ಲಿ 'ಸ್ಟಾರ್ ಆಫ್ ಮೈಸೂರ್ ಸಿಲ್ವರ್ ಜುಬಿಲಿ ಎಂಡೋಮೆಂಟ್ ಪದಕ'ವನ್ನು ಸ್ಥಾಪಿಸಿದ್ದರು. ಪತ್ರಿಕೋದ್ಯಮದಲ್ಲಿ ಎಂಎ ಪರೀಕ್ಷೆಯಲ್ಲಿ ಸಂಪೂರ್ಣ ಕೋರ್ಸ್‌ನಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸುವ ಮೂಲಕ ಉತ್ತೀರ್ಣರಾದ ಅಭ್ಯರ್ಥಿಗೆ ಚಿನ್ನದ ಪದಕವನ್ನು ನೀಡಲಾಗುತ್ತದೆ. ಆದಾಗ್ಯೂ, ಅಭ್ಯರ್ಥಿಯು ಇಂಗ್ಲಿಷ್ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

ಮೈಸೂರಿನ ಏಳಿಗೆಗೆ ಗಣಪತಿಯವರ ಕೊಡುಗೆ ಅನನ್ಯ

ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್

ಮೈಸೂರು, ಜು.13– 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ ನಿಧನಕ್ಕೆ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಸಂತಾಪ ಸೂಚಿಸಿದ್ದಾರೆ.

ಪತ್ರಿಕಾ ರಂಗಕ್ಕೆ ಹೊಸ ಆಯಾಮವನ್ನೇ ಸೃಷ್ಟಿಸಿದ ಕೆ.ಬಿ.ಗಣಪತಿಯವರ ಪರಿಚಯ ನನ್ನ ವಿದ್ಯಾರ್ಥಿ ಜೀವನದಲ್ಲಿಯೇ ಇತ್ತು. ಒಮ್ಮೆ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯನಾಗಿ ಅವರ ಕಚೇರಿಗೆ ಭೇಟಿ ನೀಡಿ ಉನ್ನತ ಶಿಕ್ಷಣ ಕ್ಷೇತ್ರದ ಬಗ್ಗೆ ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ, ಅದರಿಂದಾಗುವ ಆರ್ಥಿಕ ಹೊರೆ ಹಾಗೂ



ಕುಲಪತಿಗಳ ನೇಮಕ ಯಾವ ರೀತಿ ನಡೆಯುತ್ತದೆ ಎಂಬುದನ್ನು ಲೋಕಾಭಿಮಾನವಾಗಿ ಅವರ ಜೊತೆ ಮಾತನಾಡಿದ್ದೆ. ಅದು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯಲ್ಲಿ ಯಥಾವತ್ತಾಗಿ ಸಂದರ್ಶನ ರೂಪದಲ್ಲಿ ಪ್ರಕಟಗೊಂಡಿತು. ಬಹಳ ಕುತೂಹಲದಿಂದ ವಿಷಯವನ್ನು ಸಂಗ್ರಹಿಸುವ ಅವರ ಮನೋಭಾವ ಮೆಚ್ಚುವಂಥದ್ದು. ಮೈಸೂರು ನಗರದ ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸೇವೆ ಸಲ್ಲಿಸಿದ್ದಾರೆ. ಅವರು ಭಾಗವಹಿಸುತ್ತಿದ್ದ ಸಭೆ ಸಮಾರಂಭಗಳಿಗೆ ಒಂದು ಗಾಂಭೀರ್ಯವನ್ನು ತಂದು ಕೊಡುತ್ತಿದ್ದರು. ಮೈಸೂರು ನಗರದ ಏಳಿಗೆಗೆ ಕೆ.ಬಿ.ಗಣಪತಿಯವರ ಕೊಡುಗೆ ಅನನ್ಯವಾದುದು. ತಮ್ಮ ಪತ್ರಿಕೆಯ ಹೆಸರಿನಲ್ಲೇ ಮೈಸೂರನ್ನು ಪ್ರತಿನಿತ್ಯ ನೆನೆಯುವಂತೆ ಮಾಡಿದ್ದು ಕೆ.ಬಿ.ಗಣಪತಿಯವರ ಸಾಧನೆ. ಕೆ.ಬಿ.ಗಣಪತಿ ಅವರು ನಿಧನ ಕರ್ನಾಟಕದ ಪತ್ರಿಕಾ ರಂಗಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ತಿಳಿಸಿದ್ದಾರೆ.

ಪರಿಸರ ಪತ್ರಿಕೋದ್ಯಮದಲ್ಲಿ ಕೆಬಿಜಿ ಅವರದು ಎತ್ತಿದ ಕೈ!

ಮೈಸೂರು, ಜು.13(ಎಂಟಿವೈ)– ಪರಿಸರ, ಅರಣ್ಯ ಸಂರಕ್ಷಣೆಗೆ ಆದ್ಯತೆ ನೀಡುವ ವರದಿ ಪ್ರಕಟಿಸುವ ಮೂಲಕ ಪರಿಸರ ಪತ್ರಿಕೋದ್ಯಮಕ್ಕೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಸಂಸ್ಥಾಪಕ ಡಾ.ಕೆ.ಬಿ.ಗಣಪತಿ ಅವರು ನೀಡಿದ ಕೊಡುಗೆ ಅಪಾರ ಎಂದು ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಶನ್ ಮುಖ್ಯಸ್ಥ ರಾಜಕುಮಾರ್ ದೇವರಾಜ ಅರಸ್ ಸ್ಮರಿಸಿದ್ದಾರೆ.



ರಾಜಕುಮಾರ್ ದೇವರಾಜ ಅರಸ್

ಹಳೆ ಮೈಸೂರು ಭಾಗದ ಅರಣ್ಯ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕೆಂಬ ಅಭಿಪ್ರಾಯ ಸಾಕಷ್ಟು ಬಾರಿ ವ್ಯಕ್ತಪಡಿಸಿದ್ದಾರೆ. ಅದರಲ್ಲೂ ಚಾಮಲಾಪುರದಲ್ಲಿ ಉಷ್ಣ ವಿದ್ಯುತ್ ಸ್ಥಾವರ ನಿರ್ಮಾಣ ಮಾಡಲು ಮುಂದಾಗಿದ್ದ ಅಂದಿನ ಸರ್ಕಾರದ ವಿರುದ್ಧ ಕೆಬಿಜಿ ಅವರು ಸಮರ ಸಾರಿದ್ದರು. ಸ್ಥಾವರ ಸ್ಥಾಪನೆ ವಿರೋಧಿಸಿ ಸಂಘ–ಸಂಸ್ಥೆಗಳು ನಡೆಸಿದ ಹೋರಾಟ ಬೆಂಬಲಿಸಿ ಎರಡೂ ಪತ್ರಿಕೆಗಳಲ್ಲಿ ಪರಿಣಾಮಕಾರಿ ವರದಿ ಪ್ರಕಟಿಸಿ, ಸರ್ಕಾರದ ಗಮನ ಸೆಳೆದಿದ್ದರು. ಅಲ್ಲದೆ, ನನ್ನೊಂದಿಗೆ ಚಾಮಲಾಪುರಕ್ಕೆ ಭೇಟಿ ನೀಡಿ, ಬೆಟ್ಟದ ಮೇಲಿಂದ ಫಲವತ್ತಾದ ಕೃಷಿ ಭೂಮಿಯನ್ನು ಕಂಡು ಯಾವುದೇ ಕಾರಣಕ್ಕೂ ಈ ಭಾಗದಲ್ಲಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆ ಆಗುವುದೇ ಬೇಡ ಎಂದು ದಿಟ್ಟ ನಿಲುವು ಪ್ರದರ್ಶಿಸಿದ್ದರು ಎಂದು ಸ್ಮರಿಸಿದರು.

ಬಂಡೀಪುರದಲ್ಲಿ ರಾತ್ರಿ ವಾಹನ ಸಂಚಾರ ನಿಷೇಧಕ್ಕೂ ಬೆಂಬಲ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ಎರಡು ರಾಷ್ಟ್ರೀಯ ಹೆದ್ದಾರಿಯಲ್ಲಿ ರಾತ್ರಿ ವೇಳೆ ವಾಹನ ಸಂಚಾರ ನಿರ್ಬಂಧಿಸುವ ಹೋರಾಟಕ್ಕೂ ಕೆಬಿಜಿ ಬೆಂಬಲ ನೀಡಿದ್ದರು. ನ್ಯಾಯಾಲಯದಲ್ಲಿ ನಡೆಸುತ್ತಿದ್ದ ಹೋರಾಟದ ಪ್ರತಿ ಹೆಜ್ಜೆಯ ಬಗ್ಗೆ ಮಾಹಿತಿ ಪಡೆಯುತ್ತಿದ್ದರು. ಅಲ್ಲದೆ, ನ್ಯಾಯಾಲಯ ಬಂಡೀಪುರದ ರಸ್ತೆಯಲ್ಲಿ ರಾತ್ರಿ ವಾಹನ ಸಂಚಾರ ನಿಷೇಧಿಸುವ ಆದೇಶ ಪ್ರಕಟಿಸುತ್ತಿದ್ದಂತೆ ನಾನು ಕೆಬಿಜಿ ಅವರಿಗೆ ತಿಳಿಸಿದ್ದೆ. ಆಗ ಅವರು 'ಕಾಡು ಉಳಿಸಬೇಕು. ಅದಕ್ಕಾಗಿ ಪರಿಣಾಮಕಾರಿ ಹೋರಾಟ ಮಾಡಬೇಕು' ಎಂದಿದ್ದರು.

ಲಿಂಗಾಂಬುದಿ ಕೆರೆ ಮಧ್ಯೆ ರಸ್ತೆ: ಮೈಸೂರಿನ ಲಿಂಗಾಂಬುದಿ ಕೆರೆ ನಡುವೆ ರಸ್ತೆ ನಿರ್ಮಿಸಿ, ಅದಕ್ಕೆ ಡೂಮ್ ಮಾದರಿಯಲ್ಲಿ ಚಾವಣಿ ನಿರ್ಮಿಸುವ ಯೋಜನೆ ಕೈಗೆತ್ತಿಕೊಳ್ಳಲು ಈ ಹಿಂದೆ ನಿರ್ಧರಿಸಲಾಗಿತ್ತು. ಆದರೆ, ರಸ್ತೆ ಕೆರೆ ಮಧ್ಯೆ ನಿರ್ಮಿಸಿದರೆ ಅಲ್ಲಿನ ಪರಿಸರ ವೈವಿಧ್ಯತೆಗೆ ಧಕ್ಕೆಯಾಗುತ್ತದೆ ಎಂದು ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸಿದ್ದರು. ಸ್ಥಳಕ್ಕೆ ಭೇಟಿ ನೀಡಿದ್ದ ಡಾ.ಗಣಪತಿ ಅವರು, ಕೆರೆ ಮಧ್ಯೆ ರಸ್ತೆ ನಿರ್ಮಿಸುವುದು ಸೂಕ್ತವಲ್ಲ. ಕೆರೆ ಏರಿ ಮೇಲೆ ಹೋದರೆ ತೊಂದರೆಯೇನು ಇಲ್ಲ ಎಂದು ಪ್ರತಿಪಾದಿಸಿದ್ದರು. ಕೊನೆಗೆ ಕೆರೆ ಮಧ್ಯೆ ರಸ್ತೆ ನಿರ್ಮಾಣದ ಯೋಜನೆ ಕೈ ಬಿಡಲಾಯಿತು ಎಂದು ವಿವರಿಸಿದರು.


ಕೆಬಿಜಿಯವರು ಸಾಮಾಜಿಕ ಜವಾಬ್ದಾರಿ ಬರವಣಿಗೆಯ ಶಾಶ್ವತ ಸಂಪಾದಕರು

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್



ಮೈಸೂರು, ಜು.13– ಹಳೆ ಮೈಸೂರು ಭಾಗದಲ್ಲಿ ಸಣ್ಣ ಪತ್ರಿಕೆಗಳನ್ನು ಓದುವ ಒಂದು ದೊಡ್ಡ ಮಟ್ಟದ ಮೌನ ಚಳುವಳಿಯನ್ನು ಪತ್ರಿಕೆಯ ಮೂಲಕವೇ ಹುಟ್ಟು ಹಾಕಿದ ಕೀರ್ತಿ 'ಮೈಸೂರು ಮಿತ್ರ' ಪತ್ರಿಕೆಗೆ ಸಲ್ಲುತ್ತದೆ. ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ತಿಳಿಸಿದ್ದಾರೆ. ಕೆ.ಬಿ. ಗಣಪತಿ ಅವರ ನಿಧನ ಪತ್ರಿಕಾಲೋಕಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿದೆ. ಮೂಲತಃ ಇವರು ವಕೀಲರಾದರೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳನ್ನು ಪ್ರಾರಂಭಿಸಿ ಸುದ್ದಿ ಲೋಕದಲ್ಲಿ ತನ್ನದೇ ಛಾಪು ಮೂಡಿಸಿದರು. ಇವರು ಹಲವಾರು ಕಾದಂಬರಿಗಳನ್ನು ರಚಿಸಿ ಬಹುಮುಖ ಪ್ರತಿಭೆಯಾಗಿ ಗುರುತಿಸಿಕೊಂಡಿದ್ದರು. ನಿಷ್ಠುರ, ಬದ್ಧತೆ, ರಾಜಿಯಾಗದ ಮನೋಧರ್ಮ, ಅಪ್ಪಟ ದೇಶಪ್ರೇಮಿ ಬರವಣಿಗೆಗಳು ಹಾಗೂ ನೂರಾರು ಯುವ ಪತ್ರಕರ್ತರಿಗೆ ಆಶ್ರಯ ನೀಡಿ ಇಡೀ ದೇಶಕ್ಕೆ ಪರಿಚಯಿಸಿದ ಕೀರ್ತಿ ಕೆಬಿಜಿ ಅವರಿಗೆ ಸಲ್ಲುತ್ತದೆ. ಸಮಾಜಮುಖಿ ಯುವ ಪತ್ರಕರ್ತರಿಗೆ ಹಾಗೂ ಸಾಮಾಜಿಕ ಹೊಣೆಗಾರಿಕೆಯ ಬರಹಗಾರರಿಗೆ ಮೈಸೂರಿನ ಡಾ. ಕೆ.ಬಿ.ಗಣಪತಿ ಶಾಶ್ವತ ಸಂಪಾದಕರಾಗಿ ಉಳಿಯುತ್ತಾರೆ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ತಮ್ಮ ಸಂತಾಪದಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.07.2025 ಸೋಮವಾರ, ಮಳೆ ನಕ್ಷತ್ರ: ಪುನರ್ವಸು, 6.07.2025ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ನೋವು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್.

■ **ಶ್ರೀ ಪ್ರಸನ್ನ ಸಾಯಿ ಮಂದಿರ :** 87ನೇ ಗುರುಪೂರ್ಣಿಮಾ ಮಹೋತ್ಸವ, ಬೆಳಗ್ಗೆ 7.30ಕ್ಕೆ ಕಾಕಡಾರತಿ, ಸಂಜೆ 7.30ಕ್ಕೆ ಗಾನ ವಿಶಾರದ ಸಂಗೀತ ವೃಂದದವರಿಂದ ಭಜನೆ ಕಾರ್ಯಕ್ರಮ, ರಾತ್ರಿ 8.30ಕ್ಕೆ ಶಯನೋತ್ಸವ ಹಾಗೂ ಸುವರ್ಣ ಭಾಂಡ ವಿಸರ್ಜನೆ, ರಾತ್ರಿ 9 ಗಂಟೆಗೆ ನೆಲಮಾಳಿಗೆ ದರ್ಶನ, ಸ್ಥಳ: ಶ್ರೀ ಪ್ರಸನ್ನ ಸಾಯಿ ಮಂದಿರ, ತ್ಯಾಗರಾಜ ರಸ್ತೆ, ಕೆ.ಆರ್.ಮೊಹಲ್ಲಾ.

■ **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಕಾಲೇಜು ಆಫ್ ಫಿಜಿಯೋಥೆರಪಿ, ಮೈಸೂರು:** ಪದವೀಧರರ ದಿನಾಚರಣೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ, ಸ್ಥಳ: ಶ್ರೀ ರಾಜೇಂದ್ರ ಸೆಂಟನರಿ ಆಡಿಟೋರಿಯಂ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11 ಗಂಟೆಗೆ.

■ **ಕರ್ನಾಟಕ ಸರ್ಕಾರ, ಆಯುಷ್, ಸರ್ಕಾರಿ ಆಯುರ್ವೇದ ರಿಸರ್ಚ್ ಸೆಂಟರ್ (ಮೈಸೂರು), ಶ್ರೀ ಜಯದೇವ ಇನ್‌ಸ್ಟ್ಯೂಟ್ ಕಾಡಿಯೋವ್ಯಾಸ್ಕುಲರ್ ಸೈನ್ಸ್‌ಸ್ ಅಂಡ್ ರಿಸರ್ಚ್, ಮೈಸೂರು:** ಕಾಡಿರ್ಯೋ ಯೋಗ ಶೃಂಗಸಭೆ–2025ರ ಸಮಾರೋಪ, ಸ್ಥಳ: ಜಯದೇವ ಆಸ್ಪತ್ರೆ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



6.10: ಚಿಂತನ–ವಿ.ಬಿ.ಕುಲಮರ್ವ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ– ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ದೀಪಿಕಾ ಪಾಂಡುರಂಗಿ ಹಾಗೂ ಬಿ.ಶ್ರೀರಾಂಭಟ್, ವ್ಯಾಖ್ಯಾನ–ಡಾ.ಜ್ಯೋತಿ ಶಂಕರ್, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು, ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ), 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಮಲ್ಲಾಡಿ ಸಹೋದರರಿಂದ ದ್ವಂದ್ವ ಗಾಯನ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಶೋ, 12.05–ವನಿತಾ ವಿಹಾರ, 12.35–ದೇವರನಾಮ, ಡಿ.ಪುರುಷೋತ್ತಮ್, 12.45–ನಮ್ಮ ಆರೋಗ್ಯ: ಫೆಬ್ರೈಯ್ಲ್ ಸೀಜರ್ಸ್ ಅಂದರೆ ಅತಿಯಾದ ಜ್ವರದಿಂದ ಕಾಣಿಸಿಕೊಳ್ಳುವ ಫಿಟ್ಸ್ ಕುರಿತು ಮೈಸೂರಿನ ಮಕ್ಕಳ ನರರೋಗ ತಜ್ಞ ಡಾ.ಅನುಷಾರಾಜ್ ಕೆ. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ, ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20–ಭಾವಗೀತೆಗಳು, ಸಂಗೀತ ಎಸ್., 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಸ್.ಗೋಪಾಲಕೃಷ್ಣನ್–ವಯೋಲಿನ್ ವಾದನ, 4.00–ಮಹಿಳಾರಂಗ–ಮಹಿಳಾ ಆರೋಗ್ಯ ಕಾರ್ಯಕ್ರಮ, ಭಾಗವಹಿಸುತ್ತಾರೆ–ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವೈದ್ಯಾಧಿಕಾರಿ ಡಾ.ಪ್ರಫುಲ್ಲ .ಕೆ, ಪ್ರಸ್ತುತಿ: ನೇತ್ರಾ ಕೆ., 4.45–ಹಿಂದಿ ಪಾಠ, ಪ್ರಸ್ತುತಿ: ಡಾ.ಮಾಧವಿ ಭಂಡಾರಿ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಮೈಸೂರು ತಾಲೂಕು ಶುಂಠಿ ರೋಗಗಳ ಸಮಗ್ರ ನಿರ್ವಹಣೆ ಈ ಕುರಿತು ಮೈಸೂರು ತಾಲೂಕು ನಾಗನಹಳ್ಳಿಯ ವಿಸ್ತರಣಾ ಶಿಕ್ಷಣ ಘಟಕದ ಸಹ ಪ್ರಾಧ್ಯಾಪಕ ಡಾ.ಉಮಾಶಂಕರ್‌ಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ–ಯುವಪ್ರತಿಭೆ ಸುಗಮ ಸಂಗೀತ ಕಲಾವಿದೆ ಮೈಸೂರಿನ ಭವತಾರಿಣಿ .ಕೆ.ಎಸ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಡಾ.ಮೈಸೂರು ಉಮೇಶ್, 8.30–ಹಿಂದಿ ಚಿತ್ರಗೀತೆ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಜೆ.ಶ್ರೀನಿವಾಸ ಐಯ್ಯಂಗಾರ್–ವೀಣಾವಾದನ, 10.00–ಯಕ್ಷಸಂಪದ, ಬಡಗು ತಿಟ್ಟಿನ ಯಕ್ಷಗಾನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ. ಪ್ರಸ್ತುತಿ: ದಿವಾಕರ ಹೆಗಡೆ, 10.30–ಸವಿನೆನಪು.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಲೋಕಕಲ್ಯಾಣಕ್ಕಾಗಿ ಶ್ರೀಮದ್ ಭಾಗವತ್ ಪ್ರವಚನ, ವಿದ್ವಾನ್ ಶ್ರೀ ಗಣೇಶ್ ಶರ್ಮಾ (ಮೈಸೂರು)) ಅವರಿಂದ. ಸ್ಥಳ: ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6.30ರಿಂದ.

ಸಿಎಂ, ಡಿಸಿಎಂ, ಕೇಂದ್ರ ಸಚಿವರು ಸೇರಿ ಹಲವು ಗಣ್ಯರ ಸಂತಾಪ

ಮೈಸೂರು, ಜು.13(ಬಿಎಲ್‌ಯು)– 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ ನಿಧನಕ್ಕೆ ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.



ಉಪಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರೊಂದಿಗೆ ಕೆಬಿಜಿ (ಸಂಗ್ರಹ ಚಿತ್ರ)

'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿ ಅವರ ಅಗಲಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಸಂತಾಪ ಸೂಚಿಸಿದ್ದಾರೆ.

ಅವರು ತಮ್ಮ ಸಂತಾಪ ಸೂಚಕ ಸಂದೇಶದಲ್ಲಿ, ನನ್ನೂರಿನ ಹಿರಿಯ ಪತ್ರಕರ್ತ ಮಿತ್ರರಾದ ಕೆ.ಬಿ.ಗಣಪತಿ ಅವರ ನಿಧನದಿಂದ ದುಃಖಿತನಾಗಿದ್ದೇನೆ. ಗಣಪತಿ ಅವರ ಅಗಲಿಕೆಯಿಂದ ನಾಡಿನ ಪತ್ರಿಕಾರಂಗ ಬಡವಾಗಿದೆ. ಸುಮಾರು 5 ದಶಕಗಳ ಕಾಲ ಪತ್ರಿಕೋದ್ಯಮದಲ್ಲಿ ಅವಿರತವಾಗಿ ದುಡಿದ ಗಣಪತಿಯವರು ವಸ್ತುನಿಷ್ಠ, ವೃತ್ತಿಪರ ಬರಹಗಳಿಗೆ ಹೆಸರುವಾಸಿ. 'ಸ್ಟಾರ್ ಆಫ್ ಮೈಸೂರ್' ಮೂಲಕ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅಪಾರ ಓದುಗ ಬಳಗ ಸೃಷ್ಟಿಸಿದ ಗಣಪತಿಯವರು 'ಮೈಸೂರು ಮಿತ್ರ' ಪತ್ರಿಕೆ ಸಂಸ್ಥಾಪಕ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದರು. ಪತ್ರಿಕೋದ್ಯಮದಲ್ಲಿ ಅವರು ಮೂಡಿಸಿರುವ ಹೆಜ್ಜೆ ಗುರುತುಗಳು ಯುವ ಪತ್ರಕರ್ತರಿಗೆ ಸ್ಫೂರ್ತಿ, ಮಾದರಿಯಾಗಲಿ. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ವರ್ಗಕ್ಕೆ ಅಗಲಿಕೆ ನೋವು ಭರಿಸುವ ಶಕ್ತಿ ಸಿಗಲೆಂದು ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.



ಐದು ದಶಕಗಳ ಕಾಲ ಪತ್ರಿಕಾರಂಗದಲ್ಲಿ ಸೇವೆ ಸಲ್ಲಿಸಿದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಹೆಸರಾಂತ ಪತ್ರಿಕೆಗಳನ್ನು ಕಟ್ಟಿ ಬೆಳೆಸಿದ ಹಿರಿಯ ಪತ್ರಕರ್ತ ಡಾ.ಕೆ.ಬಿ.ಗಣಪತಿ ಅವರ ನಿಧನದ ಸುದ್ದಿ ತಿಳಿದು ದುಃಖಿತನಾಗಿದ್ದೇನೆ. ಅಪಾರ ಪ್ರಾಪಂಚಿಕ ಜ್ಞಾನ ಹೊಂದಿದ್ದ ಅವರ ಲೇಖನಿಯಿಂದ ಹೊರ ಹೊಮ್ಮಿದ ಪ್ರತಿಯೊಂದು ಅಕ್ಷರಗಳು ಕೂಡ ಸಮಾಜದ ಮೇಲೆ ಗಾಢವಾದ ಪರಿಣಾಮ ಬೀರುವಂತಹ ಶಕ್ತಿ ಹೊಂದಿದ್ದವು. ಅವರು ಮೈಸೂರಿನಲ್ಲಿ ಮಾತ್ರವಲ್ಲದೆ ದೇಶ–ವಿದೇಶಗಳಲ್ಲೂ ಅಪಾರ ಓದುಗ ಬಳಗವನ್ನು ಸೃಷ್ಟಿಸಿಕೊಂಡಿದ್ದರು.


ಅಗಲಿದ ಆತ್ಮಕ್ಕೆ ಚಿರಶಾಂತಿ ಸಿಗಲಿ, ಅವರ ಕುಟುಂಬದವರು, ಸಹೋದ್ಯೋಗಿಗಳು, ಹಿತೈಷಿಗಳಿಗೆ ನೋವು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ.

– **ಡಿ.ಕೆ.ಶಿವಕುಮಾರ್**, ಉಪ ಮುಖ್ಯಮಂತ್ರಿ



ಅನೇಕ ಪತ್ರಕರ್ತರ ಬದುಕು ರೂಪಿಸಿದ್ದ ಹಿರಿಯರಾದ ಡಾ.ಕೆ.ಬಿ. ಗಣಪತಿ (ಕೆಬಿಜಿ) ಅವರ ನಿಧನದ ಸುದ್ದಿ ಕೇಳಿ ಅತ್ಯಂತ ದುಃಖವಾಗಿದೆ. ಮಾಧ್ಯಮ ಲೋಕದಲ್ಲಿ ಅಪಾರ ಸೇವೆ ಸಲ್ಲಿಸಿದ್ದ ಅವರು, ತಮ್ಮ ಗರಡಿಯಲ್ಲಿ ಅನೇಕ ಶ್ರೇಷ್ಠ ಪತ್ರಕರ್ತರನ್ನು ರೂಪಿಸಿದ್ದಾರೆ. ಅವರ ಆತ್ಮಕ್ಕೆ ಭಗವಂತ ಸದ್ಗತಿ ನೀಡಲಿ, ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ಕರುಣಿಸಲಿ.

– **ಹೆಚ್.ಡಿ.ಕುಮಾರಸ್ವಾಮಿ**, ಕೇಂದ್ರ ಸಚಿವ



ಕೊಡಗು, ಮೈಸೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಎರಡು ಪತ್ರಿಕೆಗಳ ಮೂಲಕ ಮನೆ ಮಾತಾಗಿದ್ದ ಡಾ.ಗಣಪತಿ ಅವರ ನಿಧನದಿಂದ ಸಮಾಜಕ್ಕೆ ಬಹಳ ನಷ್ಟವಾಗಿದೆ. ಓದುಗರಿಗೆ ಅಗತ್ಯವಾಗಿರುವ ವಿಶೇಷ ಬರಹಗಳ ಮಾರ್ಗದರ್ಶಿಯಾಗಿದ್ದ ಡಾ. ಗಣಪತಿ ಅವರ ನಿಧನದಿಂದ ವೈಯಕ್ತಿಕವಾಗಿ ನನಗೆ ಬಹಳ ದುಃಖ ತಂದಿದೆ.

– **ಎ.ಮಂಜು**, ಶಾಸಕರು, ಅರಕಲಗೂಡು.



ಮೈಸೂರು ಜಿಲ್ಲೆ ಚಾಮಲಾಪುರದಲ್ಲಿ ಉಷ್ಣವಿದ್ಯುತ್ ಸ್ಥಾವರ ಸ್ಥಾಪಿಸಲು ವಿರೋಧ ಮಾಡುವ ಸಂದರ್ಭದಲ್ಲಿ ಆರಂಭವಾದ ಹೋರಾಟದ ಸಂಘಟನೆಗೆ ಮೈಸೂರಿನ ಪ್ರಜ್ಞಾವಂತ ನಾಗರಿಕರ ವೇದಿಕೆ ಎಂಬ ಹೆಸರು ಸೂಚಿಸಿದವರೇ ಡಾ.ಕೆ.ಬಿ.ಗಣಪತಿ ಅವರು. 18 ತಿಂಗಳ ನಿರಂತರ ಹೋರಾಟದ ಫಲವಾಗಿ ಆ ಯೋಜನೆಯನ್ನು ಸರ್ಕಾರ ಕೈಬಿಟ್ಟಿತು. ಮೈಸೂರಿನ ಸರ್ವಾಂಗೀಣ ಅಭಿವೃದ್ಧಿಗೆ ಅವರು ಒತ್ತಾಸೆಯಾಗಿ ನಮ್ಮೊಡನೆ ನಿಲ್ಲುತ್ತಿದ್ದರು.

– **ಎಂ.ಲಕ್ಷ್ಮಣ್**, ವಕ್ತಾರ, ಕೆಪಿಸಿಸಿ



'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ ನಿಧನದ ಸುದ್ದಿ ಕೇಳಿ ದುಃಖವಾಯಿತು. ಮೃತರ ಕುಟುಂಬ, ಬಂಧು ಮಿತ್ರರು ಮತ್ತು ಅಭಿಮಾನಿಗಳಿಗೆ ಅಗಲಿಕೆ ಸಹಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ, ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

– **ಬಿ.ವೈ.ವಿಜಯೇಂದ್ರ**, ರಾಜ್ಯಾಧ್ಯಕ್ಷರು, ರಾಜ್ಯ ಬಿಜೆಪಿ



ಡಾ. ಕೆಬಿಗಣಪತಿ ಅವರು ಬಹಳಷ್ಟು ಒಳ್ಳೆಯ ಪತ್ರಕರ್ತರನ್ನು ಬೆಳೆಸಿದ್ದಾರೆ. ನಿಷ್ಠುರ ಮತ್ತು ವಸ್ತುನಿಷ್ಠೆ ವರದಿಗಳಿಂದ ಓದುಗರನ್ನು ಆಕರ್ಷಿಸುತ್ತಿದ್ದ ಡಾ.ಗಣಪತಿ ಅವರ ನಿಧನ ಸಮಾಜಕ್ಕೆ ದೊಡ್ಡ ನಷ್ಟ ಉಂಟುಮಾಡಿದೆ

– **ಸಾ.ರಾ.ಮಹೇಶ್**, ಮಾಜಿ ಸಚಿವರು




ಡಾ. ಕೆ.ಬಿ.ಗಣಪತಿ ಅವರ ನಿಧನದಿಂದ ನನಗೆ ತುಂಬಾ ದುಃಖ ವಾಗಿದೆ ಪತ್ರಿಕೋದ್ಯಮ ಮಾತ್ರವಲ್ಲದೆ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಕೂಡ ಸ್ಮರಣೀಯ ಕೆಲಸ ಮಾಡಿರುವ ಡಾ.ಗಣಪತಿ ಅವರ ಆದರ್ಶ ಮರೆಯುವಂತಿಲ್ಲ. ಅವರ ಕುಟುಂಬದವರಿಗೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ.

– **ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್**, ಸಂಸದ



ಡಾ. ಕೆ.ಬಿಗಣಪತಿ ಅವರು ಪತ್ರಿಕೋದ್ಯಮದ ಚೇತನ. ನನಗೆ ಮಾರ್ಗದರ್ಶಕರಾಗಿದ್ದ ಡಾ.ಗಣಪತಿ ಅವರಿಂದ ನಾನು ಬಹಳಷ್ಟು ಕಲಿತಿದ್ದೆ. ಡಾ.ಗಣಪತಿ ಅವರು ದೈಹಿಕವಾಗಿ ಮರೆಯಾಗಿರಬಹುದು. ಆದರೆ ಅವರ ಆದರ್ಶ ಸ್ಮರಣೀಯವಾಗಿದೆ. – **ವೆಂಕಟೇಶ್**, ಸಂಪಾದಕರು, ಲಾ ಗೈಡ್




'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಮೂಲಕ ರಚನಾತ್ಮಕ ಮತ್ತು ಪ್ರಗತಿಪರ ಕೆಲಸಗಳಿಗೆ ಡಾ.ಕೆ.ಬಿ. ಗಣಪತಿ ಅವರು ಬೆಂಬಲವಾಗಿ ನಿಲ್ಲುತ್ತಿದ್ದರು. ಒಳ್ಳೆಯ ಕೆಲಸಕ್ಕೆ ಆಧಾರ ಸ್ತಂಭವಾಗಿದ್ದ ಡಾ.ಗಣಪತಿ ಅವರು ರಾಮಕೃಷ್ಣ ಆಶ್ರಮದ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದರು. ಆಳವಾದ ಚಿಂತನೆಯಿಂದ ಸಾಮಾಜಿಕ ಪ್ರಜ್ಞೆಯ ಬರಹ ಬರೆಯುತ್ತಿದ್ದ ಡಾ.ಗಣಪತಿ ಅವರ ನಿಧನದಿಂದ ಸಮಾಜಕ್ಕೆ ಅಪಾರ ನಷ್ಟವಾಗಿದೆ.

– **ಶ್ರೀ ಮುಕ್ತಿದಾನಂದಜಿ**, ರಾಮಕೃಷ್ಣ ಆಶ್ರಮ, ಮೈಸೂರು.



ಡಾ. ಕೆ.ಬಿ.ಗಣಪತಿ ಅವರನ್ನು ಕಳೆದುಕೊಂಡು ಮೈಸೂರು ಬಡವಾಗಿದೆ. ಅವರ ಪತ್ರಿಕೆಯ ಹೆಸರೇ ಹೇಳುವಂತೆ ಮೈಸೂರಿಗೆ ಮಿತ್ರವಾಗಿತ್ತು. ಮೈಸೂರಿನ ಸರ್ವಾಂಗೀಣ ಅಭಿವೃದ್ಧಿಗೆ ಅವರ ಬರಹ ಪೂರಕವಾಗಿತ್ತು. ಮೈಸೂರಿಗೆ ಯಾವುದಾದರೂ ಗಂಡಾಂತರ ಸ್ಥಿತಿ ಬಂದಾಗ ಡಾ.ಕೆ.ಬಿ.ಗಣಪತಿ ಅವರು ತಮ್ಮ ಮೊನಚಾದ ಬರಹದ ಮೂಲಕ ಎಚ್ಚರಿಕೆ ನೀಡಿ ಅದನ್ನು ತಪ್ಪಿಸುತ್ತಿದ್ದರು. ಈಗ ಡಾ.ಗಣಪತಿ ಅವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯಲ್ಲಿ ನಾವು ಸಾಗಬೇಕಾಗಿದೆ. – **ಎಲ್.ನಾಗೇಂದ್ರ**, ಅಧ್ಯಕ್ಷರು, ನಗರ ಬಿಜೆಪಿ

ಡಾ.ಕೆ.ಬಿ.ಗಣಪತಿ ಅವರು ನಮ್ಮ ಶಾಲೆಯ ಹಿತೈಷಿಯಾಗಿದ್ದರು ಹಾಗೂ ಪೋಷಕರಾಗಿದ್ದರು. ಡಾ.ಗಣಪತಿ ಅವರ ಅಗಲಿಕೆ ನಮ್ಮ ಸಮುದಾಯಕ್ಕೆ ದೊಡ್ಡ ನಷ್ಟವಾಗಿದೆ. – **ಕೆ.ಬಿ.ಬೆಳ್ಳಿಯಪ್ಪ**, ಅಧ್ಯಕ್ಷರು, ಕಾವೇರಿ ಕೊಡವ ಅಸೋಸಿಯೇಷನ್



ಡಾ. ಕೆ.ಬಿಗಣಪತಿ ಅವರು ಈ ಮೊದಲು ಕುವೆಂಪುನಗರದಲ್ಲಿ ವಾಸವಾಗಿದ್ದಾಗ ನಾವು ಅವರ ಪಕ್ಕದ ಮನೆಯಲ್ಲಿ ಇದ್ದೆವು. ನಾನು ಚಿಕ್ಕ ವಯಸ್ಸಿನಿಂದ ಅವರನ್ನು ನೋಡಿದ್ದೇನೆ. ಬಹಳ ಮೃದು ಸ್ವಭಾವದ ಡಾ.ಗಣಪತಿ ಅವರ ಬರಹಗಳು ನನಗೆ ಸ್ಫೂರ್ತಿಯಾಗಿತ್ತು. ಬಹಳ ಶಿಸ್ತಿನ ವ್ಯಕ್ತಿತ್ವ ಹೊಂದಿದ್ದ ಡಾ.ಗಣಪತಿ ಅವರ ನಿಧನ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ.

– **ಗಣೇಶ್ ಪ್ರಸಾದ್**, ಶಾಸಕರು, ಗುಂಡ್ಲುಪೇಟೆ

ತಂದೆಯ ಸ್ವರೂಪವನ್ನು ಕಳೆದುಕೊಂಡಿದ್ದೇವೆ...



ನಾನು ಮೈಸೂರಿಗೆ ಬಿಜೆಪಿ ಅಭ್ಯರ್ಥಿಯಾಗಿ ಬಂದಾಗ ನನಗೆ ಎಲ್ಲಾ ರೀತಿಯಲ್ಲೂ ಕೈ ಹಿಡಿದು ಸ್ವಂತ ಮಗನ ರೀತಿಯಲ್ಲಿ ರಾಜಕೀಯವಾಗಿ ಸಲಹೆ–ಸೂಚನೆಯನ್ನು ಕೊಟ್ಟು, 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್', ನಲ್ಲಿ ನನ್ನ ಸಂದರ್ಶನ ಹಾಗೂ ನನ್ನ ಹೆಂಡತಿ ಸಂದರ್ಶನವನ್ನೂ ಪ್ರಕಟಿಸಿ ತುಂಬಾ ಸಹಾಯ ಮಾಡಿದ್ದರು. ನನಗೆ ಅಪ್ಪ ಇಲ್ಲ. ಮೈಸೂರು ಭಾಗದಲ್ಲಿ ಆ ಸ್ಥಾನದಲ್ಲಿ ನಿಂತು ನನ್ನ ಕೈ ಹಿಡಿದಿದ್ದು ಕೆಬಿಜಿಯವರು. ಅವರ ಅಗಲಿಕೆಯಿಂದ ನನಗಿದ್ದ ದೊಡ್ಡ ಶಕ್ತಿಯೇ ಹೊರಟು ಹೋದಂತಾಗಿದೆ. ಯಾವಾಗಲೂ ಕೂಡ ಅವರ ಇಬ್ಬರು ಮಕ್ಕಳಷ್ಟೇ ನನ್ನನ್ನು ಪ್ರೀತಿ ಮಾಡುತ್ತಿದ್ದರು. ಅವರ ಸಹಾಯ ಇಲ್ಲದಿದ್ದರೆ ಬಹುಶಃ ನಾನು ಸಂಸದನಾಗಲು ಸಾಧ್ಯವಾಗುತ್ತಿರಲಿಲ್ಲ. ಇದು ಅವರು ನನಗೆ ಮಾಡಿರುವ ಕೃಪೆ. ಪತ್ರಿಕೋದ್ಯಮದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯನ್ನು ಇಷ್ಟು ದೊಡ್ಡ ಮಟ್ಟದಲ್ಲಿ ಕಟ್ಟಿದ್ದು, ಯಾವುದೇ ಸಿದ್ಧಾಂತಗಳಿಗೆ ಜೋತು ಬೀಳದೆ ಸುದ್ದಿಯನ್ನು ಸುದ್ದಿಯಾಗಿಯೇ ಕೊಟ್ಟಂತಹವರು. ವಿಚಾರಗಳನ್ನು ನೇರವಾಗಿ ಹೇಳುವಂತಹ ವ್ಯಕ್ತಿ ಅವರಾಗಿದ್ದರು. ಮೈಸೂರಿನ ಪ್ರತಿಯೊಂದು ಮನೆಗಳಲ್ಲಿ ಸಂಜೆ 'ಸ್ಟಾರ್ ಆಫ್ ಮೈಸೂರ್', ಬೆಳಗ್ಗೆ 'ಮೈಸೂರು ಮಿತ್ರ' ಪತ್ರಿಕೆಗಳು ರಾಜ್ಯಮಟ್ಟದ ಪತ್ರಿಕೆಗಳ ಜೊತೆಗೆ ಇರಲೇಬೇಕು. ಅಂತಹ ಮಟ್ಟಕ್ಕೆ ಪ್ರಭಾವವನ್ನು ಓದುಗರ ಮೇಲೆ ಬೀರಿದ್ದರು. ಹಿರಿಯ ಪತ್ರಕರ್ತರಾಗಿ, ಅವರು ಬಾಂಬೆನಲ್ಲಿ ಇಂಗ್ಲಿಷ್ ಪತ್ರಿಕೆಯಲ್ಲಿ ಕೆಲಸ ಮಾಡಿಕೊಂಡಿದ್ದವರು ಬೆಂಗಳೂರಿನಲ್ಲಿ ನೆಲೆಸಬಹುದಾಗಿತ್ತು. ಆದರೆ, ಮೈಸೂರಿನಂತಹ ನಗರಕ್ಕೆ ಬಂದು ಪತ್ರಿಕೆ ಮೂಲಕ ಬಹಳಷ್ಟು ಜನರಿಗೆ ಸಹಾಯ ಮಾಡಿದ್ದಾರೆ, ಕೆಲಸ ಕೊಟ್ಟಿದ್ದಾರೆ. ಹಾಗಾಗಿ ಅವರಿಂದಾಗಿ ಪತ್ರಿಕೋದ್ಯಮಕ್ಕೆ ಯುವ ಪೀಳಿಗೆಯೇ ಬಂದಿದೆ.

– **ಪ್ರತಾಪ್ ಸಿಂಹ**, ಮಾಜಿ ಸಂಸದರು

ತಾರತಮ್ಯವಿಲ್ಲದೆ ಬೆಳೆದ ವ್ಯಕ್ತಿತ್ವ ಕೆಬಿಜಿ...



ಕೆಬಿಜಿ ಅವರು, ನಮ್ಮ ಅಪ್ಪ–ಅಮ್ಮ ಜೀವನದ ಪಾಠ ಕಲಿಸಿಕೊಟ್ಟ ನಂತರ ನನ್ನ ಜೀವನವನ್ನು ಯಾರಾದರೂ ತಿದ್ದಿದ್ದಾರೆ ಅಂದರೆ, ಅವರಲ್ಲಿ ಕೆ.ಬಿ.ಗಣಪತಿಯವರು ಹಾಗೂ ಬಿಪಿನ್ ಗೋಪಾಲ್ ಕೃಷ್ಣ ಅವರು. ಜಾತಿ, ಮತ, ಧರ್ಮ ಎಂಬ ಯಾವುದೇ ತಾರತಮ್ಯ ಇಲ್ಲದೆ ಈ ನಗರದಲ್ಲಿ ಯಾರಾದರೂ ಬೆಳೆದಿದ್ದಾರೆ ಎಂದರೆ ಅದು ಕೆಬಿಜಿ ಅವರು ಮಾತ್ರ. ಬಹುಶಃ ನನ್ನ ಜೀವನದ ಏಳಿಗೆ ಅಲ್ಪ–ಸ್ವಲ್ಪ ಆಗಿದೆ ಎಂದರೆ, ಅದು ನನ್ನ ತಂದೆ–ತಾಯಿ ನಂತರ ಕೆಬಿಜಿ ಅವರ ಸಹಕಾರದಿಂದ. ಸರಿ–ತಪ್ಪು ವಿಚಾರ ಬಂದಾಗ ನೇರವಾಗಿಯೇ ರಾಜಕಾರಣಿಗಳಾಗಲೀ... ರಾಜಕೀಯ ಪಕ್ಷಗಳಾಗಲೀ... ಯಾರೇ ವಿರೋಧ ವ್ಯಕ್ತಪಡಿಸಿದರೂ ಸರಿ ಅಂದ್ರೆ ಸರಿ.. ತಪ್ಪು ಅಂದ್ರೆ ತಪ್ಪು ಎಂದು ಮುಂಚೂಣಿಯಲ್ಲಿರುತ್ತಿದ್ದರು. ಅವರು ಹೇಳಿಕೊಟ್ಟ ಪಾಠ ಇಂದಿಗೂ ನನ್ನ ಹೃದಯದಲ್ಲಿದೆ. ಅರುಣ್, ಹೋರಾಟ ಮಾಡುವ ಸಂದರ್ಭದಲ್ಲಿ ಮುಳ್ಳನ್ನೇ ಹಿಡಿದರೂ ಭದ್ರವಾಗಿ ಹಿಡಿ. ಹೋರಾಟ ಮಾಡುವಾಗ ಸಾಕಷ್ಟು ಕಷ್ಟಗಳು ಬರುತ್ತವೆ. ಕಷ್ಟ ಎಂದು ಬಿಡಬೇಡ. ಇನ್ನಷ್ಟು ಗಟ್ಟಿ ಹಿಡಿ. ಅದು ಒಳ್ಳೆಯದಾಗುತ್ತೆ ಎಂದಿದ್ದರು. ಇವತ್ತು ಕೆಬಿಜಿ ಅವರು ನಮ್ಮ ನಡುವೆ ಇಲ್ಲ ಎಂಬುದನ್ನು ಅರಗಿಸಿಕೊಳ್ಳುವುದಕ್ಕೆ, ನಂಬುವುದಕ್ಕೆ ಆಗುತ್ತಿಲ್ಲ. ದೇವರು ಅವರ ಆತ್ಮಕ್ಕೆ ಶಾಂತಿ ಕೊಡಲಿ. ನನ್ನಂತಹ ಹತ್ತಾರು ಜನರು ಅವರು ನೀಡಿರುವ ಪ್ರೋತ್ಸಾಹ, ಮಾರ್ಗದರ್ಶನದಂತೆ ಮುನ್ನಡೆಯುತ್ತೇವೆ.

– **ಅರುಣ್ ಕುಮಾರ್**, ಖ್ಯಾತ ವಕೀಲರು

ಕೆಬಿಜಿ ನಮ್ಮ ಬರವಣಿಗೆಯ ಶಕ್ತಿ...



ಕೆಬಿಜಿ ಅವರೊಂದಿಗೆ ನನ್ನದು 20 ವರ್ಷದ ಸಂಬಂಧ. ಅವರಿಗಿದ್ದ ಎಲ್ಲಾ ಆಸಕ್ತಿಗಳನ್ನು ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದರು. ಅವರ ಕಾದಂಬರಿಯೊಂದನ್ನು ಸಿನಿಮಾ ಮಾಡುವ ಕುರಿತು ಮಾತನಾಡಿದ್ದರು. ಆಗಾಗ ಊಟಕ್ಕೆ ಮನೆಗೆ ಕರೆಯುತ್ತಿದ್ದ ಅವರು, ನನಗೆ ಊಟವನ್ನೂ ಬಡಿಸಿದ್ದಾರೆ. ದೇಶಿ ಭಾಷೆಯಲ್ಲಿರುವ ನಿನ್ನ ಅಂಕಣಗಳು ರಾಗಿ ಹೊಲದಲ್ಲಿ ಟ್ರ್ಯಾಕ್ಟರ್ ಓಡಿಸಿದಂತೆ ಎನ್ನುತ್ತಿದ್ದರು. ಮಾತು, ಪ್ರೀತಿ, ಸ್ನೇಹ, ವಿಶ್ವಾಸವೇ ಕೆಬಿಜಿ. ನಮ್ಮ ಬರವಣಿಗೆಯ ಶಕ್ತಿಯಾಗಿದ್ದರು. ಹೊಸ ಪ್ರತಿಭೆಗಳಿಗೆ, ಶಕ್ತಿ ಇಲ್ಲದವರಿಗೆ ಯಾವುದೇ ಇತಿ–ಮಿತಿಗಳನ್ನು ನೋಡದೆ ಅಕ್ಷರ ಲೋಕಕ್ಕೆ ಬಹಳಷ್ಟು ಬರಹಗಾರರನ್ನು ಪರಿಚಯಿಸಿದ್ದಾರೆ. 40 ವರ್ಷದ ಪತ್ರಿಕೋದ್ಯಮದಲ್ಲಿ ಇಡೀ ಮೈಸೂರನ್ನು ತಮ್ಮ ಅಕ್ಷರ ಲೋಕದ ಪರಿಧಿಯೊಳಗೆ ನಡೆಸಿದ್ದಾರೆ. ಅವರಿಲ್ಲದೆ ಅನಾಥ ಪ್ರಜ್ಞೆ ಕಾಡುತ್ತಿದೆ.

– **ಗುಬ್ಬಿಗೂಡು ರಮೇಶ್**, ಖ್ಯಾತ ಅಂಕಣಕಾರರು

ಮೈಸೂರು ಪತ್ರಿಕೋದ್ಯಮಕ್ಕೆ ಹೊಸ ತಿರುವು ನೀಡಿದವರು ಡಾ.ಕೆ.ಬಿ.ಗಣಪತಿ.



ಮಾನ್ಯ ಕೆ.ಬಿ.ಗಣಪತಿ ಅವರು, ಮೈಸೂರು ಪತ್ರಿಕೋದ್ಯಮಕ್ಕೆ ಹೊಸ ತಿರುವನ್ನು ಕೊಟ್ಟಂತಹವರು. ನಾಲ್ಕು ದಶಕಗಳ ಹಿಂದೆಯೇ ಮೈಸೂರು ಜಿಲ್ಲೆಗೆ ಸೀಮಿತವಾಗಿ, ಆನಂತರ ಐದು ಜಿಲ್ಲೆಗಳಿಗೆ ವಿಸ್ತರಿಸಿ, ಜೊತೆಗೆ ಮೈಸೂರಂತಹ ಸಾಂಸ್ಕೃತಿಕ ನಗರದಲ್ಲಿ ಸಂಜೆ ವೇಳೆಯೂ 'ಸ್ಟಾರ್ ಆಫ್ ಮೈಸೂರ್' ಇಂಗ್ಲಿಷ್ ಪತ್ರಿಕೆ ಹೊರತಂದು ಯಶಸ್ಸು ಕಂಡಂತಹ ಏಕೈಕ ಪತ್ರಿಕೋದ್ಯಮಿ. ಕಾಲ ಕಾಲಕ್ಕೆ ಬದಲಾವಣೆಯಾಗುತ್ತಾ ಹಲವಾರು ಸಂಘ– ಸಂಸ್ಥೆಗಳಿಗೆ ಅಪಾರ ಕೊಡುಗೆ ನೀಡಿದ್ದಾರೆ. ರಾಜಕಾರಣ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಮೂಲಕ 'ಮೈಸೂರು ಮಿತ್ರ ಹಾಗೂ 'ಸ್ಟಾರ್ ಆಫ್ ಮೈಸೂರ್' ನಮ್ಮ ಪತ್ರಿಕೆ ಎಂಬ ಭಾವನೆ ಮೂಡಿಸುವ ನಿಟ್ಟಿನಲ್ಲಿ ಎಲ್ಲರೊಂದಿಗೂ ಒಡನಾಟ ಇಟ್ಟುಕೊಂಡಿದ್ದರು. ಹೊಸ ತಲೆಮಾರಿನ ಪತ್ರಕರ್ತರಿಗೆ ಸದಾ ಹೊಸ ದಾರಿ ಹಾಗೂ ಮಾದರಿಯಾಗಿದ್ದಾರೆ.

– **ವೈ.ಡಿ.ರಾಜಣ್ಣ**, ಮಾಜಿ ಅಧ್ಯಕ್ಷರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

ನಕ್ಕರೆ ಅದೇ ಸ್ವರ್ಗ

ಹೆಂಡತಿ ಗಂಡನಿಗೆ ಫೋನ್ ಮಾಡಿದಾಗ

ಗಂಡ : ನಾನು ಆಫೀಸಿನಲ್ಲಿದ್ದೀನಿ. ಬಿಡುವಿಲ್ಲದಷ್ಟು ಕೆಲಸ. ನೀನೇನು ಮಾಡ್ತಾ ಇದ್ದೀಯಾ?

ಹೆಂಡತಿ : ನಾನು ಕೆಎಫ್‌ಸಿಯಲ್ಲಿದ್ದೀನಿ. ನಿಮ್ಮ ಹಿಂದಿನ ಟೇಬಲ್‌ನಲ್ಲಿ ನಾವು ಕೂತಿದ್ದೀವಿ. ನಿಮ್ಮ ಮಕ್ಕಳು ಕೇಳ್ತಿದ್ದಾರೆ... ಅಪ್ಪನ ಜೊತೆಯಲ್ಲಿ ಇರುವ ಆ ಆಂಟಿ ಯಾರು ಅಂತ?

ಮೈಸೂರು ಮಿತ್ರ

ಸೋಮವಾರ, 14 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

'ಖಾಲಿ ಕೈಯ್ಯಲ್ಲಿ ಬಂದಿದ್ದೀವಿ, ಖಾಲಿ ಕೈಯ್ಯಲ್ಲಿ ಹೋಗ್ತೀವಿ. ಮೊದಲ ಸ್ನಾನ ಜ್ಞಾಪಕವಿಲ್ಲ, ಕೊನೆಯ ಸ್ನಾನ ಗೊತ್ತಿಲ್ಲ. ಇರುವಷ್ಟು ದಿನ ಹತ್ತು ಜನಕ್ಕೆ ಸಹಾಯ ಮಾಡೋಣ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಪರಿಶ್ರಮವಿಲ್ಲದೆ ಫಲವಿಲ್ಲ'

ನಿಮ್ಮ ಪತ್ರಗಳು

■ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಮಾನ್ಯರೆ,

ಮೈದುಂಬಿ ಹರಿಯುವ ಕಾವೇರಿ ನದಿಯನ್ನು ಪವಿತ್ರ ನದಿಯೆಂದು ನಾವೆಲ್ಲ ಪೂಜಿಸುತ್ತೇವೆ. ನಮ್ಮ ಹಾಗೂ ರೈತರ ಜೀವನಾಡಿ ಕಾವೇರಿ. ಇಲವಾಲದಿಂದ 10 ಕಿ.ಮೀ. ದೂರದಲ್ಲಿ ಕಲ್ಲೂರ್ ಯಡಹಳ್ಳಿ ನಾನು ಹುಟ್ಟಿ ಬೆಳೆದ ಗ್ರಾಮ. ಚಿಕ್ಕ ವಯಸ್ಸಿನಲ್ಲಿ ಅಲ್ಲಿನ ಸುಂದರ ಪರಿಸರದಲ್ಲಿ ಓಡಾಡಿ ಬೆಳೆದವರು. ಅನತಿ ದೂರದಲ್ಲೆ ಚಿಕ್ಕ ಊರಿದೆ. ಅಲ್ಲಿ ಹೊರಗಿನಿಂದ ಬಂದವರು ಹೊಳೆಯಲ್ಲಿ ಮೀನನ್ನು ಹಿಡಿದು ಮಾರಾಟ ಮಾಡುವುದು ಅವರ ಜೀವನ ವೃತ್ತಿಯಾಗಿ ಇತ್ತೀಚೆಗೆ ಅದು ಮೀನಾಕ್ಷಿಪುರವೆಂದಾಯಿತು. ನಾವು ಚಿಕ್ಕಮಕ್ಕಳಾಗಿದ್ದಾಗ ಕಾವೇರಿ ಹೊಳೆ ತುಂಬಿದಾಗ ಆ ಮನಮೋಹಕ ದೃಶ್ಯವನ್ನು ಮನೆಯವರೆಲ್ಲಾ ಕೂಡಿ ನೋಡಿ ಆನಂದಿಸುತ್ತಿದ್ದೆವು. ಅದೇನು ನೋಡಲೇಬೇಕಾದ ಪ್ರೇಕ್ಷಣೀಯ ಸ್ಥಳವಲ್ಲ. ಹಿಂದೆ ಗ್ರಾಮದವರು ಬಿಟ್ಟರೆ ಯಾರೂ ಅಲ್ಲಿಗೆ ಸುಳಿಯುತ್ತಿರಲಿಲ್ಲ. ಆದರೆ ಇಂದು ನಗರದಿಂದ ಅನೇಕ ಯುವಕ-ಯುವತಿಯರು ಶನಿವಾರ ಭಾನುವಾರ ಬೈಕ್ ಮತ್ತು ಕಾರುಗಳಲ್ಲೂ ಅಲ್ಲಿಗೆ ಬರುತ್ತಾರೆ. ಹೊಳೆಯ ಸಮೀಪದಲ್ಲೆ ಅರಣ್ಯ ಇಲಾಖೆಯವರು ಬೆಳೆದ ಕಾಡಿನಿಂದ ಆವೃತವಾಗಿದೆ. ಆ ಕಾಡಿನ ಮಧ್ಯೆ ಯುವಕ-ಯುವತಿಯರು ಮನಬಂದಂತೆ ವರ್ತಿಸುತ್ತಾರೆ.

ಪ್ರಕೃತಿ ನೋಡಿ ಖುಷಿ ಪಡಬೇಕಾದ ಯುವಜನತೆ ನದಿ ದಂಡೆ ಮೇಲೆ ಮದ್ಯಪಾನ, ಧೂಮಪಾನ ಮಾಡುವುದು, ತಿಂದ ತಿಂಡಿಯ ಪ್ಲಾಸ್ಟಿಕ್ ಕವರ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡಿ, ನೀರನ್ನು ಕಲುಷಿತಗೊಳಿಸುವುದು. ಅನೈತಿಕತೆ ವಿದ್ಯಾವಂತ ಯುವಕರ ವರ್ತನೆಯು ಸಂಸ್ಕೃತಿಯ ಸಭ್ಯತೆಯಲ್ಲ. ಪರಿಸರ ಉಳಿಸಿ ಶುದ್ಧ ಗಾಳಿ ನೀರು ಆರೋಗ್ಯಕ್ಕೆ ಪೂರಕವೆಂದು ಪರಿಸರವಾದಿಗಳು ಮಾತನಾಡುತ್ತಿರುತ್ತಾರೆ. ಆದರೆ ಇಂದಿನ ಯುವ ಸಮುದಾಯಕ್ಕೆ ನದಿ ಹೊಳೆಗಳ ಪ್ರಾಮುಖ್ಯತೆ ಜೀವನಕ್ಕೆ ಎಷ್ಟು ಅಗತ್ಯವಿದೆಯೆಂದು ತಿಳಿಯದೆ ನೀರೊಳಗೆ ಮೂತ್ರ ಮಾಡುವುದು, ಉಗುಳುವುದು ಕಲುಷಿತಗೊಳಿಸಿ ಕಿಡಿಗೇಡಿತನ ಮೆರೆಯುವುದು ವಿದ್ಯಾವಂತರ ಸಂಸ್ಕಾರವಲ್ಲ. ಅಲ್ಲಿನ ಗ್ರಾಮದ ಮಕ್ಕಳ ಮನಸ್ಸಿನ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ.

ಒಂದು ವರ್ಷದ ಹಿಂದೆ 5 ಜನ ಯುವಕರು ನೀರಿನೊಳಗೆ ಚೆಲ್ಲಾಟವಾಡಲು ಹೋಗಿ ಜಾರಿ ಪ್ರಾಣ ಕಳೆದುಕೊಂಡಿರುತ್ತಾರೆ. ಇನ್ನು ಅನೇಕ ಯುವಕರು ಅದೇ ಸ್ಥಳದಲ್ಲಿ ಆಟವಾಡುತ್ತ ಕಾಲುಜಾರಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ್ದಾರೆ. ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಮುಖ್ಯಸ್ಥರಾಗಲಿ, ಪಿಡಿಓ ಆಗಲಿ ಇನ್ನಾದರೂ ನಗರದಿಂದ ಬರುವವರಿಗೆ ನಿರ್ಬಂಧ ವಿಧಿಸಿ ಎಚ್ಚರಿಕೆ ನೀಡಬೇಕು. ಇಲ್ಲದಿದ್ದಲ್ಲಿ ಆ ಸ್ಥಳದ ಸುತ್ತ ತಂತಿಬೇಲಿ ಅಳವಡಿಸಿ ಒಳಹೋದರೆ ಅಪಾಯವೆಂಬ ನಾಮಫಲಕ ಬರೆದು ಮದ್ಯಪಾನ, ಧೂಮಪಾನ ಮಾಡುವುದು ಶಿಕ್ಷಾರ್ಹ ಅಪರಾಧವೆಂದು ತಿಳಿಯಪಡಿಸುವ ಅಗತ್ಯವಿದೆ. ಪರಿಸರ ನೈರ್ಮಲ್ಯವನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ.

–ಯಶೋಧ ರಾಮಕೃಷ್ಣ, ಲೇಖಕಿ, ಮೈಸೂರು

■ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ

ಮಾನ್ಯರೆ,

ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ನಾಡಹಬ್ಬ ದಸರಾ ಪೂರ್ವಭಾವಿ ಸಭೆಯಲ್ಲಿ ಅದ್ದೂರಿ ದಸರಾ ಮಹೋತ್ಸವವನ್ನು ಆಚರಿಸಲು ಹಸಿರು ನಿಶಾನೆ ಕೊಟ್ಟಿದ್ದಾರೆ. ವಿಶ್ವವಿಖ್ಯಾತ ದಸರಾ ಕುಸ್ತಿಗೂ, ಮೈಸೂರಿಗೂ ಅವಿನಾಭಾವ ಸಂಬಂಧವಿದೆ. ಮಹಾರಾಜರ ಕಾಲದಿಂದಲೂ ನಡೆದುಕೊಂಡು ಬಂದ ಈ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಲು ರಾಜ್ಯದ ವಿವಿಧ ಭಾಗಗಳಿಂದ ಪೈಲ್ವಾನರು ಬರುತ್ತಾರೆ.

ಕುಸ್ತಿ ಪ್ರೇಮಿಗಳು ವೀಕ್ಷಿಸಲು ಕೂರಲು ಕಲ್ಲಿನ ಆಸನ (ಗ್ಯಾಲರಿ) ವ್ಯವಸ್ಥೆ ಇದೆ. ಆದರೆ ಮಳೆ ಬಂದರೆ ಮೇಲ್ಚಾವಣಿ ಇಲ್ಲದೆ ಮಳೆಯಲ್ಲಿಯೇ ಕುಳಿತು ಕುಸ್ತಿ ವೀಕ್ಷಿಸಬೇಕಾಗಿದೆ. ದಯವಿಟ್ಟು ಈ ಸಲ ದಸರಾ ಕುಸ್ತಿ ಪಂದ್ಯಾವಳಿಗಲ್ಲದಿದ್ದರೂ ಮಂದಿನ ದಸರಾ ಕುಸ್ತಿ ಪಂದ್ಯಾವಳಿಗಾದರು ಡಿ ದೇವರಾಜ್ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಮೇಲ್ಛಾವಣಿಯನ್ನು ಅಳವಡಿಸಿ ಎಂದು ಓದುಗರ ವಿಭಾಗದಲ್ಲಿ ಎರಡು ಬಾರಿ ಪ್ರಕಟಗೊಂಡರು ಮೇಲ್ಛಾವಣಿ ಕೆಲಸ ಮಾಡಿಸಲಾಗುತ್ತಿಲ್ಲ. ಕುಸ್ತಿ ಎಂದರೆ ಮೈಸೂರಿಗೆ ಅದರದೇ ಆದ ಇತಿಹಾಸ ಇದೆ. ಈ ಇತಿಹಾಸ ಇರುವ ದೇಸಿ ಕ್ರೀಡೆಗೆ ಅಭಿಮಾನ ಹೊತ್ತು ಬರುವ ಕ್ರೀಡಾಭಿಮಾನಿಗಳಿಗೆ ಈ ಸಲವಾದರೂ ಅನುಕೂಲದ ವ್ಯವಸ್ಥೆ ಮಾಡಿಕೊಡಿ.

–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ ಮೈಸೂರು.

■ ಅಂಚೆ ಕಚೇರಿಗಳ ಪಾವಿತ್ರ್ಯತೆ ಏನಾಗಬೇಕು?

ಮಾನ್ಯರೆ,

ಈಗಿರುವ, ಅಂಚೆ ಕಚೇರಿಗಳ ವಿನ್ಯಾಸ ಬದಲಿಸಿ, ಅವುಗಳ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ, ನಾಗರಿಕರ ಅಗತ್ಯ ಬೇಡಿಕೆಗಳನ್ನು ಪೂರೈಸುವ ಉಡುಪು, ಔಷಧ ಆಹಾರ ಪದಾರ್ಥಗಳು ಮತ್ತು ಎಲೆಕ್ಟ್ರಾನಿಕ್ ವಸ್ತುಗಳು ಸೇರಿದಂತೆ ಗ್ರಾಹಕರು ಬಯಸುವ ಉತ್ಪನ್ನಗಳನ್ನು ಒದಗಿಸುವ ಬೃಹತ್ ಮಾಲ್‌ಗಳಂತೆ, ಅಂಚೆ ಕಚೇರಿಗಳನ್ನು ಸಣ್ಣ ಮಾಲ್‌ಗಳಾಗಿ ಪರಿವರ್ತಿಸಿ ಲಾಭದಾಯಕ ಸಂಸ್ಥೆಯನ್ನಾಗಿಸಲು ಕೇಂದ್ರ ಸರ್ಕಾರ ಯೋಜನೆಯನ್ನು ರೂಪಿಸುತ್ತಿದೆ ಎಂದು, ಕೇಂದ್ರದ ದೂರ ಸಂಪರ್ಕ ಸಚಿವ ಜ್ಯೋತಿರಾದಿತ್ಯ ಎಂ.ಸಿಂದಿಯಾ ಅವರು ಬೆಂಗಳೂರಿನಲ್ಲಿ ನಡೆದ ಅಂಚೆ ಇಲಾಖೆಗೆ ಸಂಬಂಧಿಸಿದ ಸಮಾರಂಭದಲ್ಲಿ ಹೇಳಿದ್ದಾರೆ,

ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕೇಂದ್ರ ಸರ್ಕಾರಿ ಸ್ವಾಮ್ಯದ ಅಂಚೆ ಇಲಾಖೆ ಸಹ ಹಣಕಾಸಿನ ಸಮಸ್ಯೆಯನ್ನು ಎದುರಿಸುತ್ತಿರಬಹುದು ಎನಿಸುತ್ತದೆ. ಖಾಸಗಿ ಕೊರಿಯರ್ ಸೇವೆಗಳು ಬಂದ ನಂತರ ಅಂಚೆ ಇಲಾಖೆಗೆ ದೊಡ್ಡ ಹೊಡೆತ ಬಿದ್ದಿರಬಹುದು, ಖಾಸಗಿ ಬಂಡವಾಳಶಾಹಿಗಳ ಕಪಿಮುಷ್ಠಿಯಲ್ಲಿ ಸಿಲುಕಿ ಬಿಎಸ್‌ಎನ್‌ಎಲ್ ಇಂದು ಮುಚ್ಚುವ ಹಂತದಲ್ಲಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ಎಲ್ಲ ಇಲಾಖೆಗಳ ಕತ್ತು ಹಿಸುಕುವ ಕೆಲಸ ಮಾಡುತ್ತದೆ. ಸಂಪೂರ್ಣ ಖಾಸಗೀಕರಣ ಮಾಡುವ ಹಿಂದಿನ ಹುನ್ನಾರವಿದು. ಈಗಾಗಲೇ ಕೆಲವು ಅಂಚೆ ಕಚೇರಿಗಳಲ್ಲಿ ಗಿಫ್ಟ್ ಐಟಂಗಳು ಸೇರಿದಂತೆ ಇತರೆ ವಸ್ತುಗಳನ್ನು ಮಾರಾಟಕ್ಕೆ ಇಡಲಾಗಿದೆ, ಆದರೆ ಅವುಗಳು ಗ್ರಾಹಕರು ಕೈ ಎಟಕುವ ಸ್ಥಿತಿಯಲ್ಲಿ ಇಲ್ಲ, ಮುಂದಿನ ದಿನಗಳಲ್ಲಿ, ಅಂಚೆ ಕಚೇರಿಗಳು, ಶೂ-ಚಪ್ಪಲಿ ಮಾರುವ ಅಂಗಡಿಗಳಾದರೇ, ಅಂಚೆ ಕಚೇರಿಗಳ ಪಾವಿತ್ರ್ಯತೆ ಏನಾಗಬೇಕು?, ಅಂಚೆ ಕಚೇರಿಗಳು ಈಗಿರುವಂತೆ ಅಂಚೆ ಕಚೇರಿಗಳಾಗಿಯೇ ಕಾರ್ಯನಿರ್ವಹಿಸಲಿ, ಅವುಗಳು ಮಿನಿ ಮಾಲ್‌ಗಳಾಗುವುದು ಬೇಡ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**



ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ,
ಮೈಸೂರು, ಮೊ.ನಂ.: 94490 10009

ಸ್ಮರಣೆ

ಅವರೆಂದೂ ಪತ್ರಿಕಾಯುಧ ಬಳಸಲಿಲ್ಲ...

ನಲವತ್ತು ವರ್ಷಗಳ ಸನ್ಮಿತ್ರರು ಕಣ್ಮರೆಯಾಗಿದ್ದಾರೆ. ಬೆಳಗಾಗಿ ಎದ್ದು ಯಾರ್‍ಯಾರ ನೆನೆಯಾಲಿ ಎಂದು ನೆನೆಯುವುದೇ ಬೇಕಿರಲಿಲ್ಲ. ಬೆಳಗಿನ ವಾಕ್ ಹೊರಟರೆ ಅವರ ದರ್ಶನ. ಲಲಿತಮಹಲ್ ಮುಂಭಾಗದ ವಿಶಾಲ ಮೈದಾನದಲ್ಲಿ ತಪ್ಪದೆ ಸಿಕ್ಕುತ್ತಿದ್ದ ಹಿರಿಯರು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿಯವರು. ಸಾಹಿತ್ಯ, ಹಿಂದಿ ಚಿತ್ರ ಸಂಗೀತ, ಪ್ರಚಲಿತ ಸುದ್ದಿ ಇತ್ಯಾದಿಗಳ ಬಗ್ಗೆ ಮಾತು. ಯಾವುದೇ ಪಕ್ಷ ಅಥವಾ ರಾಜಕಾರಣಿಯ ಬಗ್ಗೆ ಮಾತಾಡುವಾಗ ವಿಷಯಕ್ಕಷ್ಟೇ ಅವರ ಮಾತು ಸೀಮಿತ. ಗಾಸಿಪ್ ಕಾಡುಹರಟೆಗೆ ಆಸ್ಪದವಿಲ್ಲ. ಆಗಿನ್ನೂ ರಾಜೀವ್ ಗಾಂಧಿಯವರ ಹತ್ಯೆಯಾಗಿತ್ತು. ದಿನವೂ ಮಾಧ್ಯಮಗಳ ಚರ್ವಿತ ಚರ್ವಣ ಸುದ್ದಿ ವಿಶ್ಲೇಷಣೆಗಳ ಬಗ್ಗೆ ಕೆಬಿಜಿ ಖತಿಗೊಂಡಿದ್ದರು.

'ಅಲ್ರೀ ಒಬ್ಬ ರಾಷ್ಟ್ರೀಯ ನಾಯಕ ಹೀನಾಯವಾಗಿ ಹತ್ಯೆಯಾಗಿದ್ದಾನೆ. ಆತನ ಸುದ್ದಿ ಪ್ರಕಟಿಸುವಾಗ ಒಂದು ಬೇಸಿಕ್ ಕಾಮನ್ ಸೆನ್ಸ್ ಬೇಡವೇ ಆತನ ಅವಶೇಷಗಳನ್ನು ತೋರಿಸಬೇಕಾದಾಗ ಯಾವುದನ್ನು ಹಾಕ್ಬೇಕು, ಬ್ಯಾಡದು ಅನ್ನೋ ವಿವೇಚನೆಯೇ ಬೇಡವೇ? ಹತ್ಯೆಯಾದ ಜಾಗದ ಫೋಟೋ ಸಿಕ್ಕಿವೆ ಎಂದು ಯಾವ್ಯಾವುದೋ ಗಬ್ಬು ಫೋಟೋಗಳನ್ನು ಹಾಕೋದೇ? ಏನೋ ಒಬ್ಬ ಪತ್ರಿಕೆಯವನಿಗೆ ಗೊತ್ತಾಗಲಿಲ್ಲ ಅಂದ್ರೆ ಎಲ್ಲರೂ ಅದೇ ಫೋಟೋವನ್ನು ಹಾಕ್ತಾರಲ್ಲಾ ಒಂದು ಡೀಸೆನ್ಸಿ ಬೇಡವೇ?' ಅವರ ಆಕ್ರೋಶದ ಮಾತು ಮುಂದುವರೆದಿತ್ತು.

ಯಾವ ಫೋಟೋ ಕುರಿತು ಮಾತಾಡ್ತಿದ್ದಾರೆ ಎಂಬುದೇ ಗೊತ್ತಾಗಲಿಲ್ಲ. ನಾನೂ ಅನೇಕ ಪತ್ರಿಕೆಗಳಲ್ಲಿ ಬಂದ ಸುದ್ದಿ ಚಿತ್ರಗಳನ್ನು ನೋಡಿದ್ದೆ. ರಾಜೀವ್ ಹತ್ಯೆ ಬಗ್ಗೆ ನಾನಾ ಲೇಖನಗಳನ್ನು ಓದಿದ್ದೆ.

'ಯಾವ ಫೋಟೋ ಬಗ್ಗೆ ತಾವು ಹೇಳ್ತಾ ಇರೋದು ಸಾರ್?'

'ರಾಜೀವ್ ಗಾಂಧಿ ಹತ್ಯೆ ಕುರಿತ ಸುದ್ದಿಯಲ್ಲಿ ಎಲ್ರೂ ಅದೇ ಫೋಟೋವನ್ನು ನಿರ್ಲಜ್ಜವಾಗಿ ಹಾಕ್ತಾ ಇದ್ದಾರೆ. as if ಬೇರೆ ಫೋಟೋಗಳೇ ಇಲ್ಲ ಎಂಬಂತೆ ಥೂ!'

'ಯಾವ ಫೋಟೋ ಬಗ್ಗೆ ತಾವು ಹೇಳ್ತಿರೋದು ಅಂತಾನೆ ಗೊತ್ತಾಗ್ತಿಲ್ವಲ್ಲಾ ಸಾರ್?' ಎಂದು ಏನನ್ನೋ ನೆನಪಿಸಿಕೊಳ್ಳುವಂತೆ ಮುಖ ಮಾಡಿದೆ.

'ಅಲ್ರೀ ರಾಜೀವ್ ಸತ್ತ ಜಾಗದ ಫೋಟೋದಲ್ಲಿ ಅವರ ಕಾಲಿನ ಅವಶೇಷ ಬಿದ್ದಿದೆ. ಬೆತ್ತಲೆ ಅಂಡಿನ ಭಾಗ ಇರುವ ಚಿತ್ರ ಅದು. ಅಂತಹ ಚಿತ್ರವನ್ನು ಸಾರ್ವಜನಿಕವಾಗಿ ಹಾಕಬಾರದು ಎಂಬ ಕನಿಷ್ಠ ಪರಿಜ್ಞಾನ ಬೇಡವೇ? ಸತ್ತವರ ಗೌರವಕ್ಕೆ ಧಕ್ಕೆ ತರುವ ಚಿತ್ರ ಹಾಕಬಾರದು, ಅವರ ಕುಟುಂಬಸ್ಥರು ನೋಡಿದರೆ ಘಾಸಿ ಇಲ್ಲವೇ ಮುಜುಗರಕ್ಕೆ ಒಳಗಾಗುವಂತಿರಬಾರದು ಎಂಬ ಕನಿಷ್ಠ ಜ್ಞಾನ ಇರಬೇಕು. ಅಭಿರುಚಿ ಹೀನವಾದ ಅಂತಹ ಚಿತ್ರಗಳನ್ನು ಹಾಕಬಾರದು ಎಂದು ಹೊಳೆಯೋದೆ ಇಲ್ವಲ್ಲಾ' ಎಂದು ಪೇಚಾಡಿಕೊಂಡರು.

ನಿತ್ಯದ ಅವರ ಮಾತುಗಳಲ್ಲಿ ಇಂತಹ ನೂರಾರು observation ಗಳಿದ್ದವು. ಕೆಬಿಜಿ ಸಂಗೀತಪ್ರಿಯರು. ಹಳೆಯ ಹಿಂದಿ ಚಿತ್ರಗೀತೆಗಳೆಲ್ಲವೂ ಅವರ ನೆನಪಿನ ಕೋಶದಲ್ಲಿ ಅಡಕವಾಗಿದ್ದವು. ಗಾಯಕನ ಕಂಠದ ಮಾಧುರ್ಯ, ಭಾವಪೂರ್ಣತೆಯತ್ತ ಅವರ ಒಲವು. ಆ ಕಾಲದ ಮ್ಯೂಸಿಕ್ ಡೈರೆಕ್ಟರ್‌ಗಳ ಸಂಯೋಜಕ ಪ್ರತಿಭೆಯ ಬಗ್ಗೆಯೂ ಅಷ್ಟೇ ಆಸಕ್ತಿ. ನಮ್ಮ ಮಾರ್ನಿಂಗ್ ವಾಕ್‌ಗಳಲ್ಲಿ ಹೆಚ್ಚು ಪ್ರಸ್ತಾಪವಾಗುತ್ತಿದ್ದ ಟಾಕ್ ಎಂದರೆ ಇವೇ. ತಲತ್ ಮಹಮದ್ ಗಾಯನವೆಂದರೆ ಪ್ರಾಣ. ಎಷ್ಟೋ ಬಾರಿ ಹಿಂದೆ ಕೇಳಿದ್ದ ಆತನ ಎಲ್ಲ ಹಾಡುಗಳನ್ನೂ ಅಷ್ಟೇ ತನ್ಮಯತೆಯಿಂದ ಈಗಲೂ ಆಸ್ವಾದಿಸುವ ಗುಣ. ಜಾಯೆತೊ ಜಾಯೆ ಕಹ್ಞಾ, ಜಲ್ತೆ ಹೈ ಜಿಸ್ಕೇ ಲಿಯೇ, ಯೆ ಹವಾ ಯೆ ರಾತ್ ಚಾಂದನೀ, ಫಿರ್ ವೊಹಿ ಶಾಮ್..... ಗೀತೆಗಳೆಂದರೆ ಪ್ರಾಣ.

ರಫಿ ಕಿಶೋರ್ ಕಂಠಗಳಿಗೆ ಒಗ್ಗಿದ್ದ ನಾನು, 'ಅವನ ಬಿಡಿ ಸಾರ್ ಗೊಣಗುವ ಮುದುಕನ ರೀತಿ ಹಾಡ್ತಾನೆ. ಅವನ ಗಾಯನ ಹೀರೋಗಳಿಗೆ ಸೂಟ್ ಆಗೊಲ್ಲ' ಎಂದೇನೋ ಅಂದಿದ್ದೆ.

'ಅವನ ಕಂಠ ಎಲ್ಲ ಹೀರೋಗಳಿಗೂ ಹೊಂದದಿರಬಹುದು. ಆದರೆ ಅವನ ವಿಶೇಷತೆ ಇರೋದೆ ವೈಬ್ರೇಟಿಂಗ್ ರೀತಿಯಲ್ಲಿ ಹಾಡೋದ್ರಲ್ಲಿ. ಆ ಕಂಪಿತ ಸ್ವರದಲ್ಲೇ ಮಾಧುರ್ಯ ಇರೋದು. ಬೇರಾರಿಗೂ ಸುಲಭವಾಗಿ ಒಲಿಯದ ವಿಶೇಷ ಕಂಠ ಆತನದು ಗೊತ್ತಾ? ಈ ಹಾಡು ಕೇಳಿದ್ದೀರಾ 'ಪ್ಯಾರ್ ಪರ್' ಬಸ್ತ್ ನಹ್ಞೀ ಅಂತ ಸೋನೇಕಿ ಚಿಡಿಯಾ ಚಿತ್ರದ್ದು. ಅದರ ಲಿರಿಕ್ಸ್ ಎಷ್ಟು ಸೊಗಸಾಗಿದೆ ಅಂದ್ರೆ, ಒಂದು ಇಳಿಸಂಜೆ ಒಬ್ಬರೇ ಕುಳಿತು ಅದರ ಸೊಗಸನ್ನು ಆಸ್ವಾದಿಸಿ. ಆಗ ತಲಾತ್ ಅಂದ್ರೇನು ಅಂತ ಗೊತ್ತಾಗುತ್ತೆ. ಹಾಗಂತ ಆ ಹಾಡಿನ ಕಂಪೋಸರ್ ಯಾರು ಗೊತ್ತಾ? ಓ.ಪಿ.ನಯ್ಯರ್'.



> ಮೈಸೂರು ನಗರ ಪ್ರಕ್ಷುಬ್ದತೆ ಎದುರಿಸಿದ ಸಂದರ್ಭಗಳಲ್ಲಿ ಕೆಬಿಜಿ ಬರೆಯುತ್ತಿದ್ದ ವಿಶ್ಲೇಷಣೆಗಳು ವಸ್ತುಸ್ಥಿತಿಯ ನಿಷ್ಪಕ್ಷಪಾತ ಕೈಗನ್ನಡಿಯಾಗಿರುತ್ತಿದ್ದವು. ಎಡ-ಬಲ ಯಾವ ಪಂಥಕ್ಕೂ ಅವರು ಸೇರಿದವರಲ್ಲ. ಸಮಾಜದ ಪರ ನಿಲ್ಲುವ ವಸ್ತುನಿಷ್ಠತೆಯೊಂದೇ ಅವರ ಪಂಥವಾಗಿತ್ತು, ಸಮಾಜದ ಶಾಂತಿ ನೆಮ್ಮದಿ ಕದಡುವ, ಅನಗತ್ಯ ಸೆನ್ಸೇಷನ್ ಹುಟ್ಟಿಸುವ ಕಾರಣಕ್ಕಾಗಿ ಅವರೆಂದೂ ಪತ್ರಿಕಾಯುಧ ಬಳಸಲಿಲ್ಲ. ಮೈಸೂರಿನ ಶಾಂತಿ-ಸುವ್ಯವಸ್ತೆ ಕಾಪಾಡುವಲ್ಲಿ ಅವರ ಲೇಖನಿಯ ಪಾತ್ರ ಹಿರಿದು.

ಇನ್ನೊಮ್ಮೆ ವಾಕ್ ಬರುವಾಗ 'ತಲತ್'ನ ಯಾವುದೋ ಹಾಡನ್ನು ಬಹುವಾಗಿ ನೆನಪಿಸಿಕೊಂಡರೂ, ಜ್ಞಾಪಕವಾಗಲಿಲ್ಲ. ಕಿಶೋರ್ ಕುಮಾರನ ತಮ್ಮ ಅನೂಪ್ ಕುಮಾರ್ ಆ ಚಿತ್ರದಲ್ಲಿ ಆ ಹಾಡು ಹಾಡ್ತಾನೆ, ಹೇಳಿ ಕೇಳಿ ಹಾಸ್ಯನಟ. ಇನ್ಯಾವ ಮಂಗಚೇಷ್ಟೆಯ ಹಾಡೋ ಅದು. ಎಂದು ಆ ಕಾಲದ ಅನೇಕ ಕಾಮಿಡಿ ಹಾಡುಗಳನ್ನು ನೆನಪಿಸಿದೆ.

'ಛೆ ಛೇ ಅದು ತುಂಬಾ ಗಂಭೀರವಾದ ಭಾವಪೂರ್ಣ ಗೀತೆ' ಎಂದು ಪುನಃ ಜ್ಞಾಪಿಸಿಕೊಂಡರು. ನೆನಪು ಕೈಕೊಟ್ಟಿತು.

ಮನೆಗೆ ಬಂದು ಯೂಟ್ಯೂಬ್ ಹುಡುಕಿದೆ. ಸಿಕ್ಕಿತು. 'ಹಂಸೆ ಆಯಾನ ಗಯಾ ತುಂಸೆ ಬುಲಾಯಾ ನ ಗಯಾ' ಗೀತೆ. ಕಮೇಡಿಯನ್‌ಗೆ ಕೊಡಬಾರದ ಭಾವಪೂರ್ಣ ಗೀತೆ. ದೇಖ್ ಕಬೀರ ರೋಯಾ ಚಿತ್ರದ್ದು. ಮದನ್ ಮೋಹನ್ ಸಂಗೀತ, 65 ವರ್ಷಗಳಾದರೂ ಕುಂದದ ಜನಪ್ರಿಯತೆ. ನಿಧಿ ಸಿಕ್ಕಂತಾಗಿ ಕೆಬಿಜಿಯವರಿಗೆ ಈ ಹಾಡನ್ನು ಕಳಿಸಿದೆ. ಅದೆಷ್ಟು ಆನಂದಪಟ್ಟರೋ..

* * *

1986ರಲ್ಲಿ ದೊಡ್ಡ ಕೋಮು ಗಲಭೆ ನಡೆಯಿತು. ಯಾವುದೋ ಒಂದು ವಿಚಾರ ಪ್ರಕಟಿಸಿದರು ಎಂಬ ಕಾರಣಕ್ಕೆ ಬೆಂಗಳೂರಿನ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ ಪತ್ರಿಕಾಲಯಗಳನ್ನು ಧ್ವಂಸ ಮಾಡಿದ್ದರು. ಇದರ ಕಾವು ರಾಜ್ಯಾದ್ಯಂತ ಹರಡಿ ಕರ್ಫ್ಯೂ ವಿಧಿಸುವಷ್ಟು ವಾತಾವರಣ ಪ್ರಕ್ಷುಬ್ಧವಾಗಿತ್ತು. ಮೈಸೂರಿನಲ್ಲೂ ಭೀಕರ ಗಲಾಟೆ ನಡೆದಿದ್ದರೂ ಅದರಲ್ಲೊಂದು ವಿಶೇಷತೆ ಇತ್ತು. ಪೊಲೀಸರು ನೂರಾರು ಮಂದಿ ಗಲಭೆಕೋರರನ್ನು ಹಿಡಿದು ಜೈಲಿಗಟ್ಟಿದ್ದರು. ಆದರೆ ಅವರಲ್ಲಿ ಒಬ್ಬನೇ ಒಬ್ಬ ಪೈಲ್ವಾನನೂ ಭಾಗಿಯಾಗಿರಲಿಲ್ಲ. ಇದು ಹೇಗೆ ಸಾಧ್ಯ? ಕೋಮು ಗಲಭೆ ಅಂದ್ರೆ ಆಯ್ತು ಜಾತಿ ಕಲಹ! ಪೈಲ್ವಾನರುಗಳಲ್ಲಿ ಜಿದ್ದಾ ಜಿದ್ದಿ ಇರುವುದೇ ಈ ಕೋಮುಗಳ ನಡುವೆ. ದಿನವೂ ಸುಮ್ಮನೆ ಬಾಯಿ ಬಡಿದುಕೊಂಡು ಕುಣಿದಾಡೋನು ಹೋಳಿ ಬಂದರೆ ಸುಮ್ಮನಿದ್ದಾನೆ?. ಎರಡೂ ಕೋಮಿನ ಪೈಲ್ವಾನರುಗಳು ಗಲಭೆಯಲ್ಲಿ ಪಾಲ್ಗೊಳ್ಳದೆ ಇದ್ದದ್ದೇ ಪವಾಡ. ಎರಡೂ ಕೋಮಿನ ಪೈಲ್ವಾನರ ನಡುವೆ ಲಾಗಾಯ್ತಿನಿಂದ ವೈಮನಸ್ಯವಿದ್ದು, ಗಲಭೆ ಪ್ರಸಂಗ ಎದುರಾದರೆ ಸಾಕು ಭುಗಿಲೇಳುತ್ತಿತ್ತು. ಅಂತಹುದರಲ್ಲಿ ಈ ವಿಚಿತ್ರ ಹೇಗಾಯ್ತು?

ಆಗಿನ ಎಸ್ಪಿ ಡಿ.ಎನ್.ಮುನಿಕೃಷ್ಣ ಅವರು ತಾವೇ ಮುಂದೆ ನಿಂತು ಹರಿದು ಹಂಚಿಹೋಗಿದ್ದ ನಾನಾ ಗರಡಿಗಳನ್ನು ಒಗ್ಗೂಡಿಸಿದ್ದರು. ಕೋರ್ಟ್ ಕೇಸುಗಳನ್ನೆಲ್ಲಾ ರಾಜೀ ಮಾಡಿಸಿ ಕೋಮು ಕಲಹ ಬಾರದಂತೆ ನಿಯಂತ್ರಿಸಿದ್ದರು. ಇದೊಂದು ದೊಡ್ಡ ಸಾಧನೆ ಎಂದೇ ಹೇಳಬೇಕು.

ಕೆಬಿಜಿಯವರು ಈ ಪವಾಡವನ್ನು ಕೂಲಂಕುಷವಾಗಿ ವಿಶ್ಲೇಷಿಸಿ ಲೇಖನವನ್ನೇ ಬರೆದರು. ರೇಶಿಮೆಯ ದಾರದಲ್ಲಿ ಪೈಲ್ವಾನರನ್ನು ಬಿಗಿಯಾಗಿ ಬಿಗಿದು ಈ ಗಲಭೆಯಲ್ಲಿ ಪಾಲ್ಗೊಳ್ಳದಂತೆ ನಿಯಂತ್ರಿಸಿದರು ಎಂದು ವಿವರಿಸಿದ್ದರು.

ನಂತರ ನಡೆದ ನ್ಯಾಯಾಂಗ ತನಿಖಾ ವಿಚಾರಣೆ ಕಾಲದಲ್ಲಿ ಕೆಬಿಜಿಯವರ ಈ ವಿಶ್ಲೇಷಣೆ ಪ್ರಮುಖ ಸಾಕ್ಷ್ಯವಾಗಿ ಪೊಲೀಸರನ್ನು ರಕ್ಷಿಸಿತು.

ಮೈಸೂರು ನಗರ ಪ್ರಕ್ಷುಬ್ದತೆ ಎದುರಿಸಿದ ಸಂದರ್ಭಗಳಲ್ಲಿ ಕೆಬಿಜಿ ಬರೆಯುತ್ತಿದ್ದ ವಿಶ್ಲೇಷಣೆಗಳು ವಸ್ತುಸ್ಥಿತಿಯ ನಿಷ್ಪಕ್ಷಪಾತ ಕೈಗನ್ನಡಿಯಾಗಿರುತ್ತಿದ್ದವು. ಎಡ-ಬಲ ಯಾವ ಪಂಥಕ್ಕೂ ಅವರು ಸೇರಿದವರಲ್ಲ. ಸಮಾಜದ ಪರ ನಿಲ್ಲುವ ವಸ್ತುನಿಷ್ಠತೆಯೊಂದೇ ಅವರ ಪಂಥವಾಗಿತ್ತು ಸಮಾಜದ ಶಾಂತಿ ನೆಮ್ಮದಿ ಕದಡುವ, ಅನಗತ್ಯ ಸೆನ್ಸೇಷನ್ ಹುಟ್ಟಿಸುವ ಕಾರಣಕ್ಕಾಗಿ ಅವರೆಂದೂ ಪತ್ರಿಕಾಯುಧ ಬಳಸಲಿಲ್ಲ. ಮೈಸೂರಿನ ಶಾಂತಿ-ಸುವ್ಯವಸ್ಥೆ ಕಾಪಾಡುವಲ್ಲಿ ಅವರ ಲೇಖನಿಯ ಪಾತ್ರ ಹಿರಿದು.

1985ರಲ್ಲಿ ಸರಸ್ವತಿಪುರಂ ಠಾಣೆಯ ಚಾರ್ಜ್ ವಹಿಸಿಕೊಂಡಾಗ ಪಕ್ಕವೇ ಇದ್ದ ಅವರ ಕಛೇರಿಗೆ ಹೋಗಿ ಭೇಟಿಯಾಗಿದ್ದೆ. ಪೊಲೀಸ್ ಅಧಿಕಾರಿಯೊಬ್ಬ ಪತ್ರಕರ್ತನನ್ನು ತಾನಾಗಿ ಭೇಟಿಯಾಗುತ್ತಾನೆಂದರೆ ಒಂದು ಬಗೆಯ ಅನುಮಾನ ಅಚ್ಚರಿಯಿಂದ ದಿಟ್ಟಿಸಿದ್ದರು. ಕಾರಣ ವಿವರಿಸಿದೆ. ನಂಬಲಾರದ ಆಶ್ಚರ್ಯ ಅವರಿಗೆ.

ಯಾವುದೇ ಠಾಣೆಯ ಅಧಿಕಾರ ವಹಿಸಿಕೊಂಡಾಗ, ಆ ಸರಹದ್ದಿನ ಪ್ರಮುಖ ವ್ಯಕ್ತಿಗಳನ್ನು ಕಂಡು ಅಲ್ಲಿಯ ವಿದ್ಯಮಾನಗಳನ್ನು ತಿಳಿದುಕೊಳ್ಳುವುದು ನಾನು ಬೆಳೆಸಿಕೊಂಡಿದ್ದ ಪರಿಪಾಠ. ಯಾವ ಪಕ್ಷಕ್ಕೂ ಸೇರದ ವ್ಯಕ್ತಿಗಳ ಅಭಿಪ್ರಾಯಗಳು ನಿಷ್ಪಕ್ಷಪಾತವಾಗಿರುತ್ತವೆ. ವಾಸ್ತವಾಂಶ ಸುಲಭವಾಗಿ ತಿಳಿಯುತ್ತದೆ. ಅದಾದ ನಂತರ ವಾರಕ್ಕೊಮ್ಮೆಯಾದರೂ ಅವರ ಛೇಂಬರಿಗೆ ಹೋಗಿ ಮಾತಾಡುವುದು ರೂಢಿಯಾಯಿತು.


ಪರಿಚಯ ಗಾಢವಾದ ಮೇಲೆ, 'ತುಂಬ ಜನ ಪೊಲೀಸ್ ಅಧಿಕಾರಿಗಳು ಯಾರ ಬಳಿಯೂ ಮಾತಾಡೋದೆ ಇಲ್ಲ. ಏನೋ ಸಲ್ಲದ ಗತ್ತು ಬಿಗುಮಾನ. ಸ್ನೇಹವೇನಾದರೂ ಬೆಳೆದು ಬಿಟ್ಟರೆ ಕಾಸು ಕೀಳೋದಿಕ್ಕೆ ಆಗೋದಿಲ್ಲವಲ್ಲ ಎಂಬ ಹವಣಿಕೆ ಕಾಣುತ್ತಿರುತ್ತೆ. atleast ಜನರನ್ನು ವಿಚಾರಿಸಿ ಅವರ ಕಷ್ಟ ಸುಖ ಏನೂಂತ ಕೇಳ್ತೀರಲ್ಲಾ. ಇದನ್ನು ಮುಂದುವರೆಸಿ' ಅಂದಿದ್ದರು. ಬೇರೆ ಪತ್ರಿಕೆಗಳಲ್ಲಿ ನನ್ನ ಲೇಖನ ಬಂದಿದ್ದರೂ, ಫೋನ್ ಮಾಡಿ ವಿಶ್ಲೇಷಿಸುವ ಸಹೃದಯತೆ ಅವರದು. ಅವರು ನೀಡಿದ ಸಾಂದರ್ಭಿಕ ಅಮೂಲ್ಯ ಸಲಹೆಗಳಿಂದಾಗಿ ನನ್ನ ಬರವಣಿಗೆ ಎಷ್ಟೋ ಸುಧಾರಿಸಿತು.

ಹಿರಿಯರಿಗೆ ಶ್ರದ್ಧಾಂಜಲಿ.

ಪತ್ರಿಕೋದ್ಯಮದ 'ಭೀಷ್ಮ' ಡಾ.ಕೆಬಿಜಿಗೆ ಸಾರ್ವಜನಿಕರಿಂದ ಅಶ್ರುತರ್ಪಣ

ಮೈಸೂರು, ಜು.13(ಎಂಟಿವೈ)- ಮೈಸೂರು ಭಾಗದಲ್ಲಿ ಪ್ರಾದೇಶಿಕ ಪತ್ರಿಕೆಗಳನ್ನು ಯಶಸ್ವಿಯಾಗಿ ಮುನ್ನಡೆಸಿ, ಎಲ್ಲಾ ವರ್ಗದ ಜನರ ಪ್ರೀತಿಗೆ ಪಾತ್ರರಾಗಿದ್ದ ಡಾ.ಕೆ.ಬಿ.ಗಣಪತಿ ಅವರ ನಿಧನಕ್ಕೆ ಸಾರ್ವಜನಿಕ ವಲಯದಿಂದ ತೀವ್ರ ಸಂತಾಪ ವ್ಯಕ್ತವಾಗಿದೆ.

ಮೈಸೂರು, ಕೊಡಗು, ಚಾಮರಾಜನಗರ, ಮಂಡ್ಯ, ಹಾಸನ ಸೇರಿದಂತೆ ವಿವಿಧೆಡೆ ಮನೆಮಾತಾಗಿರುವ ಪ್ರಾದೇಶಿಕ ಪತ್ರಿಕೆ 'ಮೈಸೂರು ಮಿತ್ರ' ಹಾಗೂ ಸಂಜೆ ಇಂಗ್ಲೀಷ್ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಓದುಗ ವರ್ಗ ಕೆಬಿಜಿ ಅವರ ಅಗಲಿಕೆಗೆ ಅಶ್ರುತರ್ಪಣೆ ಅರ್ಪಿಸಿದೆ. ಅದರಲ್ಲೂ 'ಮೈಸೂರು ಮಿತ್ರ' ಪತ್ರಿಕೆಯನ್ನು ಪ್ರತಿದಿನ ಅವಲಂಬಿಸಿರುವ ಆಟೋ ಚಾಲಕರು, ಟೀ-ಸ್ಟಾಲ್ ಮಾಲೀಕರು, ಬೀದಿಬದಿ ವ್ಯಾಪಾರಿಗಳು ಪ್ರೀತಿಪೂರ್ವಕ ಸಂತಾಪ ವ್ಯಕ್ತಪಡಿಸಿ, ಅಗಲಿದ ಮಹಾನ್ ಚೇತನಕ್ಕೆ ಗೌರವ ಸಮರ್ಪಿಸಿದ್ದಾರೆ.



ಡಾ.ಕೆ.ಬಿ.ಗಣಪತಿ

ವಿವಿಧ ಸಂಘಟನೆಗಳಿಂದ ಸಂತಾಪ: ಭಾನುವಾರ ಬೆಳಗ್ಗೆ ನಿಧನರಾದ ಡಾ.ಕೆ.ಬಿ. ಗಣಪತಿ ಅವರ ಆತ್ಮಕ್ಕೆ ಶಾಂತಿ ಕೋರಿ ವಿವಿಧ ಸಂಘಟನೆಗಳು ಸಂತಾಪ ಸಂದೇಶ ಕಳುಹಿಸಿವೆ. ಪ್ರತಿದಿನ ಬೆಳಗ್ಗೆ ಮನೆ ಮನೆಗೆ ಪತ್ರಿಕೆ ವಿತರಿಸುವ ಪತ್ರಿಕಾ ವಿತರಕರ ಸಂಘ, ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಸಂಘ, ಕಟ್ಟಡ ಕಾರ್ಮಿಕರ ಸಂಘ, ಬೀದಿ ಬದಿ ವ್ಯಾಪಾರಿಗಳ ಸಂಘ ಸೇರಿದಂತೆ ಅನೇಕ ಸಂಘಟನೆಗಳ ಕಾರ್ಯಕರ್ತರು, ಮುಖಂಡರು ಸಂತಾಪ ಸೂಚಿಸುವ ಮೂಲಕ ಹಿರಿಯ ಪತ್ರಕರ್ತರಾಗಿದ್ದ ಗಣಪತಿ ಅವರಿಗೆ ಗೌರವ ಸಮರ್ಪಿಸಿದ್ದಾರೆ.

► ಕೆ.ಬಿ.ಗಣಪತಿ ಅವರ ನಿಧನ ಸುದ್ದಿ ಕೇಳಿ ನೋವುಂಟಾಗಿದೆ. ಪ್ರತಿದಿನ 'ಮೈಸೂರು ಮಿತ್ರ' ಪತ್ರಿಕೆಯನ್ನು ನಮ್ಮ ಟೀ-ಸ್ಟಾಲ್‌ಗೆ ತರಿಸುತ್ತೇವೆ. ನಾವು ಪತ್ರಿಕೆ ಓದದೇ ಇದ್ದರೆ ಸಮಾದಾನವಾಗುವುದಿಲ್ಲ. ಟೀ ಕುಡಿಯಲು ಬರುವ ಗ್ರಾಹಕರೂ 'ಮೈಸೂರು ಮಿತ್ರ' ಪತ್ರಿಕೆಯನ್ನೇ ಹೆಚ್ಚಾಗಿ ಕೇಳುತ್ತಾರೆ. ಅಂತಹ ಪತ್ರಿಕೆ ಮುನ್ನಡೆಸಿದ ಡಾ.ಕೆ.ಬಿ.ಗಣಪತಿ ಅವರು ನಿಧನರಾದ ಸುದ್ದಿ ಬೇಸರವನ್ನುಂಟು ಮಾಡಿದೆ. **–ಕೆಂಪಾಚಾರಿ, ಟೀ-ಸ್ಟಾಲ್ ಮಾಲೀಕರು.**


► ನಾವು 'ಮೈಸೂರು ಮಿತ್ರ' ಪತ್ರಿಕೆಯನ್ನು ಪ್ರತಿದಿನ ಖರೀದಿಸಿ, ಆಟೋರಿಕ್ಷಾದಲ್ಲಿಟ್ಟಿರುತ್ತೇವೆ. ಪ್ರಯಾಣಿಕರು ಪತ್ರಿಕೆಯನ್ನು ಓದುತ್ತಾರೆ. ಆದರೆ, ಇಂದು ಕೆಬಿಜಿ ಸರ್ ಇಹಲೋಕ ತ್ಯಜಿಸಿದ ಸುದ್ದಿಯನ್ನು ವಾಟ್ಸಪ್‌ನಲ್ಲಿ ನೋಡಿ ಬೇಜಾರಾಯಿತು. ನಾನು ಕೆಬಿಜಿ ಅವರನ್ನು ಭೇಟಿ ಮಾಡಿಲ್ಲದೇ ಇದ್ದರೂ, ಪತ್ರಿಕೆ ಮೂಲಕ ಅವರ ಮೇಲೆ ಹೆಚ್ಚು ಅಭಿಮಾನವಿದೆ. ಹಲವು ವರ್ಷಗಳಿಂದ ಉತ್ತಮ ಪತ್ರಿಕೆಯನ್ನು ನಮಗೆ ಕೊಡುಗೆ ನೀಡಿರುವುದಕ್ಕೆ ನಾವು ಆಭಾರಿಯಾಗಿದ್ದೇವೆ. ದೇವರು ಅವರ ಆತ್ಮಕ್ಕೆ ಶಾಂತಿ ಕೋರಲಿ ಎಂದು ಪ್ರಾರ್ಥಿಸುತ್ತೇವೆ. **–ಮಹದೇವ, ಆಟೋ ಚಾಲಕ**

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಮೈಸೂರಿನ ಸ್ಮಾರಕ. ಜನಪರ ಹಾಗೂ ನ್ಯಾಯಪರವಾಗಿ ಪತ್ರಿಕೆಗಳನ್ನು ನಡೆಸಬೇಕೆಂದು ಧೈರ್ಯವಾಗಿ ಪತ್ರಿಕಾ ರಂಗಕ್ಕೆ ಕೆ.ಬಿ. ಗಣಪತಿಯವರು ಪಾದಾರ್ಪಣೆ ಮಾಡಿದವರು. ಸುಮಾರು 50 ವರ್ಷಗಳ ಕಾಲ ಪತ್ರಿಕಾರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರ ಸೇವೆ ಅನನ್ಯ. ಕೆ.ಬಿ.ಗಣಪತಿ ಅವರನ್ನು ಮೈಸೂರಿಗರು ನೆನಪಿಸಿಕೊಳ್ಳಬೇಕು. ಮೈಸೂರಿನ ಪತ್ರಿಕಾ ರಂಗಕ್ಕೆ ಕೆಬಿಜಿ ಅವರೇ ಸ್ಟಾರ್. ಅವರ 50 ವರ್ಷಗಳ ಅವರ ಬರವಣಿಗೆ ಅದ್ಭುತ. ಜನಪರ ಚಿಂತನೆ ಹೊಂದಿದ್ದ ಕೆಬಿಜಿ ಅವರಂತಹ ಪರಂಪರೆ ಮತ್ತೆ ನೋಡಲು ಸಾಧ್ಯವಿಲ್ಲ. ಕೆಬಿಜಿಯವರ ನಿಧನದ ಸುದ್ದಿ ಕೇಳಿ ಅತೀವ ದುಃಖ ಉಂಟಾಯಿತು. ಕೋಟಿ ಕೋಟಿ ಜನರ ಪ್ರೀತಿ ಹಾಗೂ ಅಭಿಮಾನಕ್ಕೆ ಅವರು ಪಾತ್ರರಾಗಿದ್ದಾರೆ. ಇಡೀ ಕರ್ನಾಟಕ ಮಾತ್ರ ವಲ್ಲದೆ ದೇಶ-ವಿದೇಶದಲ್ಲೂ ಕೆಬಿಜಿಯವರ ಸ್ನೇಹಿತರು ಬಹಳ ಜನ ಇದ್ದಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. **–ವಾಟಾಳ್ ನಾಗರಾಜ್, ಕನ್ನಡಪರ ಹೋರಾಟಗಾರರು.**



'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಶ್ರೀ ಕೆ.ಬಿ.ಗಣಪತಿಯವರ ನಿಧನದೊಂದಿಗೆ ಮೈಸೂರು ಪತ್ರಿಕಾ ರಂಗದ ಬಹಳ ದೊಡ್ಡ ಅಧ್ಯಾಯ ಸಮಾಪ್ತಿ ಆದಂತೆ ಆಗಿದೆ. ಪತ್ರಿಕಾ ರಂಗದಲ್ಲಿ ಮೈಸೂರಿನ ಛಾಪು ಬಹಳ ದೊಡ್ಡದು.

ಆದರೆ ಇಡೀ ರಾಷ್ಟ್ರದ ಗಮನ ಸೆಳೆಯುವ ಹಾಗೆ ಮೈಸೂರು ಪತ್ರಿಕೋದ್ಯಮವನ್ನು ಬೆಳೆಸಿದ ಮಹನೀಯರಲ್ಲಿ ಕೆ.ಬಿ.ಗಣಪತಿ ಪ್ರಮುಖರು. ಕೆ.ಬಿ.ಗಣಪತಿಯವರು 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಮೂಲಕ ರಾಜ್ಯ ಮಾತ್ರವಲ್ಲದೇ ರಾಷ್ಟ್ರದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.



ಕೆಬಿಜಿಯವರ ನಿಧನದಿಂದ ಮೈಸೂರಿನಲ್ಲಿ ದೊಡ್ಡ ಶೂನ್ಯ ನಿರ್ಮಾಣವಾದಂತೆ ಆಗಿದೆ. ಅರ್ಧ ಶತಮಾನ ಕಾಲ ಮೈಸೂರು ಪತ್ರಿಕಾ ರಂಗವನ್ನು ಕಟ್ಟಿದಂತಹ ಕೆ.ಬಿ.ಗಣಪತಿಯವರ ನಿಧನದಿಂದ ಅತೀವ ದುಃಖ ಉಂಟಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

–ಪ್ರೊ.ಎಂ.ಕೃಷ್ಣೇಗೌಡ, ವಾಗ್ಮಿಗಳು ಹಾಗೂ ಚಿಂತಕರು.

ಶ್ರೀ ಕೆ.ಬಿ.ಗಣಪತಿಯವರು ಕಟ್ಟಿ ಬೆಳೆಸಿದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಬಹಳ ದೀರ್ಘಕಾಲದಿಂದ ಪ್ರತಿಯೊಬ್ಬರೂ ಕೊಂಡು ಓದುವಂತಹ ಪತ್ರಿಕೆಗಳಾಗಿ ಪ್ರತಿಷ್ಠೆಯನ್ನು ಕಾಯ್ದುಕೊಂಡಿವೆ. ಈ ಎರಡು ಪತ್ರಿಕೆಗಳು ರಾಜ್ಯ, ರಾಷ್ಟ್ರ ಮತ್ತು ಸ್ಥಳೀಯವಾದ ಪ್ರಮುಖವಾದ ಸಂಗತಿಗಳನ್ನು ಜನರಿಗೆ ಮುಟ್ಟಿಸುವಲ್ಲಿ ಮುಂಚೂಣಿಯಲ್ಲಿರುವುದು ಇದಕ್ಕೆ ಕಾರಣ. ಯಾವುದೇ ಸರ್ಕಾರ ಇರಲಿ, ಆ ಸರ್ಕಾರದ ತಪ್ಪುಗಳ ಬಗ್ಗೆ ಎಚ್ಚರಿಸುವ ಕೆಲಸವನ್ನು ಕೆ.ಬಿ. ಗಣಪತಿಯವರ ಸಾರಥ್ಯದಲ್ಲಿ ಈ ಪತ್ರಿಕೆಗಳ ಮೂಲಕ ಮಾಡಲಾಗಿದೆ. ತಮ್ಮ ಬರವಣಿಗೆ ಮೂಲಕ ಸರ್ಕಾರದ ತಪ್ಪು ನಿರ್ಧಾರಗಳನ್ನು ಕಟುವಾಗಿಯೇ ಕೆಬಿಜಿ ಟೀಕೆ ಮಾಡುತ್ತಿದ್ದರು. ಜೊತೆಗೆ ಸಾಮಾಜಿಕ ಕಳಕಳಿಯಲ್ಲಿ ಪತ್ರಿಕೆಗಳು ಮೂಡಿ ಬರಲು ಇವರು ಶ್ರಮಿಸುತ್ತಿದ್ದರು. ಸಮಾಜದ ಸುಸ್ಥಿತಿಗೆ ಹಾಗೂ ಶ್ರೀಸಾಮಾನ್ಯರ ರಕ್ಷಣೆಗೆ ಹಾಗೂ ಬಡವರ ಏಳಿಗೆಗೆ ತಮ್ಮ ಪತ್ರಿಕೆಗಳಲ್ಲಿ ಅಂಕಣಗಳನ್ನೇ ಮೀಸಲಾಗಿಟ್ಟಿದ್ದಾರೆ ಕೆಬಿಜಿಯವರು. ಇವರ ನಿಧನದಿಂದ ಸಾಮಾಜಿಕ ಕಳಕಳಿಯುಳ್ಳಂತಹ ಮಹಾ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತೆ ಆಗಿದ್ದು, ಇದು ಅತೀವ ದುಃಖ ಉಂಟು ಮಾಡಿದೆ. ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. **–ಮರಿತಿಬ್ಬೇಗೌಡ, ಮಾಜಿ ಸದಸ್ಯರು, ವಿಧಾನಪರಿಷತ್.**



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೆಬಿಜಿಯವರ ಜೀವನದ ಬಹುಮುಖ ದೃಶ್ಯಾವಳಿ...



ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸ್ಥಾಪಿಸಿ, ಅದರಡಿ 1978ರಲ್ಲಿ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯನ್ನು ಪ್ರಾರಂಭಿಸಿದ್ದ ಡಾ.ಕೆ.ಬಿ.ಗಣಪತಿಯವರೊಂದಿಗೆ ಆಪ್ತ ಮಿತ್ರ ಸಿ.ಪಿ.ಚಿಣ್ಣಪ್ಪ.



ಸ್ಟಾರ್ ಆಫ್ ಮೈಸೂರ್ ಪತ್ರಿಕೆಯ 25ನೇ ವಾರ್ಷಿಕೋತ್ಸವವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಉದ್ಘಾಟಿಸಿದ್ದರು. ಚಿತ್ರದಲ್ಲಿ ಮತ್ತೂರು ಕೃಷ್ಣಮೂರ್ತಿ, ಕೆ.ಬಿ.ಗಣಪತಿ, ಅವರ ಪತ್ನಿ ರ‍್ಯಾಲಿ ಗಣಪತಿ, ಸಿ.ಪಿ.ಚಿಣ್ಣಪ್ಪ, ವಿ.ಶ್ರೀನಿವಾಸಪ್ರಸಾದ್, ಟಿ.ಜೆ.ಎಸ್.ಜಾರ್ಜ್, ಅಡಗೂರು ಹೆಚ್.ವಿಶ್ವನಾಥ್ ಇದ್ದಾರೆ.



ಪ್ರಖ್ಯಾತ ಆಂಗ್ಲ ಕಾದಂಬರಿಕಾರ ಆರ್.ಕೆ.ನಾರಾಯಣ್ ಮತ್ತು 'ದಿ ಹಿಂದೂ' ಪತ್ರಿಕೆಯ ಎನ್.ರಾಮ್ ಅವರೊಂದಿಗೆ ಕೆ.ಬಿ. ಗಣಪತಿಯವರು.




2001ರಲ್ಲಿ ಬೆಂಗಳೂರಲ್ಲಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಕೆ.ಬಿ.ಗಣಪತಿಯವರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪ್ರದಾನ ಮಾಡಿದರು. ಸಚಿವ ಕೋಟೆ ಶಿವಣ್ಣ ಸೇರಿದಂತೆ ಇನ್ನಿತರರು ಚಿತ್ರದಲ್ಲಿದ್ದಾರೆ.



2008ರಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರಿಗೆ 'ರಾಜ್ಯೋತ್ಸವ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು. ಚಿತ್ರದಲ್ಲಿ (ಎಡದಿಂದ) ಅಂದಿನ ಸಾರಿಗೆ ಸಚಿವ ಆರ್.ಅಶೋಕ್, ವಾರ್ತಾ ಹಾಗೂ ಐಟಿ–ಬಿಟಿ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮನು ಬಳಿಗಾರ್, ವಿಧಾನಪರಿಷತ್ ಸಭಾಪತಿ ವೀರಣ್ಣ ಮತ್ತಿಕಟ್ಟಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಕಾಣಬಹುದು.




'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಪ್ರಧಾನ ಕಚೇರಿಯ ಹೊರ ನೋಟ.



ಮುಖ್ಯಮಂತ್ರಿಯಾಗಿದ್ದ ಗುಂಡೂರಾವ್ ಅವರೊಂದಿಗೆ ಕೆಬಿಜಿ ಮಾತುಕತೆ.



ಹಿಂದೂ ಪತ್ರಿಕೆಯ ಎನ್.ರಾಮ್ ಅವರೊಂದಿಗೆ ಕೆಬಿಜಿಯವರ ಸಂದರ್ಶನ.



ಕೆ.ಬಿ.ಗಣಪತಿಯವರು ಮಾಜಿ ಸಚಿವ ಜಿ.ಟಿ.ದೇವೇಗೌಡರೊಂದಿಗೆ ಕಾರ್ಯಕ್ರಮವೊಂದರಲ್ಲಿ ಸಂತಸದ ಕ್ಷಣ.



ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿ ವಿಂಟೇಜ್ ಕಾರ್ ರ‍್ಯಾಲಿಗೆ ಚಾಲನೆ ಕೊಟ್ಟ ಸಂದರ್ಭದಲ್ಲಿ ಕೆ.ಬಿ.ಜಿ. ಅವರೊಂದಿಗೆ ಮಾಜಿ ಸಂಸದ ಪ್ರತಾಪ್ ಸಿಂಹ



ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಡಾ.ಕೆ.ಬಿ.ಗಣಪತಿಯವರು ಗಣ್ಯರ ಭಾಷಣವನ್ನು ತದೇಕಚಿತ್ತದಿಂದ ಆಲಿಸುತ್ತಿರುವ ದೃಶ್ಯ.



ಕಾರ್ಯಕ್ರಮವೊಂದರಲ್ಲಿ ನಟ, ಪರಿಸರವಾದಿ ಸುರೇಶ್ ಹೆಬ್ಳೀಕರ್ ಅವರೊಂದಿಗೆ ಕೆ.ಬಿ.ಗಣಪತಿಯವರು ಚರ್ಚೆಯಲ್ಲಿ ತಲ್ಲೀನರಾಗಿರುವುದು.



ಅಯೋಧ್ಯೆಯ ಬಾಲರಾಮನ ಮೂರ್ತಿ ಕೆತ್ತಿದ ಶಿಲ್ಪಿ ಅರುಣ್ ಯೋಗಿರಾಜ್ ಅವರಿಂದ ಮಾಹಿತಿ ಪಡೆಯುತ್ತಿರುವ ಕೆ.ಬಿ.ಗಣಪತಿ.




ಲಾ ಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರನ್ನು ಮಾಜಿ ಸಚಿವ ಜಿ.ಟಿ.ದೇವೇಗೌಡ ಆತ್ಮೀಯವಾಗಿ ಅಭಿನಂದಿಸುತ್ತಿರುವುದು.



ಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್ ಅವರ 'ದಿ ಕಾಮನ್ ಮ್ಯಾನ್' ಪ್ರತಿಕೃತಿಗೆ ಅಭಿನಂದಿಸುತ್ತಿರುವ ಕೆ.ಬಿ.ಜಿ!

ಗಣ್ಯರಿಂದ ಡಾ. ಕೆ.ಬಿ.ಗಣಪತಿಯವರಿಗೆ ಅಂತಿಮ ನಮನ

ಅಶ್ರುತರ್ಪಣ



ಕಾವೇರಿ ಕನ್ನಡದ ಕೊಡಗಿನ
ಸುಪುತ್ರನೆ, ನನ್ನೊಂದು ಹನಿ ನಿನಗೆ
ಅರ್ಪಿಸುವೆ ದುಃಖದಲಿ, ಸುದ್ದಿ
ಮಾಧ್ಯಮದ ಶ್ರೇಷ್ಠ ಪತ್ರಕರ್ತನೆ
ನಿನಗಿಂದು

ಕತ್ತಿಗಿಂತಲು ಮಿಗಿಲು ಲೇಖನಿ
ಅಲುಗು ಎಂಬ ತತ್ವದ ಕೀರ್ತಿ
ಪತಾಕೆಯ ಗಗನದೆತ್ತರಕೆ ಏರಿಸಿದೆ
ನಿರ್ಭಯದಿ ಜನಮನದ ನೆಚ್ಚಿನ
ಮೈಸೂರು ತಾರೆ, ಮಿತ್ರರನು

ದಿನ ದಿನವು
ಚೈತ್ರೋದಯುದಭ್ಯುದಯುದಲಿ
ಹೊಸ ಹೊಸತು ಹೂವುಗಳ
ಸುದ್ದಿಂಯಾಭರಣ ತುಂತುಂಬಿ
ಜನಮನವ ಬೆಳಗಿಸಿದೆ ನೀನು
ದಿಟ್ಟನೂ ನೀನು ಸನ್ಮಿತ್ರನೂ ನೀನು

ಬಾಳ ದಾರಿಯ ಪಯಣ ಮುಗಿವ
ಮುನ್ನವೆ ಹೀಗೆ ಆದೆಯಾ ನೀನೆ
ಹೊಳೆವ ಧ್ರುವ ತಾರೆ!

–ಎಚ್ ಆರ್ ಲೀಲಾವತಿ



ಕೆಬಿಜಿ ಅವರ ಪುತ್ರ ವಿಕ್ರಂ ಮುತ್ತಣ್ಣ ಅವರಿಗೆ ಸುತ್ತೂರು ಶ್ರೀಗಳು ಸಾಂತ್ವನ ಹೇಳಿದರು



ಸಿಐಟಿಬಿ(ಎಂಡಿಎ) ಮಾಜಿ ಅಧ್ಯಕ್ಷ ಮನೆ ಮಾದೇಗೌಡರಿಂದ ಅಂತಿಮ ನಮನ



ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಂದ ಅಂತಿಮ ನಮನ



ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್ ಅವರಿಂದ ಅಂತಿಮ ದರ್ಶನ



ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಕುಟುಂಬದಿಂದ ಅಂತಿಮ ದರ್ಶನ



ಬಿವಿಬಿ ಮೈಸೂರು ಕೇಂದ್ರದ ಉಪಾಧ್ಯಕ್ಷ ಸಿ.ನಾಗಣ್ಣ ಅವರಿಂದ ಅಂತಿಮ ದರ್ಶನ



ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣರಿಂದ ಅಂತಿಮ ನಮನ



ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಬಸವೇಗೌಡರಿಂದ ಅಂತಿಮ ದರ್ಶನ



ಚಿಂತಕ ಚಕ್ರವರ್ತಿ ಸೂಲಿಬೆಲೆ ಅವರಿಂದ ಅಂತಿಮ ನಮನ



ಮಾಜಿ ಕಾರ್ಪೋರೇಟರ್ ಸ್ನೇಕ್ ಶ್ಯಾಮ್‌ರಿಂದ ಅಂತಿಮ ನಮನ



ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ತಂದೆ ಪ್ರೇಂಕುಮಾರ್‌ರಿಂದ ಅಂತಿಮ ನಮನ



ಶಾಸಕ ಕೆ.ಹರೀಶ್‌ಗೌಡ, ಎಸ್.ಚಂದ್ರಶೇಖರ್, ವಿಕ್ರಾಂತ್ ಪಿ.ದೇವೇಗೌಡರಿಂದ ಅಂತಿಮ ನಮನ



ಮಾಜಿ ಸಚಿವ ಎ.ಎಸ್.ರಾಮದಾಸ್‌ರಿಂದ ಅಂತಿಮ ನಮನ



ಮಾಜಿ ಸಚಿವ ಸಾ.ರಾ.ಮಹೇಶ್‌ರಿಂದ ಅಂತಿಮ ದರ್ಶನ



ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಅವರಿಂದ ಅಂತಿಮ ದರ್ಶನ



ರಘುಲಾಲ್ ಅಂಡ್ ಕಂಪನಿ ಮಾಲೀಕ ರಾಘವನ್ ಅವರಿಂದ ಅಂತಿಮ ನಮನ



ಮಾಜಿ ಮೇಯರ್ ಶಿವಕುಮಾರ್ ಅವರಿಂದ ಅಂತಿಮ ನಮನ



ಮಹಾಲಕ್ಷ್ಮಿ ಸ್ವೀಟ್ಸ್ ಮಾಲೀಕ ಶಿವಕುಮಾರ್ ಅವರಿಂದ ಅಂತಿಮ ದರ್ಶನ



ಮಾಜಿ ಮೇಯರ್‌ಗಳಾದ ಮೋದಾಮಣಿ, ಪುಷ್ಪಲತಾ ಟಿ. ಚಿಕ್ಕಣ್ಣರಿಂದ ಅಂತಿಮ ನಮನ



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮುರಿಂದ ಅಂತಿಮ ನಮನ



ಉದ್ಯಮಿ ಪಿ.ವಿ.ಗಿರಿ, ಮಾಜಿ ಕಾರ್ಪೋರೇಟರ್ ನಂದೀಶ್ ಪ್ರೀತಂ ಅವರಿಂದ ಅಂತಿಮ ದರ್ಶನ



ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅವರಿಂದ ಅಂತಿಮ ನಮನ



'ಸ್ಟಾರ್ ಆಫ್ ಮೈಸೂರ್' ಅಂಕಣಕಾರ ವೈದ್ಯ ಡಾ. ಜಾವೀದ್ ನಯೀಮ್ ಅಂತಿಮ ನಮನ



ಮಾಜಿ ಉಪ ಮೇಯರ್ ಶೈಲೇಂದ್ರ ಅವರಿಂದ ಅಂತಿಮ ದರ್ಶನ


ಮಾಜಿ ಸಚಿವ ಜಿ.ಟಿ.ದೇವೇಗೌಡರಿಂದ ಕೆಬಿಜಿಗೆ ಅಂತಿಮ ಗೌರವ


ಮಾಜಿ ಸಂಸದ ಪ್ರತಾಪ್ ಸಿಂಹರಿಂದ ಕೆಬಿಜಿಗೆ ಅಂತಿಮ ಗೌರವ


ಪಬ್ಲಿಕ್ ಟಿವಿ ಮುಖ್ಯಸ್ಥ ರಂಗನಾಥ್ ಅವರಿಂದ ಕೆಬಿಜಿ ಅಂತಿಮ ದರ್ಶನ


ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರಿಂದ ಅಂತಿಮ ನಮನ


ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರು ಕೆಬಿಜಿಯವರ ಕುಟುಂಬಕ್ಕೆ ಸಾಂತ್ವನ ಹೇಳಿದರು


ಶಾಸಕ ಶ್ರೀವತ್ಸ, ಮಾಜಿ ಶಾಸಕ ಸಿದ್ದರಾಜು ಅವರಿಂದ ಕೆ.ಬಿ. ಗಣಪತಿ ಅವರಿಗೆ ಅಂತಿಮ ಗೌರವ


ಖ್ಯಾತ ವಕೀಲ ಎಸ್.ಅರುಣ್ ಕುಮಾರ್ ದಂಪತಿಯಿಂದ ಅಂತಿಮ ದರ್ಶನ


ವೈದ್ಯ ಸಾಹಿತಿ ಡಾ. ಎಸ್.ಪಿ.ಯೋಗಣ್ಣ ಅವರಿಂದ ಅಂತಿಮ ನಮನ


ಮಾಜಿ ಕಾರ್ಪೋರೇಟರ್ ಕೆ.ವಿ.ಶ್ರೀಧರ್‌ರಿಂದ ಕೆಬಿಜಿ ಅವರಿಗೆ ಅಂತಿಮ ನಮನ


ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರಿಂದ ಅಂತಿಮ ನಮನ


ಶಾಸಕ ಗಣೇಶ್ ಮಹದೇವ್ ಪ್ರಸಾದ್, ಮಾಜಿ ಸಚಿವೆ ಗೀತಾ ಮಹದೇವ ಪ್ರಸಾದ್‌ರಿಂದ ಅಂತಿಮ ನಮನ


ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಪುತ್ರ ಸಂದೇಶ್‌ರಿಂದ ಅಂತಿಮ ಗೌರವ


ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜೀ, ಕೌಟಿಲ್ಯ ರಘು, ಎಲ್.ನಾಗೇಂದ್ರರಿಂದ ಅಂತಿಮ ನಮನ


ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡರಿಂದ ಅಂತಿಮ ದರ್ಶನ


ವಾರ್ತಾ ಮತ್ತು ಪ್ರಸಾರ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ವಿಜಯ್‌ಕುಮಾರ್ ದಂಪತಿ ದರ್ಶನ


ಮಾಜಿ ಶಾಸಕ ಡಾ. ಭಾರತಿ ಶಂಕರ್ ಅವರಿಂದ ಅಂತಿಮ ನಮನ


ಗಂಜಿಫಾ ರಘುಪತಿ ಭಟ್, ಟಿ.ಎಸ್.ಸುಬ್ರಹ್ಮಣ್ಯ ಅವರಿಂದ ಅಂತಿಮ ನಮನ


ಬಿಜೆಪಿ ಮುಖಂಡ ಕವೀಶ್‌ಗೌಡರಿಂದ ಅಂತಿಮ ನಮನ


ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅವರಿಂದ ಅಂತಿಮ ದರ್ಶನ


ಅಂಕಣಕಾರ ತ್ರಿಪುರಾಂತಕ ಅವರಿಂದ ಕೆಬಿಜಿ ಅವರಿಗೆ ಅಂತಿಮ ನಮನ


ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್‌ರಿಂದ ಅಂತಿಮ ನಮನ


ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್ ಅವರಿಂದ ಅಂತಿಮ ದರ್ಶನ


ಡಾ.ರಾಜಶೇಖರ್ ಮತ್ತು ಸಾಹಿತಿ ಡಾ. ಲತಾ ರಾಜಶೇಖರ್ ದಂಪತಿಯಿಂದ ಅಂತಿಮ ನಮನ


ವಿಧಾನ ಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡರಿಂದ ಅಂತಿಮ ದರ್ಶನ

ಕೊಡಗು ಪತ್ರಕರ್ತರ ಸಂಘ ಸಂತಾಪ



ಮಡಿಕೇರಿ,ಜು.13– ಮೂಲತಃ ಕಕ್ಕಬ್ಬೆ ನಿವಾಸಿ ಹಿರಿಯ ಪತ್ರಕರ್ತ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ. ಕಲ್ಯಾಟಂಡ ಬಿ.ಗಣಪತಿ ಅವರ ನಿಧನಕ್ಕೆ ಕೊಡಗು ಪತ್ರಕರ್ತರ ಸಂಘ ತೀವ್ರ ಸಂತಾಪ ಸೂಚಿಸಿದೆ.

ಗಣಪತಿ ಅವರು ತಮ್ಮ ಪತ್ರಿಕೆಗಳ ಮೂಲಕ ಕರ್ನಾಟಕದ ಪ್ರಾದೇಶಿಕ ಪತ್ರಿಕೋದ್ಯಮಕ್ಕೆ ಹೊಸ ದಿಕ್ಕು ತೋರಿದವರು. ಮೈಸೂರಿನಲ್ಲಿ ಇಂಗ್ಲಿಷ್ ಪತ್ರಿಕೋದ್ಯಮಕ್ಕೆ ಕಾಯಕಲ್ಪ ನೀಡಿದ ಹೆಗ್ಗಳಿಕೆ ಗಣಪತಿ ಅವರದ್ದು. ಕೆ.ಬಿ.ಗಣಪತಿ ಅವರ ಪತ್ರಿಕಾ ಸಾಧನೆ ರಾಜ್ಯದ ಇತಿಹಾಸದಲ್ಲಿ ಸದಾ ಸ್ಮರಣೀಯ ಎಂದು ಸ್ಮರಿಸಿರುವ ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಎಚ್.ಟಿ, ಮೃತರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ದೇವರು ಕರುಣಿಸಲಿ ಎಂದು ಕೋರಿದ್ದಾರೆ.

ಹಡಪದ ಅಪ್ಪಣ್ಣರಿಂದ ಸಾಮಾಜಿಕ ಬದಲಾವಣೆ

ಮಡಿಕೇರಿ, ಜು.13–ಹನ್ನೆರಡನೆ ಶತಮಾನದಲ್ಲಿ ಬಸವಣ್ಣ ಅವರಿಗೆ ಶಿವಶರಣ ಹಡಪದ ಅಪ್ಪಣ್ಣ ಅವರು ಆತ್ಮೀಯರಾಗಿ, ಸಮಾಜ ಸುಧಾರಣೆಗೆ ಶ್ರಮಿಸಿದ್ದಾರೆ ಎಂದು ಕುಶಾಲನಗರದ ಕನ್ನಡ ಭಾರತಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಕೆ.ಎ.ಸೌಮ್ಯ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಗರದ ಗಾಂಧಿ ಭವನದಲ್ಲಿ ಇಂದು ನಡೆದ ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶರಣರು 12ನೇ ಶತಮಾನದಲ್ಲಿ ತಮ್ಮ ವಚನಗಳ ಮೂಲಕ ಸಾಮಾಜಿಕ ಬದಲಾವಣೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ ಎಂದರು.

ಹಡಪದ ಅಪ್ಪಣ್ಣ ಅವರು 12ನೇ ಶತಮಾನದಲ್ಲಿ ಧಾರ್ಮಿಕ, ಸಾಮಾಜಿಕವಾಗಿ ಎಲ್ಲರನ್ನು ಮೇಲೆತ್ತುವಲ್ಲಿ ಶ್ರಮಿಸಿದ್ದಾರೆ. ಎಲ್ಲರಿಗೂ ಸಮಾನತೆ ಕಲ್ಪಿಸಲು ಶ್ರಮಿಸಿದ್ದಾರೆ. ಕಂದಾಚಾರವನ್ನು ಗಟ್ಟಿಯಾಗಿ ಪ್ರಶ್ನಿಸುವ ಮೂಲಕ ಅಸಮಾನತೆ ಹೋಗಲಾಡಿಸಲು ಶ್ರಮಿಸಿದ್ದಾರೆ. ಹಡಪ ಎಂದರೆ ಚೀಲ ಎಂದರ್ಥ, ಕಾಯಕವೇ ಕೈಲಾಸ ಎಂಬಂತೆ ಚೀಲದಲ್ಲಿ ಉಪಕರಣ ಇಟ್ಟುಕೊಂಡು ವೃತ್ತಿ ನಡೆಸಿಕೊಂಡು ಹೋಗುತ್ತಿದ್ದ ಇವರು ಅನುಭವ ಮಂಟಪದಲ್ಲಿ ಬಸವಣ್ಣನವರ ಆಪ್ತ ಕಾರ್ಯದರ್ಶಿ



ಕುಶಾಲನಗರದಲ್ಲಿ ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ ನಡೆಯಿತು.

ಯಾಗಿ ಬಲಗೈ ಬಂಟನಂತೆ ಕಾರ್ಯ ನಿರ್ವಹಿಸಿದ್ದಾರೆ ಎಂದರು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಮಾತನಾಡಿ,12ನೆ ಶತಮಾನದಲ್ಲಿ ಬಸವಣ್ಣನವರ ಜೊತೆ ಎಲ್ಲಾ ಸಮಾಜದವರು ಸೇರಿ ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡಿದರು. ಸಮ ಸಮಾಜ ನಿರ್ಮಾಣಕ್ಕೆ ಎಲ್ಲಾ ವಚನಕಾರರು ಶ್ರಮಿಸಿದ್ದಾರೆ ಎಂದು ತಿಳಿಸಿದರೆ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್ ಮಾತನಾಡಿ ಶಿವಶರಣ ಹಡಪದ ಅಪ್ಪಣ್ಣ ಅವರ ಆದರ್ಶಗಳನ್ನು ತಿಳಿದುಕೊಳ್ಳುವಂತಾಗಬೇಕು. ಬಸವಣ್ಣನವರ ಆತ್ಮೀಯರಾಗಿ ಮೌಢ್ಯತೆ ಮತ್ತು ಕಂದಾಚಾರ ಹೋಗಲಾಡಿಸಲು ಶ್ರಮಿಸಿದ್ದಾರೆ ಎಂದರು.

ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಕೆ.ಎಸ್. ದೊರೇಶ್, ತಹಶೀಲ್ದಾರ್ ಪ್ರವೀಣ್ ಕುಮಾರ್, ಶಿಕ್ಷಣ ಇಲಾಖೆಯ ಉಪ ಯೋಜನಾ ಸಮನ್ವಯಾಧಿಕಾರಿ ಎಂ.ಕೃಷ್ಣಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ, ಮಣಜೂರು ಮಂಜುನಾಥ್, ಬಿ.ಸಿ.ಶಂಕರಯ್ಯ, ರಮ್ಯ ಇತರರಿದ್ದರು.

ಸ್ಕೌಟ್, ಗೈಡ್ಸ್‌ಗೆ ಪದಾಧಿಕಾರಿಗಳ ಆಯ್ಕೆ



ಮಡಿಕೇರಿ,ಜು.13– ಸ್ಕೌಟ್ ಮತ್ತು ಗೈಡ್ಸ್ ಮಡಿಕೇರಿ ತಾಲೂಕು ಸ್ಥಳೀಯ ಸಂಸ್ಥೆಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದ್ದು, ಪದಗ್ರಹಣ ಕಾರ್ಯಕ್ರಮ ಸ್ಕೌಟ್ ಮತ್ತು ಗೈಡ್ ಭವನದಲ್ಲಿ ನಡೆಯಿತು.

ತಾಲೂಕಿನ ನೂತನ ಅಧ್ಯಕ್ಷರಾಗಿ ಈರಮಂಡ ಹರಿಣಿ ವಿಜಯ್, ಉಪಾಧ್ಯಕ್ಷರಾಗಿ ಬಿ.ಎನ್.ರಮೇಶ್, ಪಿ.ಎಂ.ರವಿ, ಅರುಣ್, ನೀಲಮ್ಮ, ಕಡ್ಲೇರ ತುಳಸಿ ಮೋಹನ್, ಕುಡೆಕಲ್ ಸಂತೋಷ್, ಪ್ರಧಾನ ಕಾರ್ಯದರ್ಶಿಯಾಗಿ ಆರ್.ಪಿ.ಚಂದ್ರಶೇಖರ್, ಖಜಾಂಚಿಯಾಗಿ ಸಿ.ಎಸ್.ಕಾವೇರಮ್ಮ, ಸಹ ಕಾರ್ಯದರ್ಶಿಯಾಗಿ ಚಂದನ್ ನಂದರಬೆಟ್ಟು ಹಾಗೂ ನಳಿನಿ ಅವರುಗಳನ್ನು ಆಯ್ಕೆ ಮಾಡಲಾಗಿದೆ. ಸ್ಕೌಟ್ ಮತ್ತು ಗೈಡ್ಸ್ನ ಪ್ರಧಾನ ಆಯುಕ್ತ ಕೆ.ಟಿ.ಬೇಬಿ ಮ್ಯಾಥ್ಯೂ ನೂತನ ಪದಾಧಿಕಾರಿಗಳಿಗೆ ಪ್ರಮಾಣವಚನ ಬೋಧಿಸಿದರು.

ನಾಪೋಕ್ಲು ಪಶು ವೈದ್ಯಕೀಯ ಆಸ್ಪತ್ರೆಗೆ ಭೂಮಿ ಪೂಜೆ

ನಾಪೋಕ್ಲು ಜು.13– ಇಲ್ಲಿನ ಪಶು ವೈದ್ಯಕೀಯ ಆಸ್ಪತ್ರೆಯ ನೂತನ ಕಟ್ಟಡಕ್ಕೆ ಗುರುವಾರ ಭೂಮಿ ಪೂಜೆಯನ್ನು ನೆರವೇರಿಸಲಾಯಿತು.

15 ಲಕ್ಷ ರೂ. ಶಾಸಕರ ಅನುದಾನದಲ್ಲಿ ನಿರ್ಮಿಸಲಾಗುವ ಪಶು ವೈದ್ಯಕೀಯ ಆಸ್ಪತ್ರೆಯ ನೂತನ ಕಟ್ಟಡ ಭೂಮಿ ಪೂಜೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆ ವನಜಾಕ್ಷಿ ರೇಣುಕೇಶ್ ನೆರವೇರಿಸಿದರು..

ಉಪಾಧ್ಯಕ್ಷೆ ಶಶಿ ಮಂದಣ್ಣ, ಗ್ರಾಮ ಪಂಚಾಯತಿ ಸದಸ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎ. ಇಸ್ಮಾಯಿಲ್ , ಗ್ರಾಮ ಪಂಚಾಯತಿ ಸದಸ್ಯ ವಲಯಾಧ್ಯಕ್ಷ ಕುಶು ಕುಶಾಲಪ್ಪ, ಗ್ರಾಮ ಪಂಚಾಯತಿ ಸದಸ್ಯರಾದ ಅರುಣ್ ಬೇಬ, ಹೇಮಾ ಅರುಣ್, ಕೆ ವೈ ಅಶ್ರಫ್, ಪಶುಪಾಲನೆ ಇಲಾಖೆಯ ಉಪನಿರ್ದೇಶಕ ಡಾ. ಲಿಂಗರಾಜ್ ದೊಡ್ಡಮನಿ, ಸಹಾಯಕ ನಿರ್ದೇಶಕ ಡಾ.ಕೆ.ಎ ಪ್ರಸನ್ನ, ಪಶುವೈದ್ಯಾಧಿಕಾರಿ ಡಾ.ಶಿಲ್ಪಶ್ರೀ, ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು .ಅರ್ಚಕ ಮಕ್ಕಿ ದಿವಾಕರ ಪೂಜೆ ನೆರವೇರಿಸಿದರು.



ಪಶು ವೈದ್ಯಕೀಯ ಆಸ್ಪತ್ರೆಯ ನೂತನ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ಎಂ.ಮೊಣ್ಣಪ್ಪ ನಿಧನ

ನಾಪೋಕ್ಲು, ಜು.13– ಕಕ್ಕಬೆ ಗ್ರಾಮ ಪಂಚಾಯಿತಿಯ ಯವಕಪಾಡಿ ಗ್ರಾಮದ ನಿವಾಸಿ ನಿವೃತ್ತ ಮುಖ್ಯ ಶಿಕ್ಷಕ ಕೋಡಿ ಮಣಿಯಂಡ ಎಂ.ಮೊಣ್ಣಪ್ಪ (89) ಶುಕ್ರವಾರ ನಿಧನರಾದರು.



ಶ್ರೀಯುತರ ಅಂತ್ಯಕ್ರಿಯೆ ಶನಿವಾರ ಮೃತರ ಸ್ವಗೃಹದಲ್ಲಿ ನೆರವೇರಿತು. ಮೃತರು ಪತ್ನಿ ಚಿಮ್ಮಿ ಚೋಂದಮ್ಮ, ಓರ್ವ ಪುತ್ರ, ಇಬ್ಬರು ಪುತ್ರಿ ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ. ಮೃತರ ನಿಧನಕ್ಕೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಕೆ.ಬಿ.ಗಣಪತಿಯವರ ನಿಧನಕ್ಕೆ ಶ್ರದ್ಧಾಂಜಲಿ



ಮದ್ದೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿಯವರ ನಿಧನಕ್ಕೆ ಸಂತಾಪ ಸೂಚಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಜಿಲ್ಲಾ ನಿರ್ದೇಶಕರಾದ ಶಿವನಂಜಪ್ಪ, ಎ.ಎಲ್.ಸತೀಶ್, ತಾಲೂಕು ಅಧ್ಯಕ್ಷ ಎಂ.ಆರ್.ಚಕ್ರಪಾಣಿ, ಪ್ರಧಾನ ಕಾರ್ಯದರ್ಶಿ ಎಂ.ಪಿ.ವೆಂಕಟೇಶ್, ಉಪಾಧ್ಯಕ್ಷ ಹರೀಶ್, ಖಜಾಂಚಿ ಪ್ರಭು, ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ ಹಾಗೂ ಎಲ್ಲಾ ಪದಾಧಿಕಾರಿಗಳಿದ್ದರು.

ಹಳ್ಳಕ್ಕೆ ಉರುಳಿದ ಖಾಸಗಿ ಬಸ್: 16 ಮಂದಿಗೆ ತೀವ್ರ ಗಾಯ

ಹಲಗೂರು, ಜು.13– ಖಾಸಗಿ ಬಸ್ಸೊಂದು ರಸ್ತೆ ಬದಿಯ ಹಳ್ಳಕ್ಕೆ ಉರುಳಿ ಬಿದ್ದ ಪರಿಣಾಮ 16 ಮಂದಿ ತೀವ್ರ ಗಾಯಗೊಂಡಿರುವ ಘಟನೆ ಮಳವಳ್ಳಿ ತಾಲೂಕಿನ ಹಲಗೂರು ಸಮೀಪದ ಮುತ್ತತ್ತಿ ರಸ್ತೆಯಲ್ಲಿ ಶನಿವಾರ ಸಂಜೆ ಸಂಭವಿಸಿದೆ.



ಮಳವಳ್ಳಿ ತಾಲೂಕಿನ ಹಲಗೂರಿನಿಂದ ಮುತ್ತತ್ತಿಗೆ ಹೋಗುವ ರಸ್ತೆಯ ಭೀಮೇಶ್ವರಿ ಚೆಕ್‌ಪೋಸ್ಟ್ ಸಮೀಪದ ಕಡಿದಾದ ಇಳಿಜಾರಿನ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಬಸ್ ಹಳ್ಳಕ್ಕೆ ಉರುಳಿದೆ.

ಬೆಂಗಳೂರಿನ ಖಾಸಗಿ ಕಂಪನಿಯೊಂದರ ಸಿಬ್ಬಂದಿ 2 ಬಸ್‌ಗಳಲ್ಲಿ ಮುತ್ತತ್ತಿಗೆ ದೇವರ ಸೇವೆಗೆಂದು ತೆರಳುತ್ತಿದ್ದಾಗ ಮುಂದೆ ಹೋಗುತ್ತಿದ್ದ ಬಸ್ ಇಳಿಜಾರಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿ ಹಳ್ಳಕ್ಕೆ ಉರುಳಿ ಬಿದ್ದು ನಂತರ ಮರಕ್ಕೆ ಡಿಕ್ಕಿ ಹೊಡೆದು ನಿಂತುಕೊಂಡಿದೆ. ಒಂದು ವೇಳೆ ಮರ ಇಲ್ಲದಿದ್ದರೆ ಬಸ್ ಪ್ರಪಾತಕ್ಕೆ ಉರುಳಿ ಬಿದ್ದು ಭಾರೀ ಅನಾಹುತ ಸಂಭವಿಸುತ್ತಿತ್ತು ಎನ್ನಲಾಗಿದೆ.


ಬಸ್‌ನಲ್ಲಿದ್ದ 20 ಮಂದಿ ಪೈಕಿ 16 ಮಂದಿ ತೀವ್ರ ಗಾಯಗೊಂಡಿದ್ದು, ಈ ಪೈಕಿ ಐವರ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳಿಗೆ ಹಲಗೂರು ಹಾಗೂ ಮಳವಳ್ಳಿ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಎಲ್ಲರನ್ನೂ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿದು ಆಸ್ಪತ್ರೆಗೆ ಆಗಮಿಸಿದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಡಿವೈಎಸ್ಪಿ ಕೃಷ್ಣಪ್ಪ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು. ಈ ಸಂಬಂಧ ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾ.ಕೆಬಿಜಿ ನಿಧನಕ್ಕೆ ಮಂಡ್ಯ ಜಿಲ್ಲೆ ಗಣ್ಯರ ಕಂಬನಿ

ಮಂಡ್ಯ, ಜು.13– ಮೈಸೂರು ಭಾಗದ ಹೆಸರಾಂತ ಪತ್ರಕರ್ತರಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಸಂಸ್ಥಾಪಕರಾದ ಡಾ. ಕೆ.ಬಿ.ಗಣಪತಿ ಅವರ ನಿಧನಕ್ಕೆ ಮಂಡ್ಯ ಜಿಲ್ಲೆಯ ಹಲವು ಗಣ್ಯರು, ರಾಜಕೀಯ ನಾಯಕರು, ವಿವಿಧ ಸಂಘ, ಸಂಸ್ಥೆಗಳು ಕಂಬನಿ ಮಿಡಿದಿವೆ.



ಮಾರ್ಗದರ್ಶಕರನ್ನು ಕಳೆದುಕೊಂಡಿದ್ದೇನೆ: ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಪ್ರತಿಕ್ರಿಯಿಸಿ, ಡಾ.ಕೆ.ಬಿ.ಗಣಪತಿ ಅವರು ಪತ್ರಕರ್ತರು ಮಾತ್ರವಲ್ಲದೇ ತಮ್ಮ ಅಗಾಧ ಅನುಭವವನ್ನು ನಮ್ಮಂತಹ ರಾಜಕಾರಣಿಗಳಿಗೂ ಧಾರೆ ಎರೆದಿದ್ದಾರೆ. ಅವರ ಮಾರ್ಗದರ್ಶನದಲ್ಲಿ ನಡೆದ ನಾನು ನನ್ನ ಪಯಣದಲ್ಲಿ ಹಲವು ಯಶಸ್ಸನ್ನು ಕಂಡಿದ್ದೇನೆ. ಅವರು ಇನ್ನು ಹಲವು ಕಾಲ ನಮ್ಮೊಂದಿಗೆ ಇರಬೇಕಿತ್ತು. ಅವರ ನಿಧನದ ಸುದ್ದಿ ಕೇಳಿ ನಾನು ಬಹಳ ದುಃಖಿತನಾಗಿದ್ದೇನೆ ಎಂದಿದ್ದಾರೆ.



ಪತ್ರಿಕೋದ್ಯಮಕ್ಕೆ ತುಂಬಲಾರದ ನಷ್ಟ: ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಪ್ರತಿಕ್ರಿಯಿಸಿ, ಮೈಸೂರು ಭಾಗದ ಜನಪ್ರಿಯ ದಿನಪತ್ರಿಕೆಗಳಾದ 'ಮೈಸೂರು ಮಿತ್ರ ಹಾಗೂ ಸ್ಟಾರ್ ಆಫ್ ಮೈಸೂರು' ಪತ್ರಿಕೆಗಳನ್ನು ಹೊರತರುತ್ತಾ ಮಾಧ್ಯಮ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಗಣಪತಿ ಅವರ ನಿಧನ ಬಹಳ ಬೇಸರದ ಸಂಗತಿ. ಅನೇಕ ಪತ್ರಕರ್ತರಿಗೆ ಹಾಗೂ ಯುವಕರಿಗೆ ಉದ್ಯೋಗ ನೀಡುವ ಮೂಲಕ ಅನೇಕ ಮನೆಗಳನ್ನು ಬೆಳಗಿದ ಅವರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ ಎಂದು ಕೋರಿದ್ದಾರೆ.



ಮೈಸೂರಿಗೆ ಮೆರಗು ತಂದವರು ಕೆಬಿಜಿ: ಕರ್ನಾಟಕ ಸಂಘದ ಅಧ್ಯಕ್ಷ ಹಾಗೂ ಹಿರಿಯ ಸಾಹಿತಿ ಪ್ರೊ.ಜಯಪ್ರಕಾಶ್‌ಗೌಡ ಪ್ರತಿಕ್ರಿಯಿಸಿ, ಇಂಗ್ಲಿಷ್ ಮತ್ತು ಕನ್ನಡ ಪತ್ರಿಕೋದ್ಯಮದಲ್ಲಿ ದೊಡ್ಡ ಹೆಸರು ಮಾಡಿದ್ದ ಕೆ.ಬಿ. ಗಣಪತಿ ಅವರು, ಮೈಸೂರು ಜಿಲ್ಲೆಯ ಹೆಸರನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅಗಾಧ ಜ್ಞಾನವಂತರಾಗಿದ್ದ ಅವರು, ಪತ್ರಿಕೋದ್ಯಮದ ಜೊತೆಗೆ ಲೇಖಕರು ಆಗಿದ್ದು, ಅವರು ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇಂತಹ ಅಪರೂಪದ ವ್ಯಕ್ತಿ ನಮ್ಮನ್ನು ಇಷ್ಟು ಬೇಗ ಅಗಲಿದ್ದು, ಬೇಸರದ ಸಂಗತಿಯಾಗಿದ್ದು, ಅವರ ನಿಧನಕ್ಕೆ ವೈಯಕ್ತಿಕವಾಗಿ ಕರ್ನಾಟಕ ಸಂಘದ ಪರವಾಗಿ ಶ್ರದ್ಧಾಂಜಲಿ ಕೋರುತ್ತೇನೆ ಎಂದಿದ್ದಾರೆ.



ಪತ್ರಿಕೋದ್ಯಮದ ಮೂಲಕ ಕೆಬಿಜಿ ಜೀವಂತ: ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಪ್ರತಿಕ್ರಿಯಿಸಿ, ಮೈಸೂರು ಭಾಗದಲ್ಲಿ ಪತ್ರಿಕೋದ್ಯಮದಲ್ಲಿ ಕೆಬಿಜಿ ಅವರದ್ದು ದೊಡ್ಡ ಹೆಸರು. 'ಮೈಸೂರು ಮಿತ್ರ ಹಾಗೂ ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಮೂಲಕ ಪ್ರಚಲಿತ ವಿದ್ಯಮಾನದ ಜೊತೆಗೆ ಚಿಂತನದ ಲೇಖನದ ಮೂಲಕ ಜಾಗೃತಿ ಮೂಡಿಸಿದರು. ಅವರು ದೈಹಿಕವಾಗಿ ನಮ್ಮನ್ನಗಲಿ ದರೂ ಎರಡು ಪತ್ರಿಕೆಗಳ ಮೂಲಕ ಸದಾ ನಮ್ಮ ಕಣ್ಮುಂದೆ ಇರುತ್ತಾರೆ ಎಂದು ವಿಶ್ಲೇಷಿಸಿದ್ದಾರೆ.



ಬೃಹತ್ ಮಾಧ್ಯಮ ಸಂಸ್ಥೆಗಳ ಸೃಷ್ಟಿಕರ್ತ ಗಣಪತಿ ಅವರು: ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಪ್ರತಿಕ್ರಿಯೆ ನೀಡಿ, ಕೆ.ಬಿ.ಗಣಪತಿ ಅವರು ಮೈಸೂರು ಭಾಗದಲ್ಲಿ ಎರಡು ಬೃಹತ್ ಮಾಧ್ಯಮಗಳನ್ನು ಸೃಷ್ಟಿಸಿ ಹೆಸರು ಮಾಡಿದ ವ್ಯಕ್ತಿ. ಅನೇಕರಿಗೆ ಉದ್ಯೋಗ ನೀಡಿ, ಮೈಸೂರು ಭಾಗದ ಜನರಿಗೆ ಬೆಳಗ್ಗೆ ಹಾಗೂ ಸಂಜೆ ಸುದ್ದಿಗಳ ಹೂರಣ ನೀಡುತ್ತಾ, 40 ವರ್ಷಕ್ಕೂ ಹೆಚ್ಚು ಕಾಲ ಮಾಧ್ಯಮ ಕ್ಷೇತ್ರದಲ್ಲಿ ಅವಿರತ ಶ್ರಮಿಸಿದ ಶ್ರಮಜೀವಿ ಕೆ.ಬಿ.ಗಣಪತಿ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಕೋರಿದ್ದಾರೆ.



ಅಸಾಮಾನ್ಯ ಸಾಧಕ ಕೆಬಿಜಿ: ಮಂಡ್ಯ ಜಿಲ್ಲೆಯ ಹಿರಿಯ ಪತ್ರಕರ್ತ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಮತ್ತೀಕೆರೆ ಜಯರಾಂ ಪ್ರತಿಕ್ರಿಯಿಸಿ, ಒಂದು ಪತ್ರಿಕೆಯನ್ನು ಸ್ಥಾಪಿಸಿ ನಡೆಸುವುದು ಅಷ್ಟು ಸುಲಭದ ಮಾತಲ್ಲ. ಅದರಲ್ಲೂ ಡಾ.ಕೆ.ಬಿ.ಗಣಪತಿ ಅವರು ಮೈಸೂರು ಭಾಗದಲ್ಲಿ ಬೆಳಗ್ಗಿನ ದಿನಪತ್ರಿಕೆಯಾಗಿ ಮೈಸೂರು ಮಿತ್ರ ಹಾಗೂ ಸಂಜೆ ದಿನಪತ್ರಿಕೆಯಾಗಿ ಸ್ಟಾರ್ ಆಫ್ ಮೈಸೂರನ್ನು 45 ವರ್ಷಕ್ಕೂ ಹೆಚ್ಚುಕಾಲ ಕಟ್ಟಿ ಬೆಳೆಸಿಕೊಂಡು ಬಂದಿದ್ದಾರೆ. ಇಂದು ಒಂದು ಸಣ್ಣ ಪತ್ರಿಕೆ ನಡೆಸುವುದೇ ದುಸ್ತರವಿರುವಾಗ 4 ದಶಕಗಳ ಕಾಲ ಎರಡು ಪತ್ರಿಕೆಗಳನ್ನು ಬೃಹತ್ ಮಟ್ಟದಲ್ಲಿ ಕಟ್ಟಿ, ಪತ್ರಿಕಾರಂಗದಲ್ಲೇ ಹೊಸ ಇತಿಹಾಸ ಸೃಷ್ಟಿಸಿ ಹಳೇ ಮೈಸೂರು ಭಾಗದಲ್ಲಿ ಮನೆ ಮಾತಾಗಿರುವ ಕೆ.ಬಿ.ಗಣಪತಿ ಅವರು ಪತ್ರಿಕಾ ರಂಗದ ಅಪ್ರತಿಮ ಸಾಧಕರಾಗಿದ್ದಾರೆ ಎಂದು ಬಣ್ಣಿಸಿದ್ದಾರೆ.



ಪತ್ರಿಕಾ ರಂಗಕ್ಕೆ ತುಂಬಲಾರದ ನಷ್ಟ: ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಈ.ಸಿ.ನಿಂಗರಾಜೇಗೌಡ ಶ್ರದ್ಧಾಂಜಲಿ ಕೋರಿ, ಕೆ.ಬಿ.ಗಣಪತಿ ಅವರ ನಿಧನ ಪತ್ರಿಕಾ ರಂಗಕ್ಕೆ ತುಂಬಲಾರದ ನಷ್ಟವಾಗಿದ್ದು, ಅವರ ನಿಧನ ನೋವುಂಟು ಮಾಡಿದೆ. ಮೈಸೂರು ಭಾಗದಲ್ಲಿ ಎರಡು ಬೃಹತ್ ಪತ್ರಿಕೆಗಳನ್ನು ಸ್ಥಾಪಿಸಿ, ಲಕ್ಷಾಂತರ ಓದುಗರನ್ನು ಸಂಪಾದಿಸಿದ್ದ ಕೆಬಿಜಿ ಅವರು ಇಂದಿನ ಪತ್ರಕರ್ತರಿಗೆ ಮಾದರಿಯಾಗಿದ್ದಾರೆಂದು ಹೇಳಿದ್ದಾರೆ.



ಇನ್ನಷ್ಟು ಕಾಲ ನಮ್ಮೊಡನಿರಬೇಕಿತ್ತು: ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪ್ರತಿಕ್ರಿಯಿಸಿ, ನಮ್ಮಂತಹ ಯುವ ರಾಜಕಾರಣಿಗಳಿಗೆ ತಮ್ಮ ಬರವಣಿಗೆ ಮೂಲಕ ಮಾರ್ಗದರ್ಶಕರಾಗಿದ್ದ ಗಣಪತಿ ಅವರು ಇನ್ನಷ್ಟು ಕಾಲ ನಮ್ಮೊಡನೆ ಇರಬೇಕಿತ್ತು. ಅವರ ನಿಧನ ಮಾಧ್ಯಮ ಕ್ಷೇತ್ರ ಸೇರಿದಂತೆ ಸಾರ್ವಜನಿಕ ವಲಯಕ್ಕೆ ತುಂಬಲಾರದ ನಷ್ಟ ಎಂದು ತಿಳಿಸಿದ್ದಾರೆ.



ವಸ್ತುನಿಷ್ಠ ಪತ್ರಿಕೋದ್ಯಮಕ್ಕೆ ಸಾಕ್ಷಿ: ಕೆಬಿಜಿಯವರು ವಸ್ತುನಿಷ್ಠ ಪತ್ರಿಕೋದ್ಯಮಕ್ಕೆ ಸಾಕ್ಷಿಯಾಗಿದ್ದರು. ನಮ್ಮ ತಂದೆ ಜಿ.ಮಾದೇಗೌಡರಿಗೆ ಒಡನಾಡಿಯಾಗಿದ್ದರು. ನಮ್ಮ ತಂದೆಯವರ ಕಾವೇರಿ ಹಾಗೂ ರೈತಪರ ಹೋರಾಟಕ್ಕೆ ಬೆಂಬಲವಾಗಿ ನಿಂತಿದ್ದರು. ಅವರನ್ನು ಕಳೆದುಕೊಂಡಿದ್ದು ಪತ್ರಿಕೋದ್ಯಮಕ್ಕೆ ಹಾಗೂ ಸಮಾಜಕ್ಕೆ ತುಂಬಲಾರದ ನಷ್ಟ ಎಂದು ವಿಧಾನಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ತಿಳಿಸಿದ್ದಾರೆ.



ಜನರ ಸಮಸ್ಯೆ ಆಲಿಸಲು ಮನೆ ಮನೆಗೆ ಪೊಲೀಸ್

ಪೊಲೀಸರು ಸೇವಾ ಮನೋಭಾವದಿಂದ ಕೆಲಸ ಮಾಡುವಂತೆ ಸೂಚನೆ

ಚಾಮರಾಜನಗರ, ಜು.13– ರಾಜ್ಯ ಪೊಲೀಸ್ ಇಲಾಖೆಯು ಮನೆ ಮನೆಗೆ ಪೊಲೀಸ್ ಎಂಬ ಹೊಸ ಯೋಜನೆಯನ್ನು ಜಾರಿಗೊಳಿಸಿದ್ದು, ಪೊಲೀಸರು ಜಾಗರೂಕರಾಗಿ ಹಾಗೂ ಸೇವಾ ಮನೋಭಾವದಿಂದ ಕೆಲಸ ಮಾಡಬೇಕಾದ ಅಗತ್ಯತೆ ಇದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಕಿವಿಮಾತು ಹೇಳಿದರು.



ಕಾರ್ಯಾಗಾರವನ್ನು ಉದ್ಘಾಟಿಸಿ ಜಿಲ್ಲಾ ಎಸ್‌ಪಿ ಡಾ.ಬಿ.ಟಿ.ಕವಿತಾ ಮಾತನಾಡಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಭಾನುವಾರ ಬೆಳಿಗ್ಗೆ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಮನೆ ಮನೆಗೆ ಪೊಲೀಸ್ ಎಂಬ ಹೊಸ ಯೋಜನೆ ಕುರಿತು ಚಾಮರಾಜನಗರ ಉಪ ವಿಭಾಗದ ಎಲ್ಲಾ ಗಸ್ತು ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಇಲ್ಲಿಯವರೆಗೆ ನಮ್ಮಲ್ಲಿ ಜನಸ್ನೇಹಿ ಪೊಲೀಸ್ ವ್ಯವಸ್ಥೆಯಿತ್ತು. ಸಾರ್ವಜನಿಕರು ದೂರು ನೀಡಿದರೆ ಕ್ರಮ ವಹಿಸುವ ಪರಿಪಾಠವಿತ್ತು. ಈಗ ಅದನ್ನು ಬದಲಿಸಿ ಪೊಲೀಸರೆ ಸಮಸ್ಯೆಗಳನ್ನು ಗುರುತಿಸಿ ಅವುಗಳನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳಲು ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಜಾರಿ ಮಾಡಲಾಗಿದೆ ಎಂದರು.

ಈ ಕಾರ್ಯಕ್ರಮವನ್ನು ಐಜಿಪಿ ಸಲೀಂ ಅವರು ರೂಪಿಸಿದ್ದಾರೆ. ಕಳೆದ ಜೂನ್ 27 ಮತ್ತು 28 ರಂದು ಬೆಂಗಳೂರಿನಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಮಾವೇಶದಲ್ಲಿ ಮನೆ ಮನೆಗೆ ಪೊಲೀಸ್ ಯೋಜನೆ ಉದ್ಘಾಟನೆಯಾಯಿತು. ಎಲ್ಲ ಪೊಲೀಸ್ ಠಾಣೆಗಳಲ್ಲಿ ಈ ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಅನುಷ್ಠಾನ ಆಗಲಿದೆ. ಪೊಲೀಸರು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು ಎಂದರು.

ಈ ಕಾರ್ಯಕ್ರಮದಡಿ ಪೊಲೀಸರು ಮನೆ ಮನೆಗಳಿಗೆ ಹೋದಾಗ ಸಾರ್ವಜನಿಕರ ಜೊತೆ ಯಾವ ವಿಚಾರಗಳನ್ನು ಹಂಚಿಕೊಳ್ಳಬೇಕು. ಅಪರಾಧಗಳನ್ನು ತಡೆಯುವುದು ಹಾಗೂ ಅಪರಾಧಿಗಳನ್ನು ಹೇಗೆ ಪತ್ತೆ ಹಚ್ಚಬೇಕು ಎಂಬುವರ ವಿಧಾನಗಳ ಕುರಿತು ಸಂಪನ್ಮೂಲ ವ್ಯಕ್ತಿಗಳು ಕಾರ್ಯಾಗಾರದಲ್ಲಿ ಮಾಹಿತಿ ನೀಡಲಿದ್ದಾರೆ ಎಂದರು.

ಇವತ್ತು ಚಾ.ನಗರ ಉಪ ವಿಭಾಗದ ಪೊಲೀಸರಿಗೆ ಮನೆ ಮನೆಗೆ ಪೊಲೀಸ್ ಅನುಷ್ಠಾನ ಹೇಗೆ ಮತ್ತು ಅದನ್ನು ಯಶಸ್ವಿಗೊಳಿಸಲು ಏನೇನು ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ಕಾರ್ಯಾಗಾರದಲ್ಲಿ ತಿಳಿಸಲಾಗಿದೆ. ಮುಂದಿನ ದಿನಗಳಲ್ಲಿ ಕೊಳ್ಳೇಗಾಲ ಉಪ ವಿಭಾಗದ ಪೊಲೀಸರಿಗೂ ಪರಿಚಯಿಸಲಾಗುವುದು ಎಂದರು.


ಸೆನ್ ವಿಭಾಗದ ಡಿವೈಎಸ್ಪಿ ಪವನ್‌ಕುಮಾರ್ ಸೈಬರ್ ವಂಚನೆಗಳ ಬಗ್ಗೆ ತಿಳಿಸಿದರು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಪೊಲೀಸ್ ಅಧಿಕಾರಿಗಳಿದ್ದರು.

ಪತ್ರಕರ್ತರ ಸಂಘದಿಂದ ಕೆಬಿಜಿ ನಿಧನಕ್ಕೆ ಸಂತಾಪ

ಚಾಮರಾಜನಗರ, ಜು.13– ಸಾಂಸ್ಕೃತಿಕ ನಗರಿ ಮೈಸೂರಿನ ಹೆಮ್ಮೆಯ ಹಿರಿಯ ಪತ್ರಕರ್ತ ಮೈಸೂರು ಮಿತ್ರ ಹಾಗೂ ಸ್ಟಾರ್ ಆಫ್ ಮೈಸೂರು ಪತ್ರಿಕೆಯ ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ ಅವರ ನಿಧನರಾದ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸಂತಾಪ ಸೂಚಿಸಲಾಯಿತು.

ಪತ್ರಿಕಾ ದಿನಾಚರಣೆ ಅಂಗವಾಗಿ ನಗರದ ರಾಮಸಮುದ್ರದಲ್ಲಿನ ದೀನಬಂಧು ಶಾಲಾವರಣದಲ್ಲಿ ಭಾನುವಾರ ಆಯೋಜಿಸಿದ್ದ ಪತ್ರಕರ್ತರು ಹಾಗೂ ಅವರ ಕುಟುಂಬಸ್ಥರ ಕ್ರೀಡಾಕೂಟ ಕಾರ್ಯಕ್ರಮಕ್ಕೂ ಮುನ್ನಾ ಒಂದು ನಿಮಿಷಗಳ ಕಾಲ ಮೌನ ಆಚರಿಸುವ ಮೂಲಕ ಅಗಲಿದ ಹಿರಿಯ ಪತ್ರಕರ್ತರಿಗೆ ಗೌರವ ನಮನ ಸಲ್ಲಿಸಿದರು.

ಅಂತಿಮ ದರ್ಶನ: ಮೃತರ ನಿವಾಸಕ್ಕೆ ಮೈಸೂರು ಮಿತ್ರ ಪತ್ರಿಕೆಯ ಚಾಮರಾಜನಗರ ಜಿಲ್ಲಾ ವರದಿಗಾರ ಸಿದ್ದಲಿಂಗಸ್ವಾಮಿ, ಗುಂಡ್ಲುಪೇಟೆ ತಾಲೂಕು ವರದಿಗಾರ ಸೋಮಶೇಖರ್, ಬದನಗುಪ್ಪೆ ಪ್ರತಿನಿಧಿ ಬದನಗುಪ್ಪೆ ಮಲ್ಲಣ್ಣ, ಬೇಗೂರು ವರದಿಗಾರ ನಾಗೇಶ್, ಮೈಸೂರು ಮಿತ್ರ ಪತ್ರಿಕೆ ಚಾಮರಾಜನಗರ ಪ್ರತಿನಿಧಿ ನವೀನ್ ಕುಮಾರ್, ಸಂಯುಕ್ತ ಕರ್ನಾಟಕ ಜಿಲ್ಲಾ ವರದಿಗಾರ ಎಸ್. ಪ್ರತಾಪ್ ಭೇಟಿ ನೀಡಿ ಮೃತರ ಅಂತಿಮ ದರ್ಶನ ಪಡೆದರು.



ಬೇಗೂರು ಪತ್ರಕರ್ತರ ಕಂಬನಿ: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರು' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ಅವರ ನಿಧನಕ್ಕೆ ಬೇಗೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ತೀವ್ರ ಸಂತಾಪ ಸೂಚಿಸಿದೆ.

ಮೈಸೂರು ಭಾಗದಲ್ಲಿ ಪ್ರಾದೇಶಿಕ ಪತ್ರಿಕೆ ಕಟ್ಟಿ ಬೆಳಸಿದ ಶ್ರೀಯುತರ ನಿಧನದಿಂದ ಪತ್ರಿಕಾರಂಗಕ್ಕೆ ದೊಡ್ಡ ಆಘಾತವಾಗಿದೆ ಎಂದು ಸಂಘದ ಅಧ್ಯಕ್ಷ ರಂಗೂಪುರ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಮಡಹಳ್ಳಿ ಮಹೇಶ್, ನಾಗೇಶ್ ಬೇಗೂರ್ ಹಾಗೂ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಗುಂಡ್ಲುಪೇಟೆ ಗಣ್ಯರಿಂದ ಸಂತಾಪ: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರು' ಪತ್ರಿಕೆಯ ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ಅವರ ನಿಧನಕ್ಕೆ ತಾಲೂಕಿನ ಗಣ್ಯರು, ಸಂಘ ಸಂಸ್ಥೆಗಳ ಮುಖ್ಯಸ್ಥರು ಮತ್ತು ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ತಾಲೂಕಿನ ಪಡಗೂರು ಅಡವಿಮಠದ ಅಧ್ಯಕ್ಷರಾದ ಶ್ರೀ ಶಿವಲಿಂಗೇಂದ್ರ ಸ್ವಾಮಿಗಳು, ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಮಾಜಿ ಶಾಸಕ ಹಾಗೂ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್, ಜಿಲ್ಲಾ ಸಹಕಾರ ಸಂಘದ ಅಧ್ಯಕ್ಷ ಹಾಗೂ ಚಾಮುಲ್ ನಿರ್ದೇಶಕ ಎಚ್.ಎಸ್.ನಂಜುಂಡ ಪ್ರಸಾದ್, ಪುರಸಭಾ ಅಧ್ಯಕ್ಷ ಮಧುಸೂದನ್, ಪುರಸಭೆ ಸದಸ್ಯರಾದ ಪಿ.ಗಿರೀಶ್, ರಮೇಶ್, ಶಶಿಧರ್, ದೀಪು, ನಾಗೇಶ್, ಮುಖಂಡರಾದ ಕಬ್ಬಳ್ಳಿ ಮಹೇಶ್, ನಂಜಪ್ಪ, ಮುನಿರಾಜು, ಜಿ.ಎಲ್.ರಾಜು, ಹಿರಿಕಾಟಿ ಸೋಮಶೇಖರ್, ಎನ್.ಮಲ್ಲೇಶ್, ಉದ್ಯಮಿಗಳಾದ ರಘು, ಹೋಟೆಲ್ ಪ್ರದೀಪ್, ಹಂಗಳ ಪ್ರಣಯ್, ಹಿರಿಕಾಟಿ ಯಶವಂತ್, ಎಲ್.ಸುರೇಶ್, ಪಿ.ಸುರೇಂದ್ರ, ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಪ್ರಧಾನ ಅರ್ಚಕರಾದ ಕೆ.ವಿ.ಗೋಪಾಲಕೃಷ್ಣ ಭಟ್, ರಾಮೇಶ್ವರ ದೇವಾಲಯದ ಪ್ರಧಾನ ಅರ್ಚಕರಾದ ಶಂಕರನಾರಾಯಣ ಜೋಯಿಸ್, ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಮಾಜಿ ಸಂಚಾಲಕರಾದ ಜಿ.ಸಿ.ನಾಗರಾಜು, ಪತ್ರಕರ್ತ ಸೋಮಶೇಖರ್ ಸೇರಿದಂತೆ ತಾಲೂಕಿನ ವಿವಿಧ ಕನ್ನಡಪರ ಸಂಘಟನೆಗಳು ಕೆಬಿಜಿ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿವೆ.

ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಪತ್ರಕರ್ತರಿಗೆ ಸಲಹೆ

ಚಾಮರಾಜನಗರ, ಜು.13– ಸದಾ ಒತ್ತಡದಲ್ಲಿರುವ ಪತ್ರಕರ್ತರು ವರ್ಷಕ್ಕೊಮ್ಮೆಯಾದರೂ ಒಂದು ದಿನ ಬೆರತು ಆಟೋಟಗಳಲ್ಲಿ ಪಾಲ್ಗೊಂಡು ಜೀವನದ ಜಂಜಾಟ ಮರೆಯಲು ಪ್ರಯತ್ನಿಸಬೇಕು ಎಂದು ಡಿವೈಎಸ್‌ಪಿ ಲಕ್ಷ್ಮಯ್ಯ ಸಲಹೆ ನೀಡಿದರು.

ಪತ್ರಿಕಾ ದಿನಾಚರಣೆ ಅಂಗವಾಗಿ ನಗರದ ರಾಮಸಮುದ್ರ ಬಡಾವಣೆಯ ದೀನಬಂಧು ಶಾಲೆಯ ಆವರಣದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪತ್ರಕರ್ತರು ಹಾಗೂ ಅವರ ಕುಟುಂಬದವರಿಗೆ ನಡೆದ ಸೌಹಾರ್ದಯುತ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು.

ಪತ್ರಕರ್ತರು ಕೂಡ ಪೊಲೀಸರ ಮಾದರಿಯಲ್ಲಿ 24 ಗಂಟೆ ಕರ್ತವ್ಯ ನಿರ್ವಹಿಸುತ್ತಾರೆ. ಯಾವುದೇ ಕಾರ್ಯಕ್ರಮ ಇದ್ದರೂ ಮಾಹಿತಿ ಸಂಗ್ರಹಿಸಿ ಸುದ್ದಿ ಮಾಡಬೇಕು. ಇದು ಸವಾಲಿನ ಕೆಲಸವಾಗಿದೆ. ಕುಟುಂಬದೊಂದಿಗೆ ಕಾಲ ಕಳೆಯಲು ಸಮಯವೇ ಸಿಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಪತ್ರಕರ್ತರು ಕೆಲಸ ಮಾಡುತ್ತಾರೆ ಅವರ ಒತ್ತಡ ನಿವಾರಣೆಗೆ ಆಟೋಟಾಗಳು ಅವಶ್ಯಕವಾಗಿದೆ ಎಂದರು.

ಮಾಧ್ಯಮ ಕ್ಷೇತ್ರಕ್ಕೆ ಸಮಾಜದಲ್ಲಿ ತನ್ನದೆ ಆದ ಘನತೆ, ಗೌರವವಿದೆ. ಇಂಥ ರಂಗದಲ್ಲಿ ಕೆಲಸ ಮಾಡುವ ಪತ್ರಕರ್ತರು ಮಾನಸಿಕ ಮತ್ತು ದೈಹಿಕವಾಗಿ ಸದೃಢರಾಗಬೇಕು ಎಂದು ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಎಲ್ಲ ಪತ್ರಕರ್ತರು, ಕುಟುಂಬದವರಿಗೂ ಶುಭ ಕೋರಿದರು.

ನಂತರ ಸಂಘದ ಅಧ್ಯಕ್ಷರಾದ ದೇವರಾಜು ಕಪ್ಪಸೋಗೆ ಮಾತನಾಡಿ, ಪ್ರತಿ ವರ್ಷದಂತೆ ಈ ಬಾರಿಯೂ ಸಂಘದಿಂದ ಪತ್ರಿಕಾ ದಿನಾಚರಣೆ ಪ್ರಯುಕ್ತ ವಾರ್ಷಿಕ ಕ್ರೀಡಾಕೂಟ ಆಯೋಜಿಸಲಾಗಿದೆ. ಪತ್ರಕರ್ತರಲ್ಲಿ ನಿಜಕ್ಕೂ ಒತಡ ಹೆಚ್ಚಾಗುತ್ತಿದ್ದು, ವೃತಿ ಜಂಜಾಟದಲ್ಲಿ ತಮ್ಮ ವೈಯುಕಿ ಬದುಕನ್ನೆ ಮರೆಯುತಿದ್ದು, ಅನಾರೋಗ್ಯಕ್ಕೆ ತುತ್ತಾಗುತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಪರಿಷತ್ ಸದಸ್ಯ ಗೂಳೀಪುರ ನಂದೀಶ್, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರ್, ಕ್ರೀಡಾಪಟು ವಿ.ಶ್ರೀನಿವಾಸಪ್ರಸಾದ್, ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಇದ್ದರು.



ಸೌಹಾರ್ದಯುತ ಕ್ರೀಡಾಕೂಟಕ್ಕೆ ಡಿವೈಎಸ್‌ಪಿ ಲಕ್ಷ್ಮಯ್ಯ ಚಾಲನೆ ನೀಡಿದರು.

ಕೆಬಿಜಿ ಅವರಿಗೆ ಅಂತಿಮ ನಮನ



ಪತ್ರಿಕೋದ್ಯಮಿ ದಿ. ರಾಜಶೇಖರ ಕೋಟಿ ಅವರ ಪತ್ನಿ ನಿರ್ಮಲಾ ಕೋಟಿ, ಪುತ್ರಿ ರಶ್ಮಿ ಕೋಟಿ ಅವರು ಕೆಬಿಜಿ ಅವರ ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿದರು.



ಆಂದೋಲನ ಪತ್ರಿಕೆಯ ಸಂಪಾದಕ ರವಿ ಕೋಟಿ ಅವರು ಕೆಬಿಜಿ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಕೆಬಿಜಿಯವರಿಗೆ ಕೆಎಂಪಿಕೆ ಟ್ರಸ್ಟ್ ಶ್ರದ್ಧಾಂಜಲಿ

ಮೈಸೂರು, ಜು.13– 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರಿಗೆ ಕೆಎಂಪಿಕೆ ಟ್ರಸ್ಟ್ ವತಿಯಿಂದ ನಗರದ ಅಗ್ರಹಾರ ವೃತ್ತದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ವೇಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳು ಮೈಸೂರಿಗೆ ಎರಡು ಕಣ್ಣುಗಳಿದ್ದಂತೆ. ಹೆಚ್ಚು ಪ್ರಸಾರದಲ್ಲಿರುವ ಈ ಪ್ರಾದೇಶಿಕ ಪತ್ರಿಕೆಗಳು, ರಾಜ್ಯ ಮಟ್ಟದಲ್ಲಿ ಪ್ರಸಿದ್ಧಿಯಾಗಿವೆ. ಸ್ಥಳೀಯ ಸುದ್ದಿಗಳೊಂದಿಗೆ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಸುದ್ದಿಗಳನ್ನು ಓದುಗರಿಗೆ ತಲುಪಿಸುತ್ತಿವೆ. ಅನೇಕ ಉದಯೋನ್ಮುಖ ಬರಹಗಾರರಿಗೆ ಈ ಎರಡೂ ಪತ್ರಿಕೆಗಳು ವೇದಿಕೆ ನೀಡಿವೆ. ನೂರಾರು ಮಂದಿಗೆ ಉದ್ಯೋಗ ಕಲ್ಪಿಸಿವೆ. ಈ ಸಾಧನೆಗೆ ಕಾರಣಕರ್ತರಾದ ಕೆಬಿಜಿ ಅವರ ಅಗಲಿಕೆಯಿಂದ ಸಮಾಜಕ್ಕೆ ತುಂಬಲಾಗದ ನಷ್ಟವಾಗಿದೆ ಎಂದರು.

'ಮೈಸೂರು ಮಿತ್ರ'ದಲ್ಲಿ 'ಭೂಮಂತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನ 'ಅಬ್ರಕಡಬ್ರ' ಅಂಕಣಗಳ ಮೂಲಕ ಕೆಬಿಜಿ ಅವರು, ಓದುಗರನ್ನು ಆಕರ್ಷಿಸಿದ್ದರು. ಪ್ರಚಲಿತ ವಿಚಾರಗಳ ಮೂಲಕ ಆಳುವ ಸರ್ಕಾರಗಳನ್ನು ತೀಕ್ಷ್ಣವಾಗಿ ಎಚ್ಚರಿಸುವ ಕೆಲಸ ಮಾಡಿದ್ದರು. ಮೈಸೂರು ನಗರದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರು, ಇಲ್ಲಿನ ಐತಿಹಾಸಿಕ, ಪಾರಂಪರಿಕ, ಸಾಂಸ್ಕೃತಿಕ ಹಾಗೂ ಪ್ರಾಕೃತಿಕ ಮಹತ್ವದ ಬಗ್ಗೆ ಗೌರವ ಹೊಂದಿದ್ದರು. ಅಲ್ಲದೆ ಇವುಗಳಿಗೆ ಧಕ್ಕೆಯಾಗುವ ಸಂದರ್ಭ ಎದುರಾದಾಗ ದಿಟ್ಟವಾಗಿ ಖಂಡಿಸುತ್ತಿದ್ದರು. ಪತ್ರಿಕೋದ್ಯಮದಲ್ಲಿ ಮೈಲಿಗಲ್ಲು ಸ್ಥಾಪಿಸಿದ ಕೆಬಿಜಿ ಅವರು ಮೈಸೂರಿನ ಹೆಮ್ಮೆ ಎಂದು ಸ್ಮರಿಸಿಕೊಂಡರು.

ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಂಪ್ರಸಾದ್, ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಜಿ.ರಾಘವೇಂದ್ರ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಟಿ.ಎಸ್.ಅರುಣ್ ರಂಗನಾಥ್, ಚಕ್ರಪಾಣಿ, ರವಿಚಂದ್ರ, ಹರೀಶ್ ನಾಯ್ಡು, ಜೆಡಿಎಸ್ ಯುವ ಮುಖಂಡ ಪ್ರಶಾಂತ್, ರಾಜೇಂದ್ರ ಪ್ರಸಾದ್, ಮಹಾನ್ ಶ್ರೇಯಸ್, ದಿನೇಶ್, ವಿಶ್ವನಾಥ, ಹನುಮಂತಯ್ಯ, ರವಿ ನಾಯಕ್ ಮತ್ತಿತರರಿದ್ದರು.



ಮೈಸೂರಿನ ಅಗ್ರಹಾರ ವೃತ್ತದಲ್ಲಿ ಕೆಬಿಜಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.



ಡಾ. ಕೆ.ಬಿ.ಗಣಪತಿ ಅವರ ನಿಧನದಿಂದ ಹಳೇ ಮೈಸೂರು ಭಾಗದ ಮಾಧ್ಯಮ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. 47 ವರ್ಷಗಳಿಂದ ಮಾಧ್ಯಮ ಲೋಕಕ್ಕೆ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರ ನಿಧನ ಜಿಲ್ಲೆಯ ಜನತೆಗೆ ದುಃಖದ ಸಂಗತಿ. ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಹಾಗೂ ಹಾಸನ ಜಿಲ್ಲೆಯ ಜನತೆಗೆ ನಿಖರ ಸುದ್ದಿಗಳನ್ನು ತಲುಪಿಸುವ ಮಹತ್ಕಾರ್ಯದಲ್ಲಿ ನಿರತರಾಗಿದ್ದ ಕೆಬಿಜಿ ಅವರು, ದೀನ ದಲಿತರು, ಶೋಷಿತರ ಪರವಾಗಿ ದನಿ ಎತ್ತಿ ಎಚ್ಚರಿಸುತ್ತಿದ್ದರು. ಸರ್ಕಾರಗಳು ಜವಾಬ್ದಾರಿ ಮರೆತಾಗ ಬಿಸಿ ಮುಟ್ಟಿಸುತ್ತಿದ್ದ ಕೆಬಿಜಿ ಬರವಣಿಗೆ, ಮಾಧ್ಯಮ ಲೋಕಕ್ಕೆ ಮಾದರಿ. ದಕ್ಷ ಹಾಗೂ ಪ್ರಾಮಾಣಿಕ ಹಿರಿಯ ಪತ್ರಕರ್ತನನ್ನು ಕಳೆದುಕೊಂಡ ಮಾಧ್ಯಮ ಕ್ಷೇತ್ರವು, ಅವರಂತೆ ವೃತ್ತಿಪರತೆ ಮೆರೆಯಬೇಕಿದೆ.

–ವಿ.ಶೈಲೇಂದ್ರ, ಮಾಜಿ ಉಪಮೇಯರ್

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಇಂದು ಕೆಬಿಜಿಯವರಿಗೆ ಶ್ರದ್ಧಾಂಜಲಿ

ಮೈಸೂರು, ಜು.13– 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನಾಳೆ(ಸೋಮವಾರ) ಬೆಳಗ್ಗೆ 10.30ಕ್ಕೆ ಪತ್ರಕರ್ತರ ಭವನದಲ್ಲಿ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿದೆ.

ಕೆಬಿಜಿ ಅವರ ಒಡನಾಡಿಗಳು, ಹಿರಿಯ ಪತ್ರಕರ್ತರು, ಹಿತೈಷಿಗಳು, ಅಭಿಮಾನಿಗಳು ಭಾಗವಹಿಸಲಿದ್ದು, ಸಂಘದ ಎಲ್ಲಾ ಸದಸ್ಯರು ಪಾಲ್ಗೊಂಡು ಅಗಲಿದ ಹಿರಿಯ ಚೇತನಕ್ಕೆ ನುಡಿನಮನ ಅರ್ಪಿಸುವಂತೆ ಸಂಘದ ಅಧ್ಯಕ್ಷ ಕೆ.ದೀಪಕ್ ಹಾಗೂ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಹಿರಿಯ ಚೇತನ ಕೆ.ಬಿ.ಗಣಪತಿ ಅವರ ಅಗಲಿಕೆಯಿಂದ ಮಾಧ್ಯಮ ಕ್ಷೇತ್ರ ಮಾತ್ರವಲ್ಲದೆ ಸಮಾಜಕ್ಕೆ ತುಂಬಲಾಗದ ನಷ್ಟವಾಗಿದೆ. ಮೃತರ ಕುಟುಂಬ, ಬಂಧುಮಿತ್ರರು ಮತ್ತು ಅಭಿಮಾನಿಗಳಿಗೆ ದುಃಖ ಸಹಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

–ಬಿ.ಎಂ.ರಘು,
ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ

ಕರ್ನಾಟಕದ ಹಿರಿಯ ಹಾಗೂ ಖ್ಯಾತ ಪತ್ರಕರ್ತ ಕೆ.ಬಿ.ಗಣಪತಿ ಅವರ ನಿಧನದಿಂದ ನನಗೆ ತೀವ್ರ ದುಃಖವಾಗಿದೆ. ಅವರ ಕುಟುಂಬಕ್ಕೆ ನನ್ನ ಸಂತಾಪಗಳು. ಕೆಬಿಜಿ ನಿಧನದ ಮೂಲಕ ಮಾಧ್ಯಮ ಜಗತ್ತು, ಸಮಾಜ ಮತ್ತು ರಾಷ್ಟ್ರದ ಹಿತಾಸಕ್ತಿಗಳನ್ನು ಉನ್ನತ ಸ್ಥಾನದಲ್ಲಿರಿಸಿದ್ದ ಸಮರ್ಪಿತ ಪತ್ರಕರ್ತನನ್ನು ಕಳೆದುಕೊಂಡಿದೆ. ಇಂದಿನ ಅನೇಕ ಪತ್ರಕರ್ತರು ಅವರಿಂದ ಕೆಲಸ ಕಲಿತು, ಬೆಳೆದಿದ್ದಾರೆ. ಗಣಪತಿಯವರ ವ್ಯಕ್ತಿತ್ವದಲ್ಲಿ ವೃತ್ತಿಪರ ನೀತಿಶಾಸ್ತ್ರ ಮತ್ತು ಜೀವನದ ಮೌಲ್ಯಗಳನ್ನು ಸುಂದರವಾಗಿ ಸಂಯೋಜನೆಯಾಗಿತ್ತು. ಸ್ಫೂರ್ತಿದಾಯಕ ಪರಂಪರೆಯನ್ನು ಬಿಟ್ಟುಹೋಗಿರುವ ಕೆಬಿಜಿ ಅವರಿಗೆ ನಾನು ವಿನಮ್ರವಾಗಿ ಗೌರವ ಸಲ್ಲಿಸುತ್ತೇನೆ. ಅಗಲಿದ ಆತ್ಮಕ್ಕೆ ಶಾಂತಿ ದೊರಕಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಓಂ ಶಾಂತಿ.

–ದತ್ತಾತ್ರೇಯ ಹೊಸಬಾಳೆ,
ಆರ್‌ಎಸ್‌ಎಸ್ ಮುಖಂಡರು

'ಮೈಸೂರು ಮಿತ್ರ' ಹಾಗೂ ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆಬಿಜಿ ಅವರ ನಿಧನಕ್ಕೆ ಶಾಸಕ ಎ.ಎಚ್.ವಿಶ್ವನಾಥ್ ಸಂತಾಪ



ಮೈಸೂರು, ಜು,13(ಎಸ್‌ಪಿಎನ್)– ಮೈಸೂರಿಗರ ಅಚ್ಚುಮೆಚ್ಚಿನ 'ಮೈಸೂರು ಮಿತ್ರ' ಹಾಗೂ ಸ್ಟಾರ್ ಅಫ್ ಮೈಸೂರ್' ಪತ್ರಿಕೆಗಳ ಮೂಲಕ ಮನೆ ಮಾತಾಗಿದ್ದ ಸಂಸ್ಥಾಪಕ ಸಂಪಾದಕರಾದ ಡಾ. ಕೆಬಿ.ಗಣಪತಿ ಅವರು 50 ವರ್ಷಗಳ ಕಾಲ ಮೈಸೂರಿನ ಅಭಿವೃದ್ಧಿಯೂ ಸೇರಿದಂತೆ ಹಿತಾಸಕ್ತಿ ಬಗ್ಗೆ ಸಲಹೆ–ವಿಮರ್ಶಾ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಅವರ ಅಗಲಿಕೆ ನಾಡಿಗೆ ತುಂಬಲಾರದ ನಷ್ಟ ಎಂದು ವಿಧಾನ ಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಸಂತಾಪ ಸೂಚಿಸಿದರು.

ಮೈಸೂರಿನ ಎಲ್ಲಾ ವಿಷಯಗಳನ್ನೂ ಸೂಕ್ಷ್ಮವಾಗಿ ಗಮನಿಸಿ, ಅದರ ಆಗು–ಹೋಗುಗಳನ್ನು ವಿಮರ್ಶಿಸಿ, 'ಅಬ್ರಕಡಬ್ರ'. 'ಭೂ ಮಂತ್ರ' ಅಂಕಣಗಳಲ್ಲಿ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಆ ಲೇಖನಗಳಿಂದ ಒಮ್ಮೊಮ್ಮೆ ಟೀಕೆಗಳು ಬರುತ್ತಿದ್ದವು. ಈ ಅಂಕಣಗಳಿಗೆ ಮೈಸೂರಿಗರು ವಿಮರ್ಶೆಗಳನ್ನು ಹುಡುಕುತ್ತಿದ್ದ ಪ್ರಸಂಗವನ್ನು ವಿವರಿಸಿದರು.

ನಾನು 1980ರ ದಶಕದಲ್ಲಿ ಆಗತಾನೆ ರಾಜಕಾರಣಕ್ಕೆ ಬಂದಿದ್ದೆ. ಆಗ ಕೆ.ಬಿ. ಗಣಪತಿಯವರು ನನಗೆ ವ್ಯಾಪಕ ಪ್ರಚಾರ ನೀಡಿ, ರಾಜಕಾರಣದ ದಿಕ್ಕು ದೆಸೆ ತೋರಿದ್ದರು. ಅಲ್ಲದೆ ನನ್ನಂತೆ ಅನೇಕ ಮೈಸೂರು ಭಾಗದ ಯುವ ರಾಜಕಾರಣಿಗಳಿಗೆ ತಮ್ಮ ಪತ್ರಿಕೆಗಳ ಮೂಲಕ ವೇದಿಕೆ ನೀಡಿ, ರಾಜಕೀಯದಲ್ಲಿ ಬೆಳೆಸುತ್ತಿದ್ದ ಪ್ರಸಂಗವನ್ನು ವಿವರಿಸಿದರಲ್ಲದೆ, ದಿನದ 24 ಗಂಟೆಯೂ ಪತ್ರಕರ್ತರ ದೃಷ್ಟಿಕೋನದಲ್ಲೇ ಪ್ರತಿಯೊಂದು ವಿಷಯಗಳನ್ನು ಗ್ರಹಿಸಿ ನಮ್ಮಗಳ ಜೊತೆಗೆ ವ್ಯವಹರಿಸುತ್ತಿದ್ದ ಪ್ರಸಂಗವನ್ನು ವಿವರಿಸಿದರು.

ಮೈಸೂರನ್ನು ಕೇಂದ್ರಿಕರಿಸಿ ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಅಪಾರ ಓದುಗರ ಬಳಗವನ್ನು ತನ್ನಾದಾಗಿಸಿಕೊಂಡಿದ್ದ 'ಮೈಸೂರು ಮಿತ್ರ' ಸಿಮೀತ ಪ್ರದೇಶಗಳಿಗೆ ಸುದ್ದಿಗಳು ಮಾತ್ರ ಪ್ರಕಟವಾಗುತ್ತದೆ. ರಾಜ್ಯ ಮಟ್ಟದ ಪತ್ರಿಕೆಗಳಿಗೆ ಸರಿಸಮಾನಾಗಿ 'ಮೈಸೂರು ಮಿತ್ರ' ಹೆಚ್ಚಿನ ಓದುಗರನ್ನು ಈ ಭಾಗದಲ್ಲಿ ಸಂಪಾದಿಸಿತ್ತು. ಅಂತೆಯೇ 'ಸ್ಟಾರ್ ಆಫ್ ಮೈಸೂರ್' ಅಪಾರ ಓದುಗರನ್ನು ಮೈಸೂರಿನಲ್ಲಿ ಹೊಂದಿದ್ದು, ಇವೆರಡು ಪತ್ರಿಕೆಗಳನ್ನು ಸ್ಥಾಪಿಸಿ, 50 ವರ್ಷಗಳ ಕಾಲ ಪತ್ರಿಕೋದ್ಯಮದಲ್ಲಿ ನಿರಂತರ ಸೇವೆ ಸಲ್ಲಿಸುವುದು ಸಾಮಾನ್ಯ ಸಂಗತಿಯಲ್ಲ. ಕೆಬಿಜಿ ಅವರ ಅಗಲಿಕೆ ನಾಡಿಗೆ ತುಂಬಲಾರದ ನಷ್ಟ ಎಂದು ಸಂತಾಪ ಸೂಚಿಸಿದರು.

ಅವರೊಂದಿಗೆ ಶಾಸಕನಾಗಿ, ಸಚಿವನಾಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವನಾಗಿ ಸಾಕಷ್ಟು ಬಾರಿ ಮೈಸೂರಿನ ಅಭಿವೃದ್ಧಿ, ಪ್ರವಾಸೋದ್ಯಮ ಸೇರಿದಂತೆ ಇತರೆ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದೆವು. ತಮ್ಮ ಮೊನಚಾದ ಬರವಣಿಗೆ ಮೂಲಕ ಮೈಸೂರಿಗರ ಅಚ್ಚುಮೆಚ್ಚಿನ 'ಮಿತ್ರ'ನಾಗಿ ಗಮನ ಸೆಳೆಯುತ್ತಿದ್ದರು ಎಂದು ಸ್ಮರಿಸಿದ್ದಾರೆ.

ಒಂದನೇ ಪುಟದಿಂದ

ಕೆಬಿಜಿ ಇನ್ನಿಲ್ಲ

ಉದ್ಯಮಿಗಳು, ಪತ್ರ ಕರ್ತರು ಸೇರಿದಂತೆ ಸಮಾಜದ ಎಲ್ಲಾ ಕ್ಷೇತ್ರದ ಸಾವಿರಾರು ಮಂದಿ ಡಾ.ಕೆ.ಬಿ.ಗಣಪತಿ ಅವರ ಅಂತಿಮ ದರ್ಶನ ಪಡೆದು, ಶ್ರದ್ಧಾಂಜಲಿ ಅರ್ಪಿಸಿದರು. ಸುತ್ತೂರು ಶ್ರೀ ದೇಶೀಕೇಂದ್ರ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜೀ, ಸಂಸದ ಯದುವೀರ್, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಹೆಚ್.ವಿಶ್ವನಾಥ್, ಗಣೇಶ್ ಪ್ರಸಾದ್, ಡಾ.ತಿಮ್ಮಯ್ಯ, ಪೊನ್ನಣ್ಣ, ಮಂಥರ್‌ಗೌಡ, ವಿಧಾನಪರಿಷತ್ ಮಾಜಿ ಸದಸ್ಯರಾದ ಡಿ.ಮಾದೇಗೌಡರು, ಸಂದೇಶ್ ನಾಗರಾಜ್, ಸಿದ್ದರಾಜು, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಎಂ.ಶಿವಣ್ಣ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎಸ್.ಎ.ರಾಮದಾಸ್, ಹೆಚ್.ಪಿ.ಮಂಜುನಾಥ್, ರವೀಂದ್ರ ಶ್ರೀಕಂಠಯ್ಯ, ಗೀತಾ ಮಹದೇವಪ್ರಸಾದ್, ವಾಟಾಳ್ ನಾಗರಾಜ್, ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್, ಉದ್ಯಮಿಗಳಾದ ಜಗನ್ನಾಥ್ ಶೆಣೈ, ಪಿ.ವಿ.ಗಿರಿ, ರಘುಲಾಲ್ ರಾಘವನ್, ಎಂ.ನಾರಾಯಣಗೌಡ, ಎಸ್.ಚಂದ್ರಶೇಖರ್, ವಾಸುದೇವಭಟ್, ಅರ್ಜುನ್‌ರಂಗ, ಶ್ರೀಹರಿ, ಶಿವಕುಮಾರ್, ಪಬ್ಲಿಕ್ ಟಿವಿ ಹೆಚ್.ಆರ್.ರಂಗನಾಥ್, ಸಾಹಿತಿ ಕೆ.ಎಸ್.ಭಗವಾನ್, ಔಟ್‌ಲುಕ್ ಮಾಜಿ ಸಂಪಾದಕ ಕೃಷ್ಣಪ್ರಸಾದ್, ಚಿಂತಕ ಚಕ್ರವರ್ತಿ ಸೂಲಿಬೆಲೆ ಸೇರಿದಂತೆ ಸಾವಿರಾರು ಜನರು ಕೆಬಿಜಿ ಅಂತಿಮ ದರ್ಶನ ಪಡೆದು ಅವರ ಆತ್ಮಕ್ಕೆ ಶಾಂತಿ ಕೋರಿದರು.

ಸಂಜೆ 4 ಗಂಟೆ ನಂತರ ಮೈಸೂರಿನ ಚಾಮುಂಡಿಬೆಟ್ಟ ತಪ್ಪಲಿನ ಅನಿಲ ಚಿತಾಗಾರದಲ್ಲಿ ಕೊಡವ ಸಂಪ್ರದಾಯದಂತೆ ಅಂತಿಮ ವಿಧಿ–ವಿಧಾನಗಳ ಬಳಿಕ ಕೆಬಿಜಿಯವರ ಅಂತಿಮ ಸಂಸ್ಕಾರ ನೆರವೇರಿಸಲಾಯಿತು. ಐದು ದಶಕಗಳ ಕಾಲ ಪತ್ರಿಕೋದ್ಯಮದಲ್ಲಿ ತಮ್ಮ ಮೊನಚಾದ ಬರಹದ ಮೂಲಕ ಓದುಗರಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸಿದ್ದ ಡಾ.ಕೆ.ಬಿ. ಗಣಪತಿ ಅವರು ಇನ್ನು ನೆನಪು ಮಾತ್ರ. ಆದರೆ ಡಾ.ಕೆ.ಬಿ.ಗಣಪತಿ ಅವರು ತಮ್ಮ ಹೆಸರಾಂತ ಅಂಕಣಗಳ ಮೂಲಕ ನೀಡಿರುವ ಸಂದೇಶಗಳು ಜನ ಮಾನಸದಲ್ಲಿ ಅಚ್ಚಳಿಯದೇ ಉಳಿಯಲಿವೆ.

ಸುತ್ತೂರು ಶ್ರೀಗಳ ಸಂತಾಪ

ಸದಸ್ಯರಾಗಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಕೊಡವ ಸಮಾಜದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ತ್ಸುನಾಮಿ, ಅತಿವೃಷ್ಟಿ–ಅನಾವೃಷ್ಟಿಗಳಿಗೆ ಸಹಾಯ ಮಾಡಲು ಪ್ರಾರಂಭಿಸಿದ ಮೈಸೂರು ನಾಗರಿಕರ ವೇದಿಕೆಯ ಸಮಿತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮೌಲ್ಯಯುತ ಸಲಹೆ–ಮಾರ್ಗದರ್ಶನ ನೀಡುತ್ತಿದ್ದರು. ಆದರ್ಶವಾದಿ, ಕೊಡಗಿನ ಮೇಲೆ ಶಿಲುಬೆಯ ನೆರಳು, 'ಭೂಮಂತ್ರ' ಹಾಗೂ 'ಶಿವಾಜಿಯ ಖಡ್ಗ' ಸೇರಿ ನಾಲ್ಕು ಕನ್ನಡ ಕೃತಿಗಳು ಮತ್ತು ಏಳು ಇಂಗ್ಲಿಷ್ ಕೃತಿಗಳನ್ನು ರಚಿಸಿದ್ದಾರೆ.

ಹೀಗೆ ಇವರ 'ಲೈಫ್ ಅಂಡ್ ಟೈಮ್ಸ್' ಕೃತಿಯು ಜೀವನ, ಸಾಹಿತ್ಯ, ಧರ್ಮ, ಆಧ್ಯಾತ್ಮಿಕತೆ ಹಾಗೂ ವ್ಯಕ್ತಿತ್ವಗಳ ಕುರಿತು ಬೆಳಕು ಚೆಲ್ಲುವ ಅಪೂರ್ವ ಕೃತಿಯಾಗಿದೆ. ಇತ್ತೀಚೆಗೆ ಮೈಸೂರು ಲಿಟರರಿ ಫೋರಂ ವಾರ್ಷಿಕ ಕಾರ್ಯಕ್ರಮದಲ್ಲಿ ಅವರ 'ಎ ಹಿಡನ್ ಲೈಫ್ ಆಫ್ ಎ ಯೋಗಿ' ಕೃತಿ ಲೋಕಾರ್ಪಣೆ ಆಗಿತ್ತು.

'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದ 'ಅಬ್ರಕಾಡಬ್ರಾ' ಅಂಕಣವು ಹೆಚ್ಚು ಜನಪ್ರಿಯವಾದುದು. ಪತ್ರಿಕೋದ್ಯಮ ಕ್ಷೇತ್ರಕ್ಕೆ ಸಲ್ಲಿಸಿದ ಗಣನೀಯ ಸೇವೆಗೆ ರಾಜ್ಯೋತ್ಸವ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್‌ಗೂ ಭಾಜನರಾಗಿದ್ದರು. ಕೆ.ಬಿ. ಗಣಪತಿಯವರ ಅಗಲಿಕೆಯಿಂದ ಸಮಾಜ ಮತ್ತು ಪತ್ರಿಕೋದ್ಯಮಕ್ಕೆ ಕೊರತೆ ಉಂಟಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಅವರ ಕುಟುಂಬಸ್ಥರು, ಬಂಧು ವರ್ಗದವರು ಮತ್ತು ಅಪಾರ ಅಭಿಮಾನಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇವೆ ಎಂದು ಶ್ರೀಗಳು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

STAR OF MYSORE – ಮೈಸೂರು ಮಿತ್ರ ಸಂಸ್ಥಾಪಕರು, ಉದ್ಯಮಿ

ಪತ್ರಕರ್ತರೂ ಆದ ಕೆಬಿಜಿಯವರ ಸಾಧನೆ ಹಾದಿ



ಡಾ.ಕಲ್ಯಾಟಂಡ ಬಿ.ಗಣಪತಿ, ಮೈಸೂರಿನ ಬನ್ನಿಮಂಟಪದ ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್ ಪ್ರಕಟಿಸುವ 'ಸ್ಟಾರ್ ಆಫ್ ಮೈಸೂರ್' ಸಂಜೆ ಆಂಗ್ಲ ದಿನಪತ್ರಿಕೆ ಹಾಗೂ 'ಮೈಸೂರು ಮಿತ್ರ' ಕನ್ನಡ ಬೆಳಗಿನ ದಿನಪತ್ರಿಕೆ ಮಾಜಿ ಛೇರ್ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕರು (ಸಿಎಂಡಿ) ಮತ್ತು ಪ್ರಧಾನ ಸಂಪಾದಕರು. ಅವರು ಇಂದು (ಜುಲೈ 13, 2025) ಮೈಸೂರಿನಲ್ಲಿ ತಮ್ಮ 85ನೇ ವಯಸ್ಸಿನಲ್ಲಿ ನಿಧನರಾದರು.

ಮೈಸೂರು ನಗರದ ಅತೀ ಹೆಚ್ಚು ಪ್ರಸಾರವಾಗುವ ಮತ್ತು ಜನಪ್ರಿಯ ಸಂಜೆ ದಿನಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಅನ್ನು 1978ರಲ್ಲಿ ಕೆ.ಬಿ.ಗಣಪತಿ ಮತ್ತು ದಿವಂಗತ ಸಿ.ಪಿ.ಚಿನ್ನಪ್ಪ ಆರಂಭಿಸಿದರು. ಅಂತೆಯೇ 'ಸ್ಟಾರ್ ಆಫ್ ಮೈಸೂರ್'ನ ಸಹೋದರ ಪತ್ರಿಕೆಯಾದ 'ಮೈಸೂರು ಮಿತ್ರ' ಕನ್ನಡ ಪ್ರಾದೇಶಿಕ ದಿನಪತ್ರಿಕೆಯನ್ನು 1980ರಲ್ಲಿ ಸ್ಥಾಪಿಸಲಾಯಿತು. ಮತ್ತು ಈ ಪತ್ರಿಕೆಯೂ ಸ್ಟಾರ್ ಆಫ್ ಮೈಸೂರ್‌ನಂತೆ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳನ್ನು ಒಳಗೊಂಡಂತೆ ಜನಪ್ರಿಯವಾಗಿದೆ.

27-12-1939ರಂದು ಕೂರ್ಗ್‌ನಲ್ಲಿ (ಕೊಡಗು ಜಿಲ್ಲೆ) ಕೆ.ಎ.ಬೋಪಯ್ಯ ಮತ್ತು ಕೆ.ಬಿ.ಮುತ್ತವ್ವ (ಬೇಬಿ) ದಂಪತಿ ಪುತ್ರರಾಗಿ ಗಣಪತಿಯವರು ಜನಿಸಿದರು. ನಾಲ್ವರು ಒಡಹುಟ್ಟಿದವರಲ್ಲಿ ಇವರು ಎರಡನೇಯವರು. ಉತ್ತರ ಕೊಡಗಿನ ಕುಂಜಿಲ (ಕಕ್ಕಬ್ಬೆ) ಇವರ ಸ್ವಂತ ಗ್ರಾಮ. ಕೆಬಿಜಿಯವರ ತಂದೆ ಕೊಡವ ಕುಲದ ಕಲ್ಯಾಟಂಡ ಕುಟುಂಬಕ್ಕೆ ಸೇರಿದವರು ಹಾಗೂ ಅವರು ಶಾಲಾ ಶಿಕ್ಷಕರಾಗಿದ್ದವರು. ಕೆ.ಬಿ.ಗಣಪತಿಯವರು ಕಲಾ (ಆರ್ಟ್ಸ್) ಮತ್ತು ಕಾನೂನು ಪದವೀಧರರು. ಜೊತೆಗೆ ಬಾಂಬೆಯ ಭಾರತೀಯ ವಿದ್ಯಾಭವನ (ಬಿವಿಬಿ)ದಿಂದ ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಪಡೆದವರು.

ಕೆಬಿಜಿಯವರು 1961ರಿಂದ 1964ರವರೆಗೆ ಬೆಂಗಳೂರಿನ ಕರ್ನಾಟಕ ಹೈಕೋರ್ಟ್ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ವಕೀಲರಾಗಿದ್ದರು. ಬೆಂಗಳೂರಿನ ಹಿರಿಯ ವಕೀಲರ ಕಚೇರಿಯಲ್ಲಿ ನಾಲ್ಕು ವರ್ಷಗಳ ಕಾಲ ತರಬೇತಿ ಅವಧಿಯಲ್ಲಿ ಜೂನಿಯರ್ ವಕೀಲರಾಗಿ ಸೇವೆ ಸಲ್ಲಿಸಿದ ನಂತರ ಅವರು, ಪತ್ರಿಕೋದ್ಯಮ ಕ್ಷೇತ್ರದಲ್ಲಿ ಮುಂದುವರೆಯಲು ಬಯಸಿದರು. ಜೊತೆಗೆ ಆ ಕಡೆಗೆ ಒಲವು ಹೊಂದಿದ್ದರು. ಹೀಗಾಗಿ ಕೆಬಿಜಿಯವರು ಪತ್ರಿಕೋದ್ಯಮ ಅಧ್ಯಯನಕ್ಕಾಗಿ ಬಾಂಬೆಯ ಭಾರತೀಯ ವಿದ್ಯಾಭವನಕ್ಕೆ ಸೇರಿದರು. ಇಲ್ಲಿ ಡಿಪ್ಲೊಮಾ ಪೂರೈಸಿದ ನಂತರ ಪತ್ರಿಕೋದ್ಯಮದ ದಿಗ್ಗಜ ಟಿ.ಜೆ.ಎಸ್.ಜಾರ್ಜ್ ಅವರ ಸಂದರ್ಶನ ನಡೆಸಿದ್ದರು. ಈ ವೇಳೆ ಅವರು ಫ್ರೀ ಪ್ರೆಸ್ ಜರ್ನಲ್‌ನ ಸಹಾಯಕ ಸಂಪಾದಕರಾಗಿದ್ದರು. ಅವರು ಗಣಪತಿಯವರಿಗೆ ಉಪ ಸಂಪಾದಕರಾಗಿ ಚೊಚ್ಚಲ ಉದ್ಯೋಗ ನೀಡಿದರು. ಕೆಬಿಜಿಯವರು 1970ರವರೆಗೆ ಫ್ರೀ ಪ್ರೆಸ್ ಜರ್ನಲ್ ಮತ್ತು ಬಾಂಬೆಯ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪತ್ರಕರ್ತರಾಗಿ (ವರದಿಗಾರ ಮತ್ತು ಉಪ ಸಂಪಾದಕ) ಸೇವೆ ಸಲ್ಲಿಸಿದರು. ನಂತರ 1970ರ ವೇಳೆಗೆ ಪುಣೆಯಲ್ಲಿ 'ಸನ್‌ಬೀಮ್ ಎಡ್ವರ್ಟೈಸಿಂಗ್' ಎಂಬ ತಮ್ಮ ಸ್ವಂತ ಜಾಹೀರಾತು ಸಂಸ್ಥೆಯನ್ನು ಸ್ಥಾಪಿಸಿದರು.

1980-90ರ ದಶಕದಲ್ಲಿ ಅನೇಕ ಯುವ ಪತ್ರಕರ್ತರು ಹಾಗೂ ಬರಹಗಾರರು ಪತ್ರಿಕೋದ್ಯಮ ಪದವಿ ಹೊಂದಿರಲಿಲ್ಲ. ಆದರೂ ಅವರಿಗೆ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ'ದಲ್ಲಿ ಉದ್ಯೋಗ ಕಲ್ಪಿಸಿ ಸೂಕ್ತ ಮಾರ್ಗದರ್ಶನ ನೀಡಲು ಕೆಬಿಜಿ ಒತ್ತು ನೀಡಿದ್ದರು.

'ಸುದ್ದಿಗಾಗಿ ಮೂಗು (ಸುದ್ದಿ ಗುರುತಿಸುವಿಕೆ)', 'ಕಥೆ ಹೇಳುವ ಉತ್ಸಾಹ' ಮತ್ತು 'ಪತ್ರಿಕೋದ್ಯಮದ ಮುಖ್ಯ ಉದ್ದೇಶದ ಬಗ್ಗೆ ಪ್ರಜ್ಞೆ' ಪತ್ರಿಕೋದ್ಯಮದ ಪದವಿಗಿಂತಲೂ ಹೆಚ್ಚು ಮುಖ್ಯ ಎಂದು ಕೆಬಿಜಿ ಭಾವಿಸಿದ್ದರು.

ಸ್ಟಾರ್ ಹಾಗೂ ಮಿತ್ರನ ಹಳೇ ಉದ್ಯೋಗಿಗಳಲ್ಲಿ ಹಲವರು ಇಂದು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಮಾಧ್ಯಮ ಸಂಸ್ಥೆಗಳಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಅವರಲ್ಲಿ ಕೆಲವರೆಂದರೆ, ದಿವಂಗತ ಗಿರೀಶ್ ನಿಕ್ಕಂ (ರಾಜ್ಯಸಭಾ ಟಿವಿ), ದಿವಂಗತ ನಿರಂಜನ್ ನಿಕ್ಕಂ (ಡೆಕ್ಕನ್ ಹೆರಾಲ್ಡ್), ಕೃಷ್ಣ ಪ್ರಸಾದ್ (ಔಟ್‌ಲುಕ್ ಮಾಜಿ ಸಂಪಾದಕ), ಚೇತನ್ ಕೃಷ್ಣಸ್ವಾಮಿ (ದಿ ವೀಕ್ ನಿಯತಕಾಲಿಕೆಯಲ್ಲಿದ್ದರು), ಹೆಚ್.ಆರ್.ರಂಗನಾಥ್ (ಕನ್ನಡ ಪ್ರಭದ ಮಾಜಿ ಸಂಪಾದಕರು ಹಾಗೂ ಪ್ರಸ್ತುತ ಪಬ್ಲಿಕ್ ಟಿವಿಯ ಪ್ರಧಾನ ಸಂಪಾದಕರು), ಮನು ಅಯ್ಯಪ್ಪ (ದಿ ಟೈಮ್ಸ್ ಆಫ್ ಇಂಡಿಯಾ) ಮೊದಲಾದವರನ್ನು ಹೆಸರಿಸಬಹುದು.

ಕೆಬಿಜಿಯವರಿಗೆ ಪತ್ರಿಕಾರಂಗದ ಮೇಲೆ ಉತ್ಸಾಹ

ಪತ್ರಿಕಾರಂಗದ ಮೇಲಿನ ಉತ್ಸಾಹದಿಂದ ಕೆಬಿಜಿಯವರು ತಮ್ಮ ಎರಡು ಪತ್ರಿಕೆಗಳನ್ನು ಸದರಿ ಕ್ಷೇತ್ರದ ಅಧ್ಯಯನಕ್ಕಿರುವ ಶಾಲೆಯ ಮಾದರಿಯಲ್ಲಿ ಪರಿವರ್ತಿಸಿದ್ದರು. ಆ ಮೂಲಕ ಮೈಸೂರಿನ ಪತ್ರಿಕೋದ್ಯಮದ ಶೈಕ್ಷಣಿಕ ವ್ಯವಸ್ಥೆಗಿಂತಲೂ ಹೆಚ್ಚು ಅಭ್ಯಾಸ ಕಲ್ಪಿಸಿ, ಯಶಸ್ವಿ ಪತ್ರಕರ್ತರನ್ನು ಹೊರತರುವಲ್ಲಿ ಕೆಬಿಜಿ ಯಶಸ್ವಿಯಾದರು. ಹಲವು ವರ್ಷಗಳಿಂದ ಎರಡೂ ಪತ್ರಿಕೆಗಳಲ್ಲಿ ಟಿ.ಜೆ.ಎಸ್.ಜಾರ್ಜ್, ಮೇನಕಾ ಗಾಂಧಿ, ದೇವದತ್ ಪಟ್ಟನಾಯಕ್, ಸದ್ಗುರು ಮೊದಲಾದ ಪ್ರಸಿದ್ಧ ಚಿಂತಕರ ಲೇಖನಗಳು ಪ್ರಕಟಗೊಳ್ಳುತ್ತಿವೆ. ಗಣಪತಿಯವರು ತಮ್ಮ ಎರಡು ಪತ್ರಿಕೆಗಳ ಮೂಲಕ ಮೈಸೂರು ಭಾಗದ ಜನತೆಯಲ್ಲಿ ಪ್ರಭಾವಶಾಲಿ ಸ್ಥಳೀಯ ಪತ್ರಿಕೆಗಳ ಉಪಯುಕ್ತತೆ ಮತ್ತು ಸಮುದಾಯದ ಮೇಲೆ ಅವುಗಳ ಪ್ರಭಾವದ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳು ಅಥವಾ ಸ್ಥಳೀಯ ಸಂಸ್ಥೆಗಳ ಕಳಪೆ ಸೇವೆಯಿಂದ ನಾಗರಿಕರು ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಎರಡೂ ಪತ್ರಿಕೆಗಳು ಧ್ವನಿಯಾಗುತ್ತಿವೆ. ಸ್ಥಳೀಯ ಪತ್ರಿಕೋದ್ಯಮ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಮೂಲಕ ಹೇಗೆ ಉತ್ತಮ ನಗರವನ್ನು ಸೃಷ್ಟಿಸಬಹುದು, ನಾಗರಿಕರ ಸಮಸ್ಯೆಗಳಿಗೆ ಹೇಗೆ ಪರಿಹಾರ ದೊರಕಿಸಬಹುದು ಎಂಬುದನ್ನು ಹಿರಿಯ ಪತ್ರಕರ್ತರಾದ ಕೆಬಿಜಿ ಸಾಧಿಸಿ ತೋರಿಸಿದ್ದಾರೆ.



ಸ್ಟಾರ್‌ನ ಉದಯ

ಕೆಬಿಜಿಯವರು ತಮ್ಮ ವಿವಾಹ ನಂತರ 1976ರಲ್ಲಿ ಮೈಸೂರಿಗೆ ಸ್ಥಳಾಂತರಗೊಂಡರು. ಏಕೆಂದರೆ ಅವರ ಪತ್ನಿ ಕೆ.ಕೆ.ದೇವಮ್ಮ (ರ್‍ಯಾಲಿ ಗಣಪತಿ) ಮೈಸೂರಿನ ಸರ್ಕಾರಿ ಕಾಲೇಜಿನ ಉಪನ್ಯಾಸಕರಾಗಿದ್ದರು ಮತ್ತು ಅವರ ಕುಟುಂಬ ಸದಸ್ಯರು ಮೈಸೂರಿನಲ್ಲಿ ನೆಲೆಸಿದ್ದರು. ಶೀಘ್ರದಲ್ಲಿ ಕೆಬಿಜಿಯವರು ಬಯಸಿದ್ದ ಪತ್ರಿಕೋದ್ಯಮ ಪ್ರಾರಂಭಿಸಲು ಸಹಕಾರವೂ ದೊರೆಯಿತು. ಹೀಗೆ 1978ರಲ್ಲಿ 'ಸ್ಟಾರ್ ಆಫ್ ಮೈಸೂರ್' ಉದಯಿಸಿತು.

ಇಂದು 48 ವರ್ಷಗಳ ನಂತರ ಸಮಾರು ಹತ್ತು ಲಕ್ಷ ಜನಸಂಖ್ಯೆ ಹೊಂದಿರುವ ಮೈಸೂರು ನಗರದ ಇಂಗ್ಲಿಷ್ ಸಂಜೆ ಪತ್ರಿಕೆಯಾಗಿ 'ಸ್ಟಾರ್ ಆಫ್ ಮೈಸೂರ್' ಒಂದು ಲಕ್ಷಕ್ಕೂ ಅಧಿಕ ಓದುಗರನ್ನು ಹೊಂದಿರುವ ಹಾಗೂ ಅತಿದೊಡ್ಡ ಪ್ರಸಾರವಿರುವ ಪ್ರತಿಕೆಯಾಗಿ ಹೊರಹೊಮ್ಮಿದೆ.

ಮಿತ್ರನ ಆರಂಭ

1978ರಲ್ಲಿ 'ಸ್ಟಾರ್ ಆಫ್ ಮೈಸೂರ್' ಅನ್ನು ಸ್ಥಾಪಿಸಿದ ಎರಡು ವರ್ಷಗಳ ನಂತರ ಗಣಪತಿಯವರು, ಸ್ಥಳೀಯ ಭಾಷೆಯಲ್ಲಿ ಪತ್ರಿಕೋದ್ಯಮದ ಮಹತ್ವ ಗುರುತಿಸಿ, 'ಮೈಸೂರು ಮಿತ್ರ' ಸ್ಥಳೀಯ ಕನ್ನಡ ಬೆಳಗಿನ ಪತ್ರಿಕೆಯನ್ನು ಪ್ರಾರಂಭಿಸಿದರು. ಇಂದು ಈ ಕನ್ನಡ ದಿನ ಪತ್ರಿಕೆಯು ಪ್ರಾದೇಶಿಕ ಪತ್ರಿಕೆಯಾಗಿ ಬೆಳೆದಿದ್ದು, ಐದು ಜಿಲ್ಲೆಗಳನ್ನು ಒಳಗೊಂಡಿದ್ದು, 2.5 ಲಕ್ಷಕ್ಕೂ ಅಧಿಕ ಸಂಖ್ಯೆಯ ಓದುಗರನ್ನು ಹೊಂದಿರುವ ಹಿರಿಮೆ ಮುಡಿಗೇರಿಸಿಕೊಂಡಿದೆ.


1970ರ ದಶಕದಲ್ಲಿ ಮೈಸೂರಿನಲ್ಲಿ ಹಲವು ಪತ್ರಿಕೆಗಳು ಇದ್ದರೂ 'ಸ್ಟಾರ್ ಆಫ್ ಮೈಸೂರ್' ತನ್ನ ವಾಸ್ತವಿಕ, ನಿಖರ ಹಾಗೂ ಸ್ಪಷ್ಟ ವರದಿಗಾಗಿ ಓದುಗರ ಮೆಚ್ಚುಗೆಗೆ ಪಾತ್ರವಾಯಿತು. ಇದಲ್ಲದೆ, ಗಣಪತಿಯವರು ಅಬ್ರಕಾಡಬ್ರಾ ಮತ್ತು ಹಾಕಸ್-ಪೋಕಸ್ ಎಂಬ ಎರಡು ಅಂಕಣಗಳನ್ನು ಬರೆಯುತ್ತಿದ್ದರು. ಇದು ಪತ್ರಿಕೆಯನ್ನು ಜನಪ್ರಿಯಗೊಳಿಸಲು ವಿಶಿಷ್ಟ ಕೊಡುಗೆ ನೀಡಿತು. ಕೆಬಿಜಿಯವರ ಈ ಅಂಕಣಗಳು ಜ್ಞಾನಾರ್ಜನೆ, ಮಾಹಿತಿಯುಕ್ತವಾಗಿರುವ ಮೂಲಕ ಶೀಘ್ರದಲ್ಲೇ ಮೈಸೂರು ನಾಗರಿಕರ ಗಮನ ಸೆಳೆಯುವಂತಾಯಿತು. ಕೆಬಿಜಿಯವರು 48 ವರ್ಷಗಳ ನಂತರವೂ ತಮ್ಮ ಅಂಕಣ ಬರೆಯುವುದನ್ನು ಮುಂದುವರೆಸಿದ್ದರು.

ವರದಿಗಾರಿಕೆಗೆ ಗಮನ, ದೃಶ್ಯ ಆಕರ್ಷಣೆ

ಬಹುಶಃ 'ಸ್ಟಾರ್ ಆಫ್ ಮೈಸೂರ್' ಅತೀ ಹೆಚ್ಚು ಚಂದಾದಾರರನ್ನು ಹೊಂದಿರುವ ದೇಶದ ಏಕೈಕ ಸಂಜೆ ಪತ್ರಿಕೆಯಾಗಿದೆ. ವರದಿಗಾರಿಕೆಗೆ ವಿಶೇಷ ಗಮನ ನೀಡುವ ಜೊತೆಗೆ ಪತ್ರಿಕೆ ವಿತರಣಾ ಜಾಲವನ್ನು ಬಲವಾಗಿ ನಿರ್ಮಿಸುವ ಮೂಲಕ ಕೆಬಿಜಿ ಈ ಸಾಧನೆ ಮಾಡಿದ್ದು, ಇಂತಹ ಪ್ರಯತ್ನಗಳಲ್ಲಿ ಯಶಸ್ವಿಯಾಗಲು ಅನೇಕ ರಾಷ್ಟ್ರೀಯ ಪತ್ರಿಕೆಗಳು ವಿಫಲವಾಗಿರುವ ಉದಾಹರಣೆಗಳಿವೆ. ಸ್ಥಳೀಯ ಪತ್ರಿಕೋದ್ಯಮದಲ್ಲಿ ಯಶಸ್ವಿಯಾಗಲು ಕೆಬಿಜಿಯವರು ಮೂರು ವಿಶಿಷ್ಟ ಮಾರ್ಗಗಳನ್ನು ಅನುಸರಿಸಿದರು. ಮೊದಲನೆಯದಾಗಿ ಪತ್ರಿಕೆಯು ದೃಷ್ಟಿಗೋಚರವಾಗಿ ಎದ್ದು ಕಾಣುವುದಕ್ಕೆ ಆದ್ಯತೆ ನೀಡಿದ್ದರು. ಇದನ್ನು ಸಾಧಿಸಲು ಅವರು ಸ್ಟಾರ್ ಆಫ್ ಮೈಸೂರ್ ಅನ್ನು ವಿಶಿಷ್ಟ ಗಾತ್ರದಲ್ಲಿ ಮುದ್ರಿಸುವ ವ್ಯವಸ್ಥೆಯನ್ನು ಅವರು ಆಯ್ಕೆ ಮಾಡಿಕೊಂಡರು.

ಪತ್ರಿಕೆ ಗಾತ್ರವನ್ನು ಪ್ರಕಟಿಸಲು ಹೆಚ್ಚಿನ ಹಣ ವೆಚ್ಚವಾದರೂ ಇದು ಅತ್ಯಗತ್ಯ ಎಂದು ಅವರು ಭಾವಿಸಿದ್ದರು. ಇಂದು 'ಸ್ಟಾರ್ ಆಫ್ ಮೈಸೂರ್' 'ಬರ್ಲಿನರ್ಸ್ಟ್' ಮಾದರಿಯಲ್ಲಿ ಹೊರಬರುತ್ತಿರುವ ದೇಶದ ಏಕೈಕ ಪತ್ರಿಕೆಯಾಗಿದೆ. ಕೆಬಿಜಿಯವರು ಪತ್ರಿಕೋದ್ಯಮದಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಯ ದೃಷ್ಟಿಕೋನ ಪರಿಕಲ್ಪನೆಯನ್ನು ಅನುಷ್ಠಾನಕ್ಕೆ ತಂದರು.

'ನಾಗರಿಕ ಪತ್ರಕರ್ತ' ಪದ ಸೃಷ್ಟಿಗೊಳ್ಳುವ ಮೊದಲೇ 1980ರ ದಶಕದಲ್ಲಿ ಗಣಪತಿಯವರು, ಮೈಸೂರಿನ ನಾಗರಿಕರು, ಶಿಕ್ಷಕರು, ವಿದ್ಯಾರ್ಥಿಗಳು, ಕೈಗಾರಿಕೋದ್ಯಮಿಗಳಿಗೆ ಬರೆಯಲು ಪ್ರೋತ್ಸಾಹ ನೀಡಿದರು. ಸಂಪಾದಕರಿಗೆ ಪತ್ರವಾಗಲೀ ಅಥವಾ ಲೇಖನಗಳಾಗಲೀ, ಎಲ್ಲರಿಗೂ ಪ್ರೋತ್ಸಾಹ ನೀಡಿದರು. ಇಂದಿಗೂ ಈ ಪರಂಪರೆ ಮುಂದುವರೆದಿದ್ದು, 'ಸ್ಟಾರ್ ಆಫ್ ಮೈಸೂರ್'ನಲ್ಲಿ ಡಾ.ಜಾವೀದ್ ನಯೀಮ್, ಸದ್ಗುರು, ದೇವದತ್ ಪಟ್ಟನಾಯಕ್, ಡಾ.ಬಾಲಸುಬ್ರಹ್ಮಣ್ಯಂ ಮತ್ತು ಗೌರಿ ಸತ್ಯ, ಹಾಗೆಯೇ 'ಮೈಸೂರು ಮಿತ್ರ'ದಲ್ಲೂ ಅನೇಕ ಹೆಸರಾಂತ ಅಂಕಣಕಾರರು ಬರೆಯುವುದು ಮುಂದುವರೆದಿರುವುದನ್ನು ಕಾಣಬಹುದು.













ಕೆಬಿಜಿಯವರ ಧೈರ್ಯ ಮತ್ತು ದೃಢಸಂಕಲ್ಪ

'ಸ್ಟಾರ್ ಆಫ್ ಮೈಸೂರ್' ಕುರಿತು ಮಾತನಾಡುತ್ತಾ ಕೇಂದ್ರದಲ್ಲಿ ಸಚಿವರಾಗಿದ್ದ ದಿವಂಗತ ಹೆಚ್.ಎನ್.ಅನಂತ್‌ಕುಮಾರ್ ಅವರು, 'ಈ ಭಾಗದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಮಿಡಿಯುವ ಯಾವುದಾದರೂ ಶಕ್ತಿ ಇದ್ದರೆ ಅದು 'ಸ್ಟಾರ್ ಆಫ್ ಮೈಸೂರ್' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಅಲ್ಲದೆ, 'ಕೆಬಿಜಿಯವರು ತಮ್ಮ ಪತ್ರಿಕೆಗಳ ಮೂಲಕ ಆಡಳಿತ ವ್ಯವಸ್ಥೆಯ ತಪ್ಪು ನಿರ್ಧಾರಗಳ ವಿರುದ್ಧ ಮೌನ ಯುದ್ಧವನ್ನೇ ಸಾರುತ್ತಾರೆ. ಇಂತಹ ಸನ್ನಿವೇಶದಲ್ಲಿ ಕೆಬಿಜಿ ಮತ್ತು ಅವರ ಕುಟುಂಬವು ಅನೇಕ ಬೆದರಿಕೆಗಳು ಹಾಗೂ ದಾಳಿಗಳನ್ನು ಎದುರಿಸಿದ್ದೂ ಇದೆ. ಇಂತಹ ಯಾವುದಕ್ಕೂ ಜಗ್ಗದಿರುವ ಕೆಬಿಜಿಯವರ ಧೈರ್ಯ ಮತ್ತು ದೃಢಸಂಕಲ್ಪಕ್ಕೆ ನಾನು ವಂದಿಸುತ್ತೇನೆ ಎಂದು ಅವರು ಅಭಿಮಾನ ವ್ಯಕ್ತಪಡಿಸಿದ್ದನ್ನು ಸ್ಮರಿಸಬಹುದು.

ಉದ್ಯಮಿ ಮತ್ತು ಪತ್ರಕರ್ತ ಎರಡೂ ನೆಲೆಯಲ್ಲಿ ದಕ್ಷವಾಗಿ ಕಾರ್ಯನಿರ್ವಹಿಸುವವರು ವಿರಳ. ಆದರೆ ಕೆಬಿಜಿಯವರು ಈ ಎರಡನ್ನೂ ಯಶಸ್ವಿಯಾಗಿ ನಿಭಾಯಿಸಿ ಅಪರೂಪದ ಸಾಧನೆಗೈದಿದ್ದಾರೆ. ಕೆಬಿಜಿಯವರು ಹುಟ್ಟುಹಾಕಿದ ಎರಡೂ ಪತ್ರಿಕೆಗಳೂ ಇಂದು ಮನೆ ಮಾತಾಗಿ ಆನ್‌ಲೈನ್ ಆವೃತ್ತಿಗಳನ್ನು ಹೊಂದಿವೆ.

ಮೈಸೂರು ಪಾಕ್ ಹಾಗೂ ಮೈಸೂರು ಮಲ್ಲಿಗೆಯಂತೆಯೇ ಕೆಬಿಜಿಯವರ ಎರಡೂ ಪತ್ರಿಕೆಗಳು ಮೈಸೂರು ಭಾಗದಲ್ಲಿ ಮನೆ ಮಾತಾಗಿವೆ ಎಂದು ದಿವಂಗತ ಹೆಚ್.ಎನ್.ಅನಂತ್‌ಕುಮಾರ್ ಅವರು ಹೇಳಿದ್ದರಲ್ಲಿ ಆಶ್ಚರ್ಯವಿಲ್ಲ. ತಮ್ಮ ಎರಡೂ ಪತ್ರಿಕೆಗಳ ಮೂಲಕ ಕೆಬಿಜಿಯವರು ಮೈಸೂರು ಭಾಗದ ಹಲವು ನ್ಯಾಯಪರ ಹೋರಾಟಗಳನ್ನು ಮುನ್ನಡೆಸಿದ್ದಾರೆ.

ಕೃತಿಗಳ ಕೊಡುಗೆ: ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪುಸ್ತಕಗಳನ್ನು ಬರೆಯುವ ಹವ್ಯಾಸ ರೂಢಿಸಿಕೊಂಡಿದ್ದ ಗಣಪತಿ ಅವರು 1992ರಲ್ಲಿ 'ಆದರ್ಶವಾದಿ' ಕಾದಂಬರಿ, 1993ರಲ್ಲಿ 'ಅಮೇರಿಕಾ-ಆನ್ ಏರಿಯಾ ಆಫ್ ಲೈಟ್' ಪ್ರವಾಸ ಕಥನ, 1994ರಲ್ಲಿ 'ದಿ ಕ್ರಾಸ್ ಅಂಡ್ ದಿ ಕೂರ್ಗ್' ಇಂಗ್ಲಿಷ್ ಕಾದಂಬರಿ, 2018ರಲ್ಲಿ 'ಸ್ಟಾರ್ ಆಫ್ ಮೈಸೂರ್-ಸ್ಟೋರಿ ಆಫ್ ಎ ಯೂನಿಕ್ ಇವಿನಿಂಗ್ ಇಂಗ್ಲಿಷ್ ನ್ಯೂಸ್ ಪೇಪರ್' ಕೃತಿ, 2021ರಲ್ಲಿ 'ಸೋರ್ಡ್ ಆಫ್ ಶಿವಾಜಿ' ಜೀವನ ಚರಿತ್ರೆ ಅದೇ ವರ್ಷ ಕನ್ನಡ ಅವತರಣಿಕೆ 'ಶಿವಾಜಿ ಖಡ್ಗ' ಪುಸ್ತಕಗಳು ಪ್ರಕಟಗೊಂಡವು. ಇದರ ಜೊತೆಗೆ 'ಲೈಫ್ ಅಂಡ್ ಟೈಮ್' 'ಅಬ್ರಕಾಡಬ್ರದ ಲೇಖನಗಳ ಸಂಗ್ರಹ', 'ದಿ ಹಿಡನ್ ಲೈಫ್ ಆಫ್ ಎ ಯೋಗಿ' ಪುಸ್ತಕಗಳೂ ಪ್ರಕಟಗೊಂಡಿದ್ದವು.

ಹಲವು ಪ್ರಶಸ್ತಿಗಳ ಗೌರವ: ಕೆ.ಬಿ.ಗಣಪತಿಯವರಿಗೆ ಹಲವು ಪ್ರಶಸ್ತಿ ಪುರಸ್ಕಾರಗಳು ಸಂದಿವೆ. 2001ರಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ, 2005ರಲ್ಲಿ ಹೆಚ್.ಕೆ.ವೀರಣ್ಣಗೌಡ ಮಾಧ್ಯಮ ಪ್ರಶಸ್ತಿ, ಅದೇ ವರ್ಷ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ ಕೊಡ ಮಾಡುವ ಪಿ.ಆರ್.ರಾಮಯ್ಯ ಪ್ರಶಸ್ತಿ, 2008ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2013ರಲ್ಲಿ ಮೊಹರೆ ಹನುಮಂತರಾಯ ಪ್ರಶಸ್ತಿ, 2023ರಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಕೊಡ ಮಾಡುವ ಜೀವನಮಾನ ಸಾಧನೆ ಪ್ರಶಸ್ತಿಗಳನ್ನು ಕೆಬಿಜಿ ಪಡೆದಿದ್ದಾರೆ.

ಸಮಾಜ ಸೇವೆ: ಸಮಾಜ ಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ಗಣಪತಿ ಅವರು ಹಾಲಿ ಭಾರತೀಯ ವಿದ್ಯಾಭವನ ಮೈಸೂರು ಶಾಖೆಯ ಅಧ್ಯಕ್ಷರಾಗಿದ್ದರು. ಇದಕ್ಕೂ ಮುನ್ನ ಇದೇ ಸಂಸ್ಥೆಯ ಉಪಾಧ್ಯಕ್ಷರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದರು. ಮೈಸೂರು ಕೊಡವ ಸಮಾಜದ ಉಪಾಧ್ಯಕ್ಷರಾಗಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. 1993ರಿಂದ 1995ರವರೆಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರೂ ಆಗಿದ್ದರು.

ಸೇವಾ ಕಾರ್ಯ: ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ತಮ್ಮ ಪತ್ರಿಕೆಗಳ ಮೂಲಕ ನಿಧಿ ಸಂಗ್ರಹಿಸಿ ನೀಡಿದ್ದರು. 2001ರಲ್ಲಿ ಗುಜರಾತ್‌ನಲ್ಲಿ ಸಂಭವಿಸಿದ ಭೂಕಂಪದ ವೇಳೆ ರೋಟರಿ ಮೈಸೂರಿಗರ ಜೊತೆಗೂಡಿ 12 ಲಕ್ಷ ರೂಪಾಯಿ ಸಂಗ್ರಹಿಸಿ ನೀಡಿದ್ದರು. 2003ರಲ್ಲಿ ಮಹಾರಾಷ್ಟ್ರದ ಲಾತೂರ್‌ನಲ್ಲಿ ಉಂಟಾದ ಭೂಕಂಪದ ವೇಳೆ ರೋಟರಿ ಮೈಸೂರ್ ಜೊತೆಗೂಡಿ 3.80 ಲಕ್ಷ ರೂಪಾಯಿ ಸಂಗ್ರಹಿಸಿ ಕೊಟ್ಟಿದ್ದರು. 2004ರಲ್ಲಿ ತಮಿಳುನಾಡಿನಲ್ಲಿ ಸುನಾಮಿ ಸಂಭವಿಸಿದಾಗ ತಮ್ಮ ಎರಡೂ ಪತ್ರಿಕೆಗಳ ಮೂಲಕ ವಿವಿಧ ಸಂಘ ಸಂಸ್ಥೆಗಳೊಂದಿಗೆ 74 ಲಕ್ಷ ರೂಪಾಯಿ ಸಂಗ್ರಹಿಸಿ ಮೈಸೂರು ಸಿಟಿಜನ್ ಫೋರಂ ಮೂಲಕ ನೀಡಿದ್ದರು.

ಇದರ ಜೊತೆಗೆ ಬನ್ನಿಮಂಟಪದ ಕನ್ನಡ ಉರ್ದು ಪ್ರೌಢಶಾಲೆಯನ್ನು ದತ್ತು ಪಡೆದು ಸದರಿ ಶಾಲೆಗೆ ಕಾಂಪೌಂಡ್ ಹಾಗೂ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಿಕೊಟ್ಟಿದ್ದರು. ಮೈಸೂರಿನ ವಿದ್ಯಾಶಂಕರ ಲೇಔಟ್‌ನಲ್ಲಿರುವ ಕೊಡಗು ಮಾಡೆಲ್ ಶಾಲೆಗೆ ಗಣಪತಿ ಅವರು 40 ಲಕ್ಷಕ್ಕೂ ಅಧಿಕ ದೇಣಿಗೆ ಸಂಗ್ರಹಿಸಿಕೊಟ್ಟಿದ್ದಾರೆ.

ಮೈಸೂರು ನಿಜ 'ಮಿತ್ರ' ಕೆಬಿಜಿ

ಯಾರ ಮೇಲಾದರೂ ಶತ್ರುತ್ವ ಸಾಧಿಸಬೇಕೆಂದಿದ್ದರೆ, 'ಅವರನ್ನು ಪುಸಲಾಯಿಸಿ ಹಳೆಯ ಲಾರಿ ಕೊಡಿಸಿ ಬಿಡು, ಇಲ್ಲವಾದರೆ ವೃತ್ತ ಪತ್ರಿಕೆ ಆರಂಭಿಸಲು ಪ್ರೇರೇಪಿಸಿಬಿಡು' ಎಂಬ ಮಾತು ಬಹು ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಇಂಥಾ ಕಠಿಣ ಸವಾಲಿನ ಅರಿವಿದ್ದೂ ರಾಷ್ಟ್ರೀಯ ಪತ್ರಿಕೆಯ ನೌಕರಿ ತೊರೆದು, ದೂರದ ಪುಣೆಯಿಂದ ಪುಟ್ಟ ಮೈಸೂರಿಗೆ ಬಂದು ಸ್ಥಳೀಯ ಪತ್ರಿಕೆ ಆರಂಭಿಸುವ ದೀಕ್ಷೆ ತೊಟ್ಟು, ಪತ್ರಿಕೋದ್ಯಮಕ್ಕೆ ಅಡಿಯಿಟ್ಟು ಯಶಸ್ಸಿನ ಶಿಖರವೇರಿದ ಅಪರೂಪದ ದಿಟ್ಟತನ, ಅದರ ಹಿಂದಿನ ಪರಿಶ್ರಮ, ಹೋರಾಟಕ್ಕೆ ಭಾರತೀಯ ಪತ್ರಿಕೋದ್ಯಮದಲ್ಲಿ ಒಂದು ಉದಾಹರಣೆ ನೀಡಬಲ್ಲ ವ್ಯಕ್ತಿ-ಶಕ್ತಿ ಯಾರಾದರೂ ಇದ್ದರೆ ಅದು ಕೆ.ಬಿ.ಜಿ ಮಾತ್ರ ಎಂದು ಹೇಳುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಆಗದು.

ಮಾಧ್ಯಮ ಕ್ಷೇತ್ರವೆಂದರೆ ಒಂದು ತಪಸ್ಸು, ಒಬ್ಬ ಪತ್ರಕರ್ತ ಸದಾ ಸಂಶೋಧಕನಾಗಿರಬೇಕು. ಸಾಮಾಜಿಕ ಕಾಳಜಿ ಅವನ ನಿತ್ಯ ಮಂತ್ರವಾಗಿರಬೇಕು. ಸಿದ್ಧತೆ-ಬದ್ಧತೆ ಅವನ ಧ್ಯೇಯವಾಗಿರಬೇಕು, ಸತ್ವಪರೀಕ್ಷೆಗಳನ್ನು ಎದುರಿಸುವ ಆತ್ಮಬಲವಿರಬೇಕು. ಪರಿಶುದ್ಧತೆ ಹಾಗೂ ಪಾರದರ್ಶಕ ನಡೆ ಅವನ ಅರ್ಹತೆಯಾಗಿರಬೇಕೆಂಬುದು ಕೆಬಿಜಿಯವರ ಬದುಕಿನ ಸಂದೇಶವಾಗಿದೆ.

ಪ್ರಾಮಾಣಿಕ ಹಾದಿಯಲ್ಲಿ ಪತ್ರಿಕೆ ನಡೆಸುವುದು ಎಷ್ಟು ಕಷ್ಟ ಎಂಬುದನ್ನು ಅನುಭವಿಸಿದವರಿಗೇ ಗೊತ್ತು. ಎಂಬತ್ತರ ದಶಕದಲ್ಲಿ 'ವಾಂಛಲ್ಯ' ಎಂಬ ವಾರ ಪತ್ರಿಕೆಯನ್ನು ಹೊರತರುತ್ತಿದ್ದ ಸಮಯದಲ್ಲಿ ಪ್ರತಿ ವಾರವೂ ಪ್ರಸವ ವೇದನೆ ಅನುಭವಿಸಿದ ಕಷ್ಟದ ದಿನ ಗಳನ್ನು ಇಂದಿಗೂ ನಾನು ಮರೆಯಲಾಗದು.

ಕೆಬಿಜಿಯವರು ಎಂದೂ ಪ್ರಶಸ್ತಿಗಾಗಿ ಹಾಗೂ ಅಧಿಕಾರಕ್ಕಾಗಿ ಪ್ರಭಾವಗಳ ಹಿಂದೆ ಹೋದವರಲ್ಲ. ಅದಕ್ಕಾಗಿ ಲಾಬಿ ನಡೆಸುವ ಜಾಯಮಾನ ಅವರದ್ದಲ್ಲವೇ ಅಲ್ಲ. ಇಲ್ಲದಿದ್ದರೆ ಇಷ್ಟೊತ್ತಿಗಾಗಲೇ ಸದ್ಯ ಲಭಿಸಿರುವ ರಾಜ್ಯೋತ್ಸವ, ಡಾಕ್ಟರೇಟ್ ಜೊತೆಗೆ ಇನ್ನೂ ಅನೇಕ ಪ್ರಶಸ್ತಿಗಳು ಅವರ ಮಡಿಲಿಗೆ ಬಂದು ಬೀಳುತ್ತಿತ್ತು. ಅರ್ಹತೆ, ಯೋಗ್ಯತೆ ಹಾಗೂ ಪರಿಶ್ರಮಕ್ಕೆ ಸನ್ಮಾನ, ಗೌರವಗಳು ಅರಸಿ ಬರಬೇಕೇ ಹೊರತು ಅದನ್ನು ಹಿಂಬಾಲಿಸಿ ಹೋಗಬಾರದು ಎನ್ನುವುದಕ್ಕೆ ಕೆಬಿಜಿ ಅವರು ನಮ್ಮ ಮುಂದೆ ಸಾಕ್ಷಿಯಾಗಿ ನಿಲ್ಲುತ್ತಾರೆ. ಇವತ್ತು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಮಾಧ್ಯಮ ಕ್ಷೇತ್ರದಲ್ಲಿ ಮುಗಿಲೆತ್ತರಕ್ಕೆ ಬೆಳೆದು ಪ್ರಖರ ಬೆಳಕು ಚೆಲ್ಲುತ್ತಿರುವ ನಕ್ಷತ್ರಗಳಂತೆ ಕಂಗೊಳಿಸುತ್ತಿವೆ. ಯಾರ ಹಂಗೂ, ಮುಲಾಜು ಇಲ್ಲದೇ ಎಷ್ಟೇ ಸವಾಲುಗಳು, ಅಡ್ಡಿ-ಆತಂಕಗಳು ಬಂದರೂ ಎಲ್ಲವನ್ನೂ ಮೆಟ್ಟಿ ನಿಂತು ಗಟ್ಟಿಯಾಗಿ ನೆಲೆ ಕಂಡುಕೊಂಡಿರುವ ಈ ಎರಡೂ ಪತ್ರಿಕೆಗಳ ಗಟ್ಟಿ ಅಸ್ತಿತ್ವದ ಹಿಂದೆ ಕೆಬಿಜಿ ಅವರ ಶ್ರಮ ಸಿಂಹ ಪಾಲಿನದು. ಕೆ.ಬಿ.ಜಿ ಅವರು ನಡೆದು ಬಂದ ಹಾದಿ ಕಲ್ಲು-ಮುಳ್ಳುಗಳನ್ನು ಮೆಟ್ಟಿ ನಿಲ್ಲಲೇಬೇಕಾದ ಸವಾಲಿನಿಂದ ಕೂಡಿತ್ತು. ನಮ್ಮ ವ್ಯವಸ್ಥೆಯಲ್ಲಿ ಸಾಧಕರಿಗೆ ಅವರ ಪ್ರತಿಭೆ, ಸಾಮರ್ಥ್ಯ ಹಾಗೂ ಪರಿಶ್ರಮದ ಶಕ್ತಿಯೇ ಶತ್ರುವಾಗಿ ಕಾಡುತ್ತದೆ. ಈ ಕಾಡುವಿಕೆಯ ಕಷ್ಟವನ್ನು ಅನುಭವಿಸಿ ನಷ್ಟವನ್ನು ಮೆಟ್ಟಿ ನಿಂತು ಸ್ಥಳೀಯ ಪತ್ರಿಕೆಯ ಮೂಲಕ ಪ್ರಭಾವಿ ಓದುಗರ ವಲಯವನ್ನು ಬಹುವಾಗಿ ವಿಸ್ತರಿಸಬಹುದು ಎಂಬುದನ್ನು ತೋರಿಸಿಕೊಟ್ಟವರು ಕೆಬಿಜಿ.

ಇದರಲ್ಲಿ ವಿಶೇಷವೆಂದರೆ ಕನ್ನಡದ 'ಮೈಸೂರು ಮಿತ್ರ' ಜೊತೆಗೇ ಇಂಗ್ಲೀಷಿನ ಅದರಲ್ಲೂ ಸಂಜೆ ಓದುಗರನ್ನು ಆಶ್ರಯಿಸಿ ಇಂಗ್ಲೀಷ್ ದೈನಿಕವನ್ನು ಇಡೀ ಭಾರತೀಯ ಪತ್ರಿಕೋದ್ಯಮವೇ ನಿಬ್ಬೆರಗಾಗುವಂತೆ ಇವತ್ತಿಗೂ ಮತ್ತೊಂದು ಪತ್ರಿಕೆ ಉದಾಹರಣೆಗೆ ಸಿಗದಂತೆ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯನ್ನು ದಾಖಲೆ ಎನ್ನುವಂತೆ ಮಾಧ್ಯಮ ಕ್ಷೇತ್ರದ ಭೂಪಟದಲ್ಲಿ ಹೆಗ್ಗುರುತಾಗಿ ಪಡಿಮೂಡಿಸಿದ್ದು ಗಣಪತಿಯವರ ಹೆಗ್ಗಳಿಕೆಯಾಗಿದೆ. ಕೆಬಿಜಿ ಅವರ ಗರಡಿಯಲ್ಲಿ ಪಳಗಿದ ಅನೇಕ ಪ್ರತಿಭಾವಂತ ಪತ್ರಕರ್ತರು ಇಂದು ರಾಜ್ಯ-ದೇಶದ ಮುಂಚೂಣಿ ಮಾಧ್ಯಮಗಳಲ್ಲಿ ಗುರುತಿಸಿಕೊಂಡಿದ್ದಾರೆ. ಕೆಲವರು ಹುಬ್ಬೇರಿಸುವಷ್ಟು ಬೆಳೆದು ನಿಂತಿದ್ದಾರೆ. ಇವರೆಲ್ಲರನ್ನೂ ಕಂಡು ಕೆಬಿಜಿ ಹೆಮ್ಮೆ ಪಡುತ್ತಾರೆ ಹೊರತು ಅಸೂಯೆ ಎನ್ನುವುದು ಅವರ ಹತ್ತಿರಕ್ಕೂ ಸುಳಿಯುವುದಿಲ್ಲ. ಯಾರಿಗೂ ಅಹಿತವನ್ನು ಬಯಸದ ಕೆಬಿಜಿಯವರದು ನಿರುಪದ್ರವಿ ಮನಸ್ಸು. ಯಾವುದನ್ನೂ ಮೈಮೇಲೆಳೆದುಕೊಳ್ಳುವುದಿಲ್ಲ. ಯಾರ ಮೇಲೂ ಎರಗುವುದೂ ಇಲ್ಲ. ಆದರೂ ಇವರನ್ನು ಅಸೂಯೆಗಳು, ಮಾತ್ಸರ್ಯಗಳು ಕೆಲವು ಬಾರಿ ಕಾಡಿದ್ದುಂಟು. ಆದರೆ ಇದು ಯಾವುದನ್ನೂ ಲೆಕ್ಕಕ್ಕಿಟ್ಟುಕೊಳ್ಳದೇ ಕೆಬಿಜಿ ಅವರು 'ಆನೆ ನಡೆದಿದ್ದೇ ದಾರಿ' ಎಂದು ಈವರೆವಿಗೂ ಸಾಗಿ ಬಂದಿದ್ದಾರೆ.

ಕೆಬಿಜಿ ಅವರದ್ದು ಶುಭ್ರ ಮನಸ್ಸು, ಸ್ನೇಹಪರ ನಡೆ, ಪರಿಪಕ್ವ ವೃತ್ತಿಧರ್ಮ. ಅವರಲ್ಲಿ ನಾನು ಹತ್ತಿರದಿಂದ ಕಂಡ ವಿಶೇಷ ಗುಣಗಳೇನೆಂದರೆ ಅವರು ಕುಟುಂಬವನ್ನು ಎಷ್ಟು ಪ್ರೀತಿಸುತ್ತಾರೋ ಅದಕ್ಕೂ ಮಿಗಿಲಾಗಿ ತಮ್ಮ ವೃತ್ತಿಯನ್ನು ಪ್ರೀತಿಸುತ್ತಾರೆ. ಅದನ್ನು ಪ್ರತಿ ಕ್ಷಣವೂ ಅನುಭವಿಸುವ ನಿಟ್ಟಿನಲ್ಲಿ ಸದಾ ಜಾಗೃತ ಪತ್ರಕರ್ತನೊಬ್ಬ, ಅವರೊಟ್ಟಿಗೆ ಕ್ರಿಯಾಶೀಲವಾಗಿ ಎಚ್ಚರಗೊಂಡಿರುತ್ತಾನೆ. ಕೆಬಿಜಿ ಅವರ ಕಣ್ಣುಗಳು ಕೊನೆ ಕ್ಷಣದವರೆವಿಗೂ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಗುಣಮಟ್ಟದ ಕಾವಲುಗಾರನಂತೆ ಕಾರ್ಯ ನಿರ್ವಹಿಸುತ್ತಿತ್ತು. ಐದು ದಶಕಗಳ 'ಮಿತ್ರ' ಮತ್ತು 'ಸ್ಟಾರ್'ನ ಬೆಳವಣಿಗೆ ಅದ್ಭುತವಾದುದು. ಈ ಯಶಸ್ಸಿನ ಹಿನ್ನೆಲೆಯಲ್ಲಿ ಅವರೊಂದಿಗೆ ಹೆಗಲು ಕೊಟ್ಟವರನ್ನು ಅವರು ಗೌರವಿಸುವ ರೀತಿ, ಆದರಿಸುವ ಪರಿ ಉದ್ಯೋಗದಾತರಿಗೆ ಮಾದರಿಯಾದದ್ದು. ಒಂದು ಉದ್ಯಮದಲ್ಲಿ ಕುಟುಂಬದ ವಾತಾವರಣವನ್ನು ಸೃಷ್ಟಿಸಿದ ಕಾಳಜಿ ಅನನ್ಯವಾದುದು. ತಮ್ಮ ಪತ್ರಿಕೆಯ ಸಂಪಾದಕ, ತಾಂತ್ರಿಕ ವರ್ಗ ಮತ್ತು ಇತರ ಸಿಬ್ಬಂದಿಗಳನ್ನು ಅವರು ನಡೆಸಿಕೊಂಡ ರೀತಿ ಮಾನವ ಸಂಪನ್ಮೂಲ ಜೋಡಣೆಯ ಕೌಶಲತೆ ಅರಿಯಬೇಕೆನ್ನುವವರಿಗೆ ಅವರ ಸಾರಥ್ಯದ ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್ ಅನುಕರಣೀಯ ಸ್ಥಾನದಲ್ಲಿ ನಿಲ್ಲುತ್ತದೆ.

ಹುಟ್ಟಿದ್ದು ಕೊಡಗಿನಲ್ಲೇ ಆದರೂ, ತಮ್ಮ ತಾಯ್ನೆಲದಷ್ಟೇ ಮೈಸೂರನ್ನೂ ಅಕ್ಕರೆಯಿಂದ ಪ್ರೀತಿಸುತ್ತಿದ್ದರು. ಮೈಸೂರಿನ ಅಭಿವೃದ್ಧಿ ಬಗ್ಗೆ, ಮೈಸೂರು ಪರಂಪರೆ ಉಳಿಸುವ ಬಗ್ಗೆ ಒಬ್ಬ ಹೋರಾಟಗಾರನಂತೆ ಅವರ ಮನಸ್ಸು ಪ್ರತಿ ಕ್ಷಣವೂ ಪಡಿಮಿಡಿಯುತ್ತಿತ್ತು. ತಮ್ಮ ಅಂಕಣಗಳ ಮೂಲಕ ಆ ಕಾಳಜಿ ವ್ಯಕ್ತವಾಗುತ್ತಲೇ ಇರುತ್ತಿತ್ತು. ಸಮಾನಮನಸ್ಕರೊಡಗೂಡಿ ಈ ನಿಟ್ಟಿನಲ್ಲಿ ಕ್ರಿಯಾಶೀಲ ಕಾರ್ಯಕ್ರಮಕ್ಕೆ ಒತ್ತು ನೀಡುತ್ತಿದ್ದರು. ಚಾಮುಂಡಿಬೆಟ್ಟದ ಉಳಿವಿಗಾಗಿ ಪ್ರಾಧಿಕಾರವೊಂದರ ಅಸ್ತಿತ್ವಕ್ಕಾಗಿ ಅವರು ತೋರಿದ ಕಾಳಜಿ ಮತ್ತು ಪರಿಶ್ರಮ ಹತ್ತಿರದಿಂದ ಬಲ್ಲವರಿಗಷ್ಟೇ ಗೊತ್ತು. ರಾಜ-ಮಹಾರಾಜರ ಕಾಲದಿಂದಲೂ ಮೈಸೂರಿಗೆ ಕೊಡುಗೆ ಕೊಟ್ಟವರ ಸಾಲು ಬಹು ದೊಡ್ಡದಾಗಿದೆ. ಆ ಪ್ರಾತಃಸ್ಮರಣೀಯರ ಸಾಲಿನಲ್ಲಿ ಕೆಬಿಜಿ ಮೈಸೂರಿನ ಇತಿಹಾಸದಲ್ಲಿ ಶಾಶ್ವತವಾಗಿ ನೆಲೆ ನಿಲ್ಲುತ್ತಾರೆ. ಕೆಬಿಜಿ ಅವರ ಪುಸ್ತಕ ಹಾಗೂ ಬರವಣಿಗೆಗಳಲ್ಲಿ ಮೈಸೂರು ಇತಿಹಾಸ ಅಡಗಿದೆ. ಅಭಿವೃದ್ಧಿಯ ಚಿಂತನೆಗಳು ನೆಲೆನಿಂತಿವೆ. ಜಾಗೃತ ಸಮಾಜದ ಅರಿವಿನ ಸಂದೇಶಗಳ ಸಂಗ್ರಹವಿದೆ. ಆಧ್ಯಾತ್ಮಿಕ ಕ್ಷೇತ್ರದ ಅದ್ಭುತಗಳ ಉಲ್ಲೇಖಗಳಿವೆ, ಕನ್ನಡ, ನಾಡ-ನುಡಿ, ಜನರ ಸಕಲ ಶ್ರೇಯೋಭಿವೃದ್ಧಿಯ ಕಳಕಳಿಯ ಜೊತೆ-ಜೊತೆಗೇ ಬಲಿಷ್ಠ ಭಾರತದ ಸಂರಕ್ಷಣೆಯ ಬದ್ಧತೆ ಅಡಗಿದೆ. ಒಬ್ಬ ಜಾಗೃತ ನಾಗರಿಕನಿಗೆ ಬೆಳಕು ತೋರುವ ಅಂಶಗಳಿವೆ. ಒಟ್ಟಾರೆಯಾಗಿ ಸುಂದರ ಮೈಸೂರಿನ ಉಳಿವು-ಬೆಳವಣಿಗೆಗಳ ಪರಿ ಕಲ್ಪನೆಯ ರಾಯಭಾರಿ ನಮಗೆ ಕಾಣಸಿಗುತ್ತಾರೆ. ಕೆಬಿಜಿ ಅವರ ಹೃದಯ ಪ್ರತಿಕ್ಷಣ ಸುಂದರ ಪರಿಸರದ ನೆಮ್ಮದಿಯ ಸಮಾಜಕ್ಕಾಗಿ ತವಕಿಸುತ್ತಿತ್ತು.



ಇತ್ತೀಚೆಗೆ ನಡೆದಂತಹ 'ನಿರ್ಮಲ ನೆನಪು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಡಾ. ಕೆ.ಬಿ.ಗಣಪತಿ ಅವರನ್ನು ಸದರಿ ಪುಸ್ತಕದ ಲೇಖಕರೂ ಆದ ಆರ್. ರಘು ಕೌಟಿಲ್ಯ ಹೂಗುಚ್ಛ ನೀಡಿ ಸ್ವಾಗತಿಸುತ್ತಿರುವುದು.

> "ನನ್ನ ತಂದೆಯ ಸ್ಥಾನದಲ್ಲಿ ನಿಂತು ಮಾರ್ಗದರ್ಶನ ನೀಡುತ್ತಿದ್ದ ಮೈಸೂರು ಪತ್ರಿಕಾ ರಂಗದ 'ಭೀಷ್ಮ' ಡಾ.ಕೆ.ಬಿ.ಗಣಪತಿಯವರ ನಿಧನದ ಸುದ್ದಿ ಆಘಾತ ಉಂಟುಮಾಡಿದೆ. ನನ್ನಲ್ಲಿ ಅನಾಥ ಪ್ರಜ್ಞೆ ಮೂಡಿಸಿದೆ. ಕೆಬಿಜಿ ಅವರ ಪರಿಶ್ರಮದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳು ಕಳೆದ ನಾಲ್ಕೂವರೆ ದಶಕಗಳಿಂದ ಮೈಸೂರು ಸೀಮೆಯ ಕಣ್ಮಣಿಗಳಾಗಿ ಬೆಳಗುತ್ತಿವೆ. ಕೆಬಿಜಿ ಅಗಲಿಕೆ ಅವರ ಅಪಾರ ಅಭಿಮಾನಿ ವಲಯದಲ್ಲಿ ಶೂನ್ಯತೆ ಆವರಿಸಿದೆ. ಅವರ ಕುಟುಂಬದ ನೋವಲ್ಲಿ ನಾನೂ ಸಮಭಾಗಿಯಾಗಿರುವೆ. ಕೆಬಿಜಿ ಎಲ್ಲೂ ಹೋಗಿಲ್ಲ ನಮ್ಮೊಂದಿಗೆ ಇರುತ್ತಾರೆ. ದಿನವೂ 'ಸ್ಟಾರ್'-'ಮಿತ್ರ'ನೊಂದಿಗೆ ನಮ್ಮ ಮನೆಗೆ ಬರುತ್ತಾರೆ.


ಆರ್. ರಘು ಕೌಟಿಲ್ಯ

ಗಣ್ಯರಿಂದ ಕೆಬಿಜಿ ಸ್ಮರಣೆ

ಮೈಸೂರು,ಜು.13(ಪಿಎಂ)– ಹಿರಿಯ ಪತ್ರಕರ್ತರೂ ಆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರ (ಕೆಬಿಜಿ) ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಗಣ್ಯರು ತಮ್ಮ ಅತೀವ ಸಂತಾಪ ಸೂಚಿಸಿದರು.

ಡಾ.ಕೆ.ಬಿ.ಗಣಪತಿಯವರು (ಕೆಬಿಜಿ) ಸುಮಾರು 50 ವರ್ಷಗಳ ಹಿಂದೆ ಮೈಸೂರು ನಗರದಲ್ಲಿ ಪತ್ರಿಕಾ ರಂಗಕ್ಕೆ ಪಾದಾರ್ಪಣೆ ಮಾಡಿದರು. ಅಂದಿನಿಂದ ಅವರನ್ನು ಹಾಗೂ ಅವರ ಪತ್ರಿಕೆಗಳನ್ನು ನೋಡುತ್ತಾ ಬಂದಿದ್ದೇನೆ. ಮೈಸೂರು ಭಾಗದ ಪತ್ರಿಕಾರಂಗದಲ್ಲಿ ಹೊಸ ಮನ್ವಂತರ ಸೃಷ್ಟಿ ಮಾಡಿದ ಪತ್ರಕರ್ತರು ಕೆಬಿಜಿಯವರು. ಅಂದು 'ಸ್ಟಾರ್ ಆಫ್ ಮೈಸೂರ್' ಬಂದ ನಂತರ ಹೊಸ ಪುಳಕ ಉಂಟಾಗಿ ಮೈಸೂರು ನಗರದ ಜನತೆ ಪತ್ರಿಕೆಯನ್ನು ಅತ್ಯಂತ ಆಸಕ್ತಿಯಿಂದ ವಾಚಿಸುವ ಪರಿಪಾಠ ಬೆಳೆಯುವಂತಾಯಿತು. ಅಂತೆಯೇ ಬೆಳಗ್ಗೆ ಎದ್ದ ಕೂಡಲೇ 'ಮೈಸೂರು ಮಿತ್ರ' ಪತ್ರಿಕೆ ನೋಡುವಂತಹ ಸನ್ನಿವೇಶ ಸೃಷ್ಟಿಯಾಯಿತು. ಆದರೆ ಇಂದು ಅವರ ನಿಧನ ಅತ್ಯಂತ ದುಃಖ ಉಂಟು ಮಾಡಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಸ್ಥರಿಗೆ ಹಾಗೂ ಬಂಧು ಬಳಗಕ್ಕೆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

–ಬಿ.ಕೆ.ಪ್ರಕಾಶ್, ಮಾಜಿ ಮೇಯರ್, ಮೈಸೂರು.



ಅಂದು ಕೆ.ಬಿ.ಗಣಪತಿಯವರು ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆ ಬಳಿಯಲ್ಲಿ ಪತ್ರಿಕೆ ಪ್ರಾರಂಭಿಸಿದರು. ನಮ್ಮ ತೊಣಚಿಕೊಪ್ಪಲು ಹಾಗೂ ಸರಸ್ವತಿಪುರಂ ವ್ಯಾಪ್ತಿಯಲ್ಲಿ ಪತ್ರಿಕಾ ಕಚೇರಿ ತೆರೆದಿದ್ದಾಗ ನಮಗೆಲ್ಲಾ ಅದೊಂದು ರೀತಿಯ ಹೆಮ್ಮೆಯ ವಿಷಯವಾಗಿತ್ತು. ಪತ್ರಿಕಾ ರಂಗಕ್ಕೆ ಅವರ ಸೇವೆ ಅನನ್ಯ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಹಾಗೂ ಅವರ ಕುಟುಂಬದವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ಕರುಣಿಸಲಿ.

–ಟಿ.ಬಿ.ಚಿಕ್ಕಣ್ಣ, ಮಾಜಿ ಮೇಯರ್, ಮೈಸೂರು.

ಕೆ.ಬಿ.ಗಣಪತಿಯವರು ಪತ್ರಿಕಾ ರಂಗದ ದಿಗ್ಗಜರು. ಮೈಸೂರು ಭಾಗದ ಪತ್ರಿಕಾ ರಂಗದಲ್ಲಿ ಅವರೊಬ್ಬ ಸಾರಥಿ. ಅವರು ಇಲ್ಲದೇ ಇರುವುದು ಶೂನ್ಯವನ್ನು ಈ ಭಾಗದ ಪತ್ರಿಕಾ ರಂಗದಲ್ಲಿ ಮೂಡಿಸಿದೆ ಎಂದು ನಾನು ಭಾವಿಸುತ್ತೇನೆ. ರಾಜಕಾರಣಿಗಳು, ಮಹಿಳೆಯರು ಸೇರಿದಂತೆ ಎಲ್ಲಾ ವರ್ಗದವರಿಗೂ ತಮ್ಮ ವೃತ್ತಿಧರ್ಮದಲ್ಲಿ ಸಾಕಷ್ಟು ಅವಕಾಶ ಕಲ್ಪಿಸಿದ್ದಾರೆ. ನಾನು ಜಿಪಂ ಅಧ್ಯಕ್ಷೆಯಾಗಿದ್ದಾಗ ತಮ್ಮ ಪತ್ರಿಕೆಗಳ ಮೂಲಕ ನನಗೆ ಸಾಕಷ್ಟು ಸಹಕಾರ ಹಾಗೂ ಮಾರ್ಗದರ್ಶನ ನೀಡಿದ್ದರು. ಪತ್ರಿಕಾ ರಂಗಕ್ಕೆ ಪಾದಾರ್ಪಣೆ ಮಾಡಲಿಚ್ಛಿಸುವ ಯುವ ಪೀಳಿಗೆ ಮುನ್ನಡೆಯಲು ಒಂದು ಹಾದಿ ನಿರ್ಮಿಸಿಕೊಟ್ಟವರು ಕೆಬಿಜಿ. ಅವರ ಆತ್ಮಕ್ಕೆ ಚಿರಶಾಂತಿ ಕೋರುತ್ತೇನೆ ಮತ್ತು ಅವರ ಕುಟುಂಬ ವರ್ಗ ಹಾಗೂ ಬಂಧು ಮಿತ್ರರಿಗೆ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

–ಡಾ.ಪುಷ್ಪಾ ಅಮರನಾಥ್, ಉಪಾಧ್ಯಕ್ಷರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ.

ಇಂದು ಬಹಳ ದುಃಖದ ದಿನ. ಬೆಳಗ್ಗೆಯೇ ಕೆಬಿಜಿಯವರ ನಿಧನದ ಸುದ್ದಿ ಕೇಳಿ ಮನಸ್ಸಿಗೆ ನೋವು ಉಂಟಾಯಿತು. 1981ರಲ್ಲಿ ನಾನು ಮಹಾಜನ ಶಾಲೆಯಲ್ಲಿ ಓದುತ್ತಿದ್ದಾಗ, ಕೆಬಿಜಿಯವರು ಒಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶೂಟ್ ಧರಿಸಿ ಬಂದಿದ್ದ ಅವರ ನೋಡುವುದೇ ಒಂದು ಖುಷಿಯಾಗಿತ್ತು. ಸ್ನೇಹಿತರೊಟ್ಟಿಗೆ ಅಂಕಲ್ ಎಂದು ಕರೆದು ಮಾತನಾಡಿಸಿದ್ದೆ. ಭವಿಷ್ಯದಲ್ಲಿ ನನ್ನ ಬಗ್ಗೆ ಅಂಕಣದಲ್ಲಿಯೂ ಬರೆದಿದ್ದರು. ನನ್ನ ಬಗ್ಗೆ ಒಂದು ಪುಸ್ತಕ ಬರೆಯುವ ಅಭಿಲಾಷೆ ಇರುವುದಾಗಿ ಅವರೇ ನನಗೆ ತಿಳಿಸಿದ್ದರು. ಆದರೆ ವಿಧಿ ಅವರನ್ನು ಕರೆದುಕೊಂಡಿತು. ಭಗವಂತ ಅವರ ಆತ್ಮಕ್ಕೆ ಶಾಂತಿ ಕೊಡಲಿ.

–ಸ್ನೇಕ್ ಶ್ಯಾಮ್, ಉರಗ ಸಂರಕ್ಷಕರು.

ಪತ್ರಿಕಾ ರಂಗದಲ್ಲಿ ಕೆಬಿಜಿಯವರು ಒಬ್ಬ ಐಕಾನ್. ಇಂಗ್ಲಿಷ್ ಅಥವಾ ಕನ್ನಡವೇ ಆಗಲಿ ಪತ್ರಿಕಾ ರಂಗದಲ್ಲಿ ಅವರು ಒಂದು ರೀತಿಯ ಆಶ್ರಯದಂತೆ ಇದ್ದರು. ಆದರೆ ಅವರ ಅಗಲಿಕೆಯಿಂದ ಅಂತಹ ಶಕ್ತಿ ಇಂದು ಕಳೆದುಕೊಂಡಂತೆ ಆಗಿದೆ. ಇದು ಅತ್ಯಂತ ದುಃಖದ ಸಂಗತಿ.

–ಡಾ.ಎಸ್.ಜಿ.ಒಂಬತ್ಕೆರೆ, ನಿವೃತ್ತ ಮೇಜರ್ ಜನರಲ್.

ಕೆಬಿಜಿ ಎಂದರೆ ಪತ್ರಿಕಾರಂಗದಲ್ಲಿ ದೈತ್ಯ ಶಕ್ತಿ. ಸಾವಿರಾರು ಜನಕ್ಕೆ ಉದ್ಯೋಗ ನೀಡಿದ್ದಾರೆ. ಓದುಗರಿಂದ ಹಿಡಿದು ಪತ್ರಿಕೆಗಳನ್ನು ಮನೆ ಮನೆಗೆ ಹಾಕುವವರಿಗೆ ತುಂಬ ಜನಕ್ಕೆ ಸಹಾಯ ಮಾಡಿದ್ದಾರೆ. ಅವರು ಒಂದು ರೀತಿಯಲ್ಲಿ ಹಿಂದುತ್ವದ ವಾಯ್ಸ್. ಅವರ ಪತ್ರಿಕೆಗಳನ್ನು ಓದಿದರೆ ಆ ಭಾವನೆ ಮೂಡುತ್ತಿತ್ತು ಹೆಸರು 'ಮೈಸೂರು ಮಿತ್ರ'ವಾದರೂ ಅದೊಂದು ಹಿಂದುತ್ವದ ವಾಯ್ಸ್ ರೀತಿಯಲ್ಲಿ ಭಾಸವಾಗುತ್ತಿತ್ತು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಸ್ಥರಿಗೆ ಹಾಗೂ ಬಂಧು ಬಳಗಕ್ಕೆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

–ಟಿ.ಎಸ್.ಶ್ರೀವತ್ಸ, ಶಾಸಕರು.

ಕೆ.ಬಿ.ಗಣಪತಿಯವರು ಕೇವಲ ಪತ್ರಿಕಾರಂಗದಲ್ಲಿ ಮಾತ್ರವಲ್ಲದೇ ಸಾಮಾಜಿಕ ಕಾಳಜಿ ಸಹ ಮೆರೆದಿದ್ದರು. ಬಹುಶಃ ಮೈಸೂರು ಹಾಗೂ ಕೊಡಗು ಜಿಲ್ಲೆಗಳ ಜನತೆ ಅವರನ್ನು ಮರೆಯಲು ಸಾಧ್ಯವಿಲ್ಲ. ಅವರು ಪತ್ರಿಕಾರಂಗಕ್ಕೂ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಎರಡು ಹೆಸರಾಂತ ಪತ್ರಿಕೆಗಳನ್ನು ಉನ್ನತ ಪರಂಪರೆಯಾಗಿ ಕಟ್ಟಿಕೊಟ್ಟಿದ್ದಾರೆ. ಆಡಳಿತ ವರ್ಗದ ತಪ್ಪುಗಳನ್ನು ಪ್ರಶ್ನೆ ಮಾಡುವಂತಹ ಕೆಲವೇ ಹಿರಿಯ ಪತ್ರಕರ್ತರಲ್ಲಿ ಕೆಬಿಜಿ ಸಹ ಒಬ್ಬರಾಗಿದ್ದರು. ಅವರ ಅಗಲಿಕೆ ತುಂಬಲಾರದಂತಹ ನಷ್ಟ.

–ಎ.ಎಸ್.ಪೊನ್ನಣ್ಣ, ಶಾಸಕರು ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ದೇಸಿಂಗು ರಾಜಾ2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಐರಾವತ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಐರಾವತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾಮನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಆರ್‌ಎಫ್‌ಓಗೆ ಮುಖ್ಯಮಂತ್ರಿಗಳ ಚಿನ್ನದ ಪದಕ

ಹೆಚ್.ಡಿ.ಕೋಟೆ, ಜು.13– ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಅಂತರಸಂತೆ ವನ್ಯಜೀವಿ ವಿಭಾಗ ವಲಯ ಅರಣ್ಯಾಧಿಕಾರಿ ಎಸ್.ಎಸ್.ಸಿದ್ದರಾಜು ಅವರಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕ ಲಭಿಸಿದೆ.



ಸಿದ್ದರಾಜು ಅವರು ಅರಣ್ಯ ಸಂರಕ್ಷಣೆಗಾಗಿ ಕೈಗೊಂಡ ಕೆಲಸ ಕಾರ್ಯ, ಅರಣ್ಯ ಭಾಗಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಹಾಗೂ ದಮ್ಮನಕಟ್ಟೆ ಸಫಾರಿ ಕೇಂದ್ರದಲ್ಲಿ ಸಫಾರಿಗೆ ತೆರಳುವವರಿಗೆ ಉತ್ತಮ ಅನು ಕೂಲಗಳನ್ನು ಮಾಡಿಕೊಡುವ ನಿಟ್ಟಿನಲ್ಲಿ ಹಾಗೂ ಇತ್ಯಾದಿ ಕೆಲಸ ಗುರುತಿಸಿ ಮುಖ್ಯಮಂತ್ರಿಗಳ ಚಿನ್ನದ ಪದಕ ಘೋಷಿಸಲಾಗಿದೆ.

ಭಕ್ತರು ಮನೆಗಳಂತೆ ಮಠ, ಗುರುಗಳನ್ನು ಜೋಪಾನ ಮಾಡಿ

ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ

ತಿ.ನರಸೀಪುರ, ಜು.13– ಭಕ್ತರು ತಮ್ಮ ಮನೆಗಳನ್ನು ಎಷ್ಟು ಜೋಪಾನವಾಗಿ ನೋಡಿಕೊಳ್ಳುತ್ತಾರೋ, ಅದೇ ರೀತಿ ಮಠ ಹಾಗೂ ಮಠದ ಗುರುಗಳನ್ನು ಅಷ್ಟೇ ಜೋಪಾನವಾಗಿ ನೋಡಿಕೊಳ್ಳಬೇಕು ಎಂದು ಮುಡುಕುತೊರೆ ಕ್ಷೇತ್ರ ತೋಪಿನ ಮಠದ ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.



ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಪಟ್ಟಣದ ವಾಸವಿ ಮಹಲ್‌ನಲ್ಲಿ ವೀರಶೈವ ಸಮಾಜ ಸೇವಾ ಸಮಿತಿ ಹಮ್ಮಿಕೊಂಡಿದ್ದ ಶ್ರೀಮಹಾದೇವಸ್ವಾಮಿಗಳ 55ನೇ ಸುವರ್ಣ ಸಂಭ್ರಮ ಸಂಸ್ಮರಣೋತ್ಸವ ಮತ್ತು ಶಿವ ಪೂಜಾ ದುರಂಧರ ಶ್ರೀಮಲ್ಲಿಕಾರ್ಜುನ ಸ್ವಾಮಿಗಳ 32 ನೇ ರಜತ ಸಂಭ್ರಮ ಸಂಸ್ಮರಣೋತ್ಸವ ಹಾಗೂ ಸರಳ ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಮಠಗಳು ಸಮಾಜದಲ್ಲಿ ತಮ್ಮದೇ ಆದ ವಿಶೇಷ ಪಾತ್ರ ವಹಿಸುತ್ತಿದ್ದು, ಅವುಗಳಿಂದ ಅನೇಕ ಸಮಾಜಮುಖಿ ಕಾರ್ಯಗಳು ನಡೆಯುತ್ತಿವೆ. ಹಾಗಾಗಿ ಮಠಗಳನ್ನು ಜೋಪಾನ ಮಾಡುವುದು ಸಮಾಜದ ಕರ್ತವ್ಯ ಕೂಡ ಆಗಿದೆ. ಮನೆಗಳಲ್ಲಿ ತಂದೆ ತಾಯಿಯನ್ನು ಮಠಗಳಲ್ಲಿ ಗುರುಗಳನ್ನು, ಹಿರಿಯರನ್ನು ಗೌರವಿಸುವುದು ಬಹುಮುಖ್ಯ ಎಂದರು.

ಮುಡುಕನಪುರ ಹಲವಾರ ಮಠದ ಶ್ರೀಷಡಕ್ಷರ ದೇಶೀಕೇಂದ್ರ ಸ್ವಾಮೀಜಿ ಮಾತನಾಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಸಾನ್ನಿಧ್ಯವನ್ನು ತ್ರೈಂಬಕೇಶ್ವರ ಮಠದ ವೀರೇಶ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಶಾಂತರಾಜು, ಉಪಾಧ್ಯಕ್ಷ ಶಿವಪ್ರಸಾದ್, ಕಾರ್ಯದರ್ಶಿ ಸಿ.ವೀರೇಶ್, ಸಹ ಕಾರ್ಯದರ್ಶಿ ಎಂ.ವೀರೇಶ್, ಖಜಾಂಚಿ ಸಿದ್ದಲಿಂಗಸ್ವಾಮಿ, ತೋಟದಪ್ಪ ಬಸವರಾಜು, ಅಂಗಡಿ ನಾಗೇಶ್, ಶೇಖರ್, ಮೋಹನ್, ಸ್ವಾಮಿ, ಪರಶಿವಮೂರ್ತಿ, ಬಿಜೆಪಿ ಮುಖಂಡ ನಿಶಾಂತ್, ಹೆಳವರಹುಂಡಿ ಮೂರ್ತಿ, ಮೂಗೂರು ಕುಮಾರಸ್ವಾಮಿ, ತೋಂಟೇಶ್, ಪೂಜಿತ್ ಮೆಡಿಕಲ್ ಕುಮಾರ್, ವಕೀಲ ಜ್ಞಾನೇಂದ್ರ ಮೂರ್ತಿ, ಡಣಾಯಕನಪುರ ಮಲ್ಲಣ್ಣ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್ ಸೇರಿದಂತೆ ಮತ್ತಿತರರಿದ್ದರು.

ಸಂಪತ್‌ಕುಮಾರ್ ಭಟ್ ನಿಧನ



ತಿ.ನರಸೀಪುರ, ಜು.13– ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಅರ್ಚಕ ಸಂಪತ್ ಕುಮಾರ್ ಭಟ್(65) ಅವರು ಯಳಂದೂರು ಪಟ್ಟಣದಲ್ಲಿ ಶನಿವಾರ ರಾತ್ರಿ ನಿಧನರಾದರು. ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ 3 ದಶಕಗಳಿಂದಲೂ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದ ಸಂಪತ್ ಕುಮಾರ್ ಭಟ್ ಅವರು ಮೂಲತಃ ಯಳಂದೂರು ಪಟ್ಟಣದವರು. ಅಲ್ಲಿಯೇ ಕಾರ್ಯನಿಮಿತ್ತ ನಡೆದು ಹೋಗುತ್ತಿದ್ದಾಗ ತೀವ್ರ ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದಿದ್ದಾರೆ. ಬಿದ್ದಿದ್ದವರನ್ನು ಆಸ್ಪತ್ರೆಗೆ ಕರೆದೊಯ್ದು ತಪಾಸಣೆಗೊಳಪಡಿಸಿದಾಗ ಸಾವನ್ನಪ್ಪಿರುವುದನ್ನು ವೈದ್ಯರು ದೃಢಪಡಿಸಿದ್ದಾರೆ. ಅವಿವಾಹಿತರಾಗಿದ್ದ ದಿವಂಗತರ ಅಂತ್ಯಕ್ರಿಯೆ ಯಳಂದೂರಿನ ಬ್ರಾಹ್ಮಣರ ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ ನೆರವೇರಿಸಲಾಯಿತು.

ಅಧಿಕಾರಿಗಳು, ಶ್ರೀಮಂತರು ಸಮುದಾಯದ ಮಕ್ಕಳ ಶಿಕ್ಷಣಕ್ಕೆ ನೆರವಾಗಿ

ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು

ನಂಜನಗೂಡು, ಜು.13– ನಾಯಕ ಸಮುದಾಯ ಶೈಕ್ಷಣಿಕವಾಗಿ ಹಿಂದುಳಿದಿದ್ದು, ನಮ್ಮ ಜನಸಂಖ್ಯೆಗೆ ಅನುಗುಣವಾಗಿ ವಿದ್ಯಾವಂತರಿಲ್ಲ. ಆದ ಕಾರಣ ಸಮುದಾಯದ ಉನ್ನತಾಧಿಕಾರಿಗಳು ಮತ್ತು ಶ್ರೀಮಂತರು ಸಮಾಜದ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ನೆರವಾಗಬೇಕು ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು ತಿಳಿಸಿದರು.




ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ತಾಲೂಕು ನಾಯಕರ ಸಂಘದಿಂದ ನಗರದ ಗೌರಿಘಟ್ಟ ಬೀದಿಯಲ್ಲಿರುವ ತಾಲೂಕು ನಾಯಕರ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ನಾಯಕ ಸಮುದಾಯದವರು ಶಿಕ್ಷಣ ಪಡೆಯಲು ಸಾಕಷ್ಟು ಯೋಜನೆ, ಅವಕಾಶಗಳನ್ನು ಕಲ್ಪಿಸಿದೆ. ಆ ಅವಕಾಶಗಳನ್ನು ಬಳಸಿಕೊಂಡು ಸಮುದಾಯದ ಪೋಷಕರು ನಿಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಿಕ್ಷಿತರನ್ನಾಗಿ ಮಾಡಬೇಕು. ಸಮಾಜದ ವಿವಿಧ ರಂಗಗಳಲ್ಲಿ, ಕಲೆ, ಸಿನಿಮಾಗಳಲ್ಲಿ ತೊಡಗಿರುವವರನ್ನು ನಾವು ಗುರ್ತಿಸಿ ಪ್ರೋತ್ಸಾಹ ನೀಡಬೇಕು. ಸಮಾಜದ ಅತಿ ಹೆಚ್ಚು ವಿದ್ಯಾರ್ಥಿಗಳು ಉತ್ತಮ ಅಂಕಗಳಿಸಿ ಸಮಾಜಕ್ಕೆ ಗೌರವ ತಂದಿದ್ದಾರೆ. ಅವರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ತಾಲೂಕು ನಾಯಕ ಸಂಘದಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡಿರುವುದು ಹಾಗೂ ಸಮಾಜ ಸೇವೆಯಲ್ಲಿ ನಿರತರಾದ ವಿವಿಧ ರಂಗಗಳ ಗಣ್ಯರನ್ನು ಗೌರವಿಸಿರುವುದು ಉತ್ತಮ ಬೆಳವಣಿಗೆ ಎಂದರು.

ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಮಾತನಾಡಿ, ಶೋಷಿತ ಸಮಾಜಗಳು ಸಮಾಜದ ಮುಖ್ಯವಾಹಿನಿಗೆ ಬರಲು ಶಿಕ್ಷಣ ಒಂದೇ ಪ್ರಮುಖ ಅಸ್ತ್ರ. ಆದ್ದರಿಂದ ಪೋಷಕರು ಕಡ್ಡಾಯವಾಗಿ ನಿಮ್ಮ ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಬೇಕು. ಬಡವರು ಮತ್ತು ರೈತಾಪಿ ವರ್ಗದ ವಿದ್ಯಾರ್ಥಿಗಳು ನಿಮ್ಮ ತಂದೆ ತಾಯಿಗಳು ನಿಮಗೆ ಶಿಕ್ಷಣ ಕೊಡಿಸಲು ಪಡುವ ಕಷ್ಟ ಅರಿತು ವ್ಯಾಸಂಗದಲ್ಲಿ ತೊಡಗಿಕೊಳ್ಳಬೇಕು. ಅಲ್ಲದೇ ಮುಖ್ಯವಾಗಿ ದುಶ್ಚಟಗಳಿಂದ ದೂರವಿದ್ದು, ಮೊಬೈಲ್ ಬಳಕೆ ಬಿಟ್ಟು, ಶಿಸ್ತು, ಸಮಯ ಪಾಲನೆ, ಕಠಿಣ ಪರಿಶ್ರಮದಿಂದ ಸಾಧನೆಗೆ ಮುಂದಾಗಬೇಕು ಎಂದರು. ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ 72 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.ತಾಲೂಕು ನಾಯಕರ ಸಂಘದ ಅಧ್ಯಕ್ಷ ನಾಗರಾಜು, ಗೌರವಾಧ್ಯಕ್ಷ ಶಿವನಂಜನಾಯಕ, ಕಾರ್ಯದರ್ಶಿ ಶ್ರೀಕಂಠನಾಯಕ, ಖಜಾಂಚಿ ಸುಧೀಂದ್ರ ಇದ್ದರು.

ನಾನು ಸತ್ತಾಗ ನನ್ನ ಮೇಲೆ 'ಲಿಲ್ಲಿ ಫ್ಲವರ್' ತಂದಿಡು ಎಂದಿದ್ದರು!

ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭ ಸಂಜಯ್ ಅರಸ್ ಕಂಬನಿ



ಮೈಸೂರು ಸಾಹಿತ್ಯ ಸಂಭ್ರಮ 8ನೇ ಆವೃತ್ತಿಯಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರೊಂದಿಗೆ ಹಿರಿಯ ಪತ್ರಕರ್ತ ಗೌರಿ ಸತ್ಯ, ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭ ಸಂಜಯ್ ಅರಸ್ ಅವರನ್ನು ಕಾಣಬಹುದು.

ಮೈಸೂರು, ಜು.13(ಎಂಕೆ)– ನಾನು ಸತ್ತಾಗ ನನ್ನ ಮೇಲೆ 'ಲಿಲ್ಲಿ ಫ್ಲವರ್' ತಂದಿಡು... 'ಮೈಸೂರು ಸಾಹಿತ್ಯ ಸಂಭ್ರಮ'ದ 10ನೇ ಆವೃತ್ತಿಯನ್ನು ಇನ್ನಷ್ಟು ದೊಡ್ಡಮಟ್ಟದಲ್ಲಿ ಆಯೋಜಿಸು... ನನ್ನ ಪುಸ್ತಕ(ದಿ ಹಿಡನ್ ಲೈಫ್ ಆಫ್ ಎ ಯೋಗಿ)ವನ್ನು ಪ್ರಮೋದಾದೇವಿ ಒಡೆಯರ್ ಅವರಿಂದಲೇ ಬಿಡುಗಡೆ ಮಾಡಿಸು ಎಂದಿದ್ದ ಕೆ.ಬಿ.ಗಣಪತಿ(ಕೆಬಿಜಿ) ಅವರ ಮಾತುಗಳನ್ನು ನೆನೆದು ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭ ಸಂಜಯ್ ಅರಸ್ ಭಾವುಕರಾದರು.

ಕಳೆದ ಏ.19 ರಂದು ಸ್ನೇಹಿತರ ಕಾರ್ಯಕ್ರಮವೊಂದರಲ್ಲಿ ಶುಭ... ನಾನು ಸತ್ತಾಗ ನನ್ನ ಎದೆಯ ಮೇಲೆ 'ಲಿಲ್ಲಿ ಫ್ಲವರ್' ತಂದಿಡು ಎಂದಿದ್ದರು. ಆಗ ನಾನು ನೀವು ಎಲ್ಲಿ ಹೋಗ್ತಿರಾ.. ಇಲ್ಲೇ ಇರ್ತಿರಾ ಅಂದಿದ್ದೆ. ಆದರೆ, ಇವತ್ತು ಕೆಬಿಜಿ ಅವರು ನಮ್ಮನ್ನು ಅಗಲಿದ್ದಾರೆ ಎಂದು ಕಣ್ಣೀರಾದರು.

2017ರಲ್ಲಿ ಮೈಸೂರಿನಲ್ಲಿ ಸಾಹಿತ್ಯ ಸಂಭ್ರಮ ಆಯೋಜಿಸುವಾಗ ಯಾವ ರೀತಿ ಕಾರ್ಯಕ್ರಮ ಆಯೋಜನೆ ಮಾಡಬೇಕು ಎಂದು ಸಲಹೆ ಕೇಳಿದ್ದಾಗ ನನ್ನ ತಾತ ಜಯದೇವ ರಾಜೇ ಅರಸ್ ಸಂಕ್ರಾಂತಿ ಪತ್ರಿಕೆ ನಡೆಸುತ್ತಿದ್ದ ವಿಷಯ ತಿಳಿದು ಆತ್ಮೀಯತೆಯಿಂದ ಸಾಹಿತ್ಯ ಸಂಭ್ರಮಕ್ಕೆ ಮಾರ್ಗದರ್ಶನ ನೀಡಿದ್ದರು.

ಸಂಪನ್ಮೂಲ ವ್ಯಕ್ತಿಗಳನ್ನು ಕರೆಸುವ ಬಗ್ಗೆಯೂ ಸಲಹೆ ನೀಡುತ್ತಿದ್ದರು. ಮೈಸೂರಿನ ಜನತೆಗೆ ಸಾಹಿತ್ಯ ಸಂಭ್ರಮವನ್ನು ಅರ್ಥ ಮಾಡಿಸಬೇಕು. ಓದುವ ಅಭ್ಯಾಸವನ್ನು ಜನರಲ್ಲಿ ಬೆಳೆಸಬೇಕು ಎಂದಿದ್ದರು. ಕಳೆದ ಜೂ.10 ರಂದು ಕರೆ ಮಾಡಿ 9ನೇ ಆವೃತ್ತಿಯ ಸಾಹಿತ್ಯ ಸಂಭ್ರಮದ ಮಾಹಿತಿ ಪಡೆದಿದ್ದರಲ್ಲದೆ ಅವರ ಕೃತಿಯನ್ನು ಬಿಡುಗಡೆ ಮಾಡಿಸಬೇಕು ಎಂದಿದ್ದರು. ಅವರು ಹೇಳಿದಂತೆಯೇ 9ನೇ ಆವೃತ್ತಿ ಸಾಹಿತ್ಯ ಸಂಭ್ರಮದ ಉದ್ಘಾಟನೆ ವೇಳೆಯೇ 'ದಿ ಹಿಡನ್ ಲೈಫ್ ಆಫ್ ಎ ಯೋಗಿ' ಕೃತಿ ಬಿಡುಗಡೆ ಮಾಡಲಾಯಿತು ಎಂದು ತಿಳಿಸಿದರಲ್ಲದೆ ತಮ್ಮ ತಾತ ಜಯದೇವ ರಾಜೇ ಅರಸ್ ಅವರೊಂದಿಗೆ ಕೆಬಿಜಿ ಅವರು ಪ್ರತಿಭಟನೆಯೊಂದರಲ್ಲಿ ಭಾಗವಹಿಸಿರುವ ಛಾಯಾಚಿತ್ರವನ್ನು ಹಂಚಿಕೊಂಡರು.

IN THE COURT OF THE PRINCIPAL DISTRICT & SESSION JUDGE AT MYSORE
COMMERCIAL O.S. NO. 18 / 2024

Plaintiff : Canara Bank
V/s
Defendant : Sri. Malai Mahadeshwara Shree Shakthi Swasahaya Sanga.
Represented by Smt. Triveni.K.V & Smt. Saroja.M

PUBLICATION

My Client **CANARA BANK,** Vivekanda Nagara Branch, Mysore, filed the above Case **COMMERCIAL, O.S. NO. 18/2024** against you of Defendant. **Sri. Malai Mahadeshwara Shree Shakthi Swasahaya Sanga.** Represented by **Smt. Triveni.K.V & Smt. Saroja.M, office at No. 8, 6th Cross, 11th Block, SBM colony, Srirampura 2nd Stage, Mysore-570023,** before the Principal District & Session Judge at Mysore and pray for recovery of money of you Sri. Malai Mahadeshwara Shree Shakthi Swasahaya Sanga. Represented by Smt. Triveni K.V & Smt. Saroja.M

The Hon'ble Principal District & Session Judge, Mysore, was issued the Suit Summons to Defendant of you, but the Suit Summons was not served since your evaded. Further the Hon'ble court has ordered issue of Suit Summons to Defendant of you, by way of Registered post and neither has it not been served since your evading. hence Hon'ble Principal District & Session Judge, Mysore issued the Paper Publication for Suit Summons to Defendant of you.

Hence the Hon'ble Principal District & Session Judge, Mysore, posted for above mentioned case to appearance of you, hence you or your council appear before Hon'ble Principal District & Session Judge at Mysore on **18/08/2025** at 11.00 A.M & filed objection if any other wise the court consider to exparty order.

Advocate for Plaintiff
D.B. Praveen. B.A.L.L.B. Advocate
KAR 2085/2007, #178/1, 1st Floor,
11th Main, 5th Cross, Near Javaregowda Park, Saraswathipuram, Mysore.

By Order of the Court
Sd- Chief Administrative Officer
District & Session Court, Mysore